Editor: NITYANANDASWAMI Publisher: U. BASAVARAJA

RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ


ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ 16 | ಸಂಚಿಕೆ 23 | ಮೇ 30–ಜೂನ್ 5, 2022 | ಪುಟ 16 | ರೂ.10/-

Volume: 16 Issue: 23 May 30-June 5, 2022 Pages: 16 Price: 10/-

https://janashakthi.wordpress.com e-mail : js_weekly@yahoo.com



ಶ್ರಮಜೀವಿಗಳ ನಾಯಕ ಶಿವಾಜಿ ಪಟ್ನಾಯಕ್ ಇನ್ನಿಲ್ಲ

ಅಕ್ರಮ ಪಠ್ಯ ಪರಿಷ್ಕರಣೆ: ಸಂವಿಧಾನ ವಿರೋಧಿ ಮೌಲ್ಯಗಳಿಗೆ ಮಣೆ



ದಾವೋಸ್ ಶೃಂಗ ಸಭೆ: ತಂದಿದ್ದು ಬಂಡವಾಳವೋ, ಭರವಸೆಗಳ ಭ್ರಮೆಯೋ?





ಪೂಜಾ ಸ್ಥಳಗಳ ಕಾನೂನನ್ನು ದೃಢವಾಗಿ ಜಾರಿ ಮಾಡಿ

ರಾಜ್ಯಗಳು ತೈಲದ ತೆರಿಗೆ ಕಡಿತ ಮಾಡಲು ಏಕೆ ಹಿಂಜರಿಯುತ್ತಿವೆ?





ನ್ಯಾಟೋ ಸದಸ್ಯತ್ವಕ್ಕೆ ಸ್ವೀಡನ್, ಫಿನ್ ಲ್ಯಾಂಡ್ ಅರ್ಜಿ: ಕಾರಣ ಮತ್ತು ಪರಿಣಾಮಗಳೇನು?



ಶ್ರಮಜೀವಿ ವರ್ಗದ ನಾಯಕ

ಕಾಂ. ಶಿವಾಜಿ ಪಟ್ನಾಯಕ್ ನಿಧನ

ಒಡಿಶಾದ ಹಿರಿಯ ಸಿಪಿಐ(ಎಂ) ನಾಯಕ ಶಿವಾಜಿ ಪಟ್ನಾಯಕ್ ಮೇ 23, 2022 ರಂದು ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು. ಅವರು ಪಕ್ಷದ ಕೇಂದ್ರ ಸಮಿತಿಯ ಮಾಜಿ ಸದಸ್ಯರಾಗಿದ್ದರು ಮತ್ತು ಅದರ ಒಡಿಶಾ ರಾಜ್ಯ ಸಮಿತಿಯ ಮಾಜಿ ಕಾರ್ಯದರ್ಶಿಯೂ ಆಗಿದ್ದರು.

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿದ ಶಿವಾಜಿ ಪಟ್ನಾಯಕ್ ಅವರು ಚಿಕ್ಕ ವಯಸ್ಸಿನಲ್ಲಿಯೇ ವಿದ್ಯಾರ್ಥಿ ಚಳುವಳಿ ಮತ್ತು ಅವಿಭಜಿತ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದರು ಮತ್ತು ಶೀಘ್ರದಲ್ಲೇ ಅವಿಭಜಿತ ಸಿಪಿಐನ ರಾಜ್ಯ ಕಾರ್ಯಕಾರಿ ಮಂಡಳಿಗೆ ಆಯ್ಕೆಯಾದರು. 1964 ರಲ್ಲಿ ಪಕ್ಷವು ವಿಭಜನೆಯಾದಾಗ, ಅವರು ಸಿಪಿಐ(ಎಂ) ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಅವರು 1972 ರಿಂದ 1990 ರವರೆಗೆ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು, 1978ರಲ್ಲಿ ಪಕ್ಷದ 10 ನೇ ಮಹಾಧಿವೇಶನದಲ್ಲಿ ಕೇಂದ್ರ ಸಮಿತಿಗೆ ಆಯ್ಕೆಯಾದರು, 1989ರ ವರೆಗೆ ಆ ಸ್ಥಾನದಲ್ಲಿ ಮುಂದುವರೆದರು.

ಅವರು ರಾಜ್ಯದಲ್ಲಿ ರೈತ ಚಳುವಳಿ ಮತ್ತು ಕಾರ್ಮಿಕ ಚಳುವಳಿ ಎರಡರಲ್ಲೂ ಕೆಲಸ ಮಾಡಿದರು. ಒಡಿಶಾದಲ್ಲಿ ಸಿಐಟಿಯು ಸ್ಥಾಪನೆಯಾದಾಗ ಅವರು ಅದರ ಮೊದಲ ಅಧ್ಯಕ್ಷರಾಗಿ ಆಯ್ಕೆಯಾದರು.

ಭುವನೇಶ್ವರ ಕ್ಷೇತ್ರದಿಂದ ಲೋಕಸಭೆಗೆ ಮೂರು ವಿಭಿನ್ನ ಸಂದರ್ಭಗಳಲ್ಲಿ ಆಯ್ಕೆಯಾದ ಅವರು ತಮ್ಮ ಪ್ರಾಮಾಣಿಕತೆ ಮತ್ತು ಸಮಗ್ರತೆಗಾಗಿ ವ್ಯಾಪಕ ಗೌರವಕ್ಕೆ ಪಾತ್ರರಾಗಿದ್ದರು.

ಅವರ ಪತ್ನಿ ಪ್ರತಿಭಾ, ಮೂವರು ಪುತ್ರರು, ಪುತ್ರಿ ಮತ್ತು ಕುಟುಂಬದ ಇತರ ಸದಸ್ಯರಿಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ.

ಸಿಐಟಿಯು ಶ್ರದ್ಧಾಂಜಲಿ

ಒಡಿಶಾ ರಾಜ್ಯ ಸಮಿತಿಯ ಸಂಸ್ಥಾಪಕ ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ಕಾಂ. ಶಿವಾಜಿ ಪಟ್ನಾಯಕ್ ರಾಜ್ಯದ ಎಲ್ಲ ಆರ್ಥಿಕ, ಕೈಗಾರಿಕಾ ಚಲಯಗಳ ಕಾರ್ಮಿಕ ಚಳವಳಿಯ ಹೋರಾಟಗಳನ್ನು ಮತ್ತು ಐಕ್ಯತೆಯನ್ನು ರೂಪಿಸುವಲ್ಲಿ ಮುಂಚೂಣಿ ಪಾತ್ರವನ್ನು ವಹಿಸಿದರು ಎಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ನೆನಪಿಸಿದ್ದಾರೆ.

ನಾಲ್ಕೋ (NALCO) ಖಾಸಗೀಕರಣದ ಕ್ರಮದ ಪ್ರತಿರೋಧದಲ್ಲಿ ಅವರ ನಾಯಕತ್ವದ ಪಾತ್ರವು ಎಂದೆಂದಿಗೂ ಸ್ಮರಣೀಯವಾಗಿದೆ.

ಕಾಂ. ಶಿವಾಜಿ ಪಟ್ನಾಯಕ್ ಅವರು ಹೆಸರಾಂತ ಸಂಸದೀಯ ಪಟುವೂ ಆಗಿದ್ದರು, ಭುವನೇಶ್ವರದಿಂದ ಮೂರು ಬಾರಿ ಚುನಾಯಿತರಾದ ಅವರು ಲೋಕಸಭೆಯಲ್ಲಿಯೂ ದುಡಿಯುವ ಜನರ ಪ್ರಶ್ನೆಗಳನ್ನು ಮತ್ತೆ-ಮತ್ತೆ ಎತ್ತಿದ್ದರು.

ಸಿಐಟಿಯು ಕಾಂ. ಶಿವಾಜಿ ಪಟ್ನಾಯಕ್ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತದೆ, ಅವರ ಕುಟುಂಬ ಸದಸ್ಯರು ಮತ್ತು ಒಡನಾಡಿಗಳಿಗೆ ತನ್ನ ಹೃತ್ಪೂರ್ವಕ ಸಂತಾಪವನ್ನು ತಿಳಿಸುತ್ತದೆ ಮತ್ತು ಅವರ ನೆನಪಿಗೆ ಗೌರವ ನಮನಗಳನ್ನು ಸಲ್ಲಿಸುತ್ತ, ಶ್ರಮಜೀವಿಗಳ ಹೋರಾಟದಲ್ಲಿ ಅವರ ಕೊಡುಗೆಗಳನ್ನು ನೆನಪಿಸಿಕೊಳ್ಳುತ್ತದೆ ಎಂದು ತಪನ್ ಸೇನ್ ಹೇಳಿದ್ದಾರೆ.



ಭಾರತದ ಆಶಾ ಕಾರ್ಯಕರ್ತೆಯರಿಗೆ 'ಗ್ಲೋಬಲ್ ಹೆಲ್ತ್ ಲೀಡರ್ಸ್' ಪ್ರಶಸ್ತಿ

ಅಂತರ್‍ರಾಷ್ಟ್ರೀಯ ಮನ್ನಣೆ ಸಿಕ್ಕಿರುವುದಕ್ಕೆ ಹೆಮ್ಮೆಯಾಗುತ್ತಿದೆ-ಆಶಾ ಕಾರ್ಯಕರ್ತೆಯರ ಸಮನ್ವಯ ಸಮಿತಿ

"10 ಲಕ್ಷ ಮಹಿಳಾ ಆಶಾ ಕಾರ್ಯಕರ್ತೆಯರನ್ನು ಶೋಷಿಸುತ್ತಿರುವ ಮೋದಿ ಸರಕಾರಕ್ಕೆ ನಾಚಿಕೆಯಾಗಬೇಕು"

ವಿಶ್ವ ಆರೋಗ್ಯ ಸಂಘಟನೆ(ಡಬ್ಲ್ಯುಎಚ್‌ಒ) ಮಹಾನಿರ್ದೇಶಕ ಡಾ ಟೆಡ್ರೊಸ್ ಅಧಾನೊಮ್ ಘೆಬ್ರೆಯೆಸಸ್ ಈ ವಾರ ಡಬ್ಲ್ಯುಎಚ್‌ಒ ದ ಆರು 'ಗ್ಲೋಬಲ್ ಹೆಲ್ತ್ ಲೀಡರ್ಸ್' (ಜಾಗತಿಕ ಆರೋಗ್ಯ ನೇತಾರರು) ಪ್ರಶಸ್ತಿಗಳನ್ನು ಪ್ರಕಟಿಸಿದ್ದು ಅವುಗಳಲ್ಲಿ ಒಂದನ್ನು ಭಾರತದ ಹತ್ತು ಲಕ್ಷ ಆಶಾ ಕಾರ್ಯಕರ್ತೆಯರಿಗೆ ನೀಡಿದ್ದಾರೆ, "ಜಗತ್ತು ಅಸಮಾನತೆ, ಸಂಘರ್ಷ, ಆಹಾರ ಅಭದ್ರತೆ, ಹವಾಮಾನ ಬಿಕ್ಕಟ್ಟಿನ ಅಭೂತಪೂರ್ವ ಸಮ್ಮಿಲನವನ್ನು ಎದುರಿಸುತ್ತಿರುವ ಸಮಯದಲ್ಲಿ. ಈ ಪ್ರಶಸ್ತಿಯು ಪ್ರಪಂಚದಾದ್ಯಂತ ಆರೋಗ್ಯವನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಅತ್ಯುತ್ತಮ ಕೊಡುಗೆ ನೀಡಿದವರನ್ನು ಗುರುತಿಸುತ್ತದೆ" ಎಂದು ಇವುಗಳನ್ನು ಪ್ರಕಟಿಸುತ್ತ ಅವರು ಹೇಳಿದ್ದಾರೆ. ಮುಂದುವರೆದು ಅವರು "ಈ ಪ್ರಶಸ್ತಿ ಪುರಸ್ಕೃತರು ಆಜೀವನ ಸಮರ್ಪಣೆ, ಪಟ್ಟುಬಿಡದ ಪ್ರತಿಪಾದನೆ, ಸಮಾನತೆಗೆ ಬದ್ಧತೆ ಮತ್ತು ಮಾನವ ಕುಲಕ್ಕೆ ನಿಸ್ವಾರ್ಥ ಸೇವೆಯ ಸಾಕಾರ ಸ್ವರೂಪರು" ಎಂದು ಹೇಳಿದರು.

ಅಖಿಲ ಭಾರತ ಆಶಾ ಕಾರ್ಯಕರ್ತೆಯರು ಮತ್ತು ಅನುಕೂಲಕರ್ತೆಯರ ಸಮನ್ವಯ ಸಮಿತಿ-ಎಐಸಿಸಿಎಡಬ್ಲ್ಯು (ಸಿಐಟಿಯು) ಭಾರತದ ಹತ್ತು ಲಕ್ಷ ಆಶಾ ಕಾರ್ಯಕರ್ತರಿಗೆ ಸಂದಿರುವ ಈ ಪ್ರಶಸ್ತಿಯನ್ನು ಹೆಮ್ಮೆಯಿಂದ ಸ್ವಾಗತಿಸುವುದಾಗಿ ಹೇಳಿದೆ.

ಇದು ದೇಶದ 10 ಲಕ್ಷ ಆಶಾ ಕಾರ್ಯಕರ್ತೆಯರು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಆರೋಗ್ಯ ಸೇವೆಗಳನ್ನು ನಮ್ಮ ದೇಶದ ಸಾಮಾನ್ಯ ಜನರ ಮನೆ ಬಾಗಿಲಿಗೆ ತಲುಪಿಸುತ್ತಿರುವ ನಿಸ್ವಾರ್ಥ ಕಾರ್ಯಕ್ಕೆ ಸಿಕ್ಕಿರುವ ಮನ್ನಣೆ. ಕೋವಿಡ್-19 ಗೆ ಹಲವಾರು ಆಶಾ ಕಾರ್ಯಕರ್ತೆಯರು ತಮ್ಮ ಪ್ರಾಣವನ್ನೇ ಬಲಿ ಕೊಟ್ಟಿದ್ದಾರೆ. ಆದರೆ ಭಾರತ ಸರ್ಕಾರದ ಬಳಿ ಅವರ ಅಂಕಿಅಂಶಗಳು ಸಹ ಇಲ್ಲ. ಅವರ ಕುಟುಂಬಗಳಿಗೆ ಇನ್ನೂ ಕೂಡ ಸರಕಾರದ ಬಹುಪ್ರಚಾರಿತ 50 ಲಕ್ಷ ರೂಪಾಯಿಗಳ ಮರಣ ಪರಿಹಾರ ಇನ್ನೂ ತಲುಪಿಲ್ಲ. ಅವರು ಯಾವುದೇ ಸಹಾಯವನ್ನು ಪಡೆಯಬೇಕಾದರೂ ಸರಕಾರೀ ಕಚೇರಿಗಳಿಗೆ ಅಲೆದಾಡಬೇಕಾಗುತ್ತಿದೆ ಎಂದು ಎಐಸಿಸಿಎಡಬ್ಲ್ಯು ಖೇದ ವ್ಯಕ್ತಪಡಿಸಿದೆ..

ಪ್ರಧಾನಿ ನರೇಂದ್ರ ಮೋದಿ ಅವರು ಆಶಾ ಕಾರ್ಯಕರ್ತೆಯರನ್ನು ಪ್ರಶಸ್ತಿಗಾಗಿ ಶ್ಲಾಘಿಸಿದ್ದು, ಆರೋಗ್ಯವಂತ ಭಾರತವನ್ನು ಖಚಿತಪಡಿಸಿಕೊಳ್ಳುವಲ್ಲಿ ಅವರು ಮುಂಚೂಣಿಯಲ್ಲಿದ್ದಾರೆ ಎಂದು ಹೇಳಿರುವುದು ವಿಪರ್ಯಾಸ ಎಂದಿರುವ ಎಐಸಿಸಿಎಡಬ್ಲ್ಯು, ಮಾಸಿಕ 2000 ರೂ. ಸಂಬಳ ಮತ್ತು ಯಾವುದೇ ಸಾಮಾಜಿಕ ಭದ್ರತೆ ಮತ್ತು ಹೆರಿಗೆ ರಜೆಯೂ ಇಲ್ಲದೆ 24 ಗಂಟೆಗಳ ಕಾಲ ದುಡಿಸಿಕೊಂಡು ಮಾಡುತ್ತಿರುವ ಕ್ರೂರ ಶೋಷಣೆಗಾಗಿ ಅವರು ನಾಚಿಕೆಪಡಬೇಕು ಮತ್ತು ದೇಶದ ಆಶಾ ಕಾರ್ಯಕರ್ತೆಯರ ಕ್ಷಮೆಯಾಚಿಸಬೇಕು ಎಂದು ಲೇವಡಿ ಮಾಡಿದೆ.

ಸಾಂಕ್ರಾಮಿಕ ಸಮಯದಲ್ಲಿ ಸರ್ಕಾರವು ಅವರ ಕೆಲಸದ ಹೊರೆಯನ್ನು ಮತ್ತು ಪ್ರತಿದಿನ ಹೆಚ್ಚಿಸುತ್ತಿತ್ತು. ಆದರೂ ಕೋವಿಡ್ ಇನ್ಸೆಂಟಿವ್ ಹೆಸರಿನ ಕೋವಿಡ್ ಅಪಾಯ ಭತ್ಯೆಯನ್ನು ಕೆಲವು ತಿಂಗಳು ಮಾತ್ರ ಕೊಟ್ಟು ನಂತರ ನಿಲ್ಲಿಸಲಾಗಿದೆ. ಈ ಸಾಂಕ್ರಾಮಿಕದ ಸಮಯದಲ್ಲಿ ಸುರಕ್ಷತಾ ಉಡುಗೆ, ಮಾಸ್ಕ್ ಮತ್ತು ಸ್ಯಾನಿಟೈಜರ್‌ಗಳನ್ನು ಪಡೆಯಲು ಕೂಡ ಆಶಾ ಕಾರ್ಯಕರ್ತೆಯರು ಹೋರಾಟಕ್ಕೆ ಇಳಿಯಬೇಕಾಯಿತು. ಅಲ್ಲದೆ ದೇಶದ ಬಹುತೇಕ ಭಾಗಗಳಲ್ಲಿ ಕಳೆದ ಮೂರರಿಂದ ಐದು ತಿಂಗಳಿಂದ ಅವರಿಗೆ ಸಂಬಳ ಕೊಟ್ಟಿಲ್ಲ.

ಆಶಾ ಕಾರ್ಯಕರ್ತೆಯರು ಸಿಐಟಿಯು ಬ್ಯಾನರ್ ಅಡಿಯಲ್ಲಿ ಮತ್ತು ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯಡಿಯಲ್ಲಿ ಈ ಅವಧಿಯಲ್ಲಿ ಮೂರು ಅಖಿಲ ಭಾರತ ಮುಷ್ಕರಗಳು ಸೇರಿದಂತೆ ಅನೇಕ ಹೋರಾಟಗಳನ್ನು ನಡೆಸಿದ್ದಾರೆ. ಆದರೆ ಬಿಜೆಪಿ ಸರ್ಕಾರ ಆರೋಗ್ಯ ಸೇವೆಗಳನ್ನು ಸುಧಾರಿಸುವ, ಅವರನ್ನು ಖಾಯಂ ಸರ್ಕಾರಿ ನೌಕರರನ್ನಾಗಿ ಮಾಡುವ ಬದಲು ಆರೋಗ್ಯ ಸೇವೆಗಳನ್ನು ಖಾಸಗೀಕರಿಸಿಯೇ ತೀರುತ್ತೇವೆ ಎಂದು ಪಣ ತೊಟ್ಟಂತಿದೆ.

ಆಶಾ ಕಾರ್ಯಕರ್ತೆಯರನ್ನು ಕಾರ್ಮಿಕರಾಗಿ ಖಾಯಂಗೊಳಿಸಬೇಕು, ಅವರಿಗೆ ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನೀಡಬೇಕು ಎಂಬ 45 ನೇ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ದ ಶಿಫಾರಸುಗಳನ್ನು ತಕ್ಷಣವೇ ಜಾರಿಗೆ ತರಬೇಕು ಎಂದು ಭಾರತ ಸರ್ಕಾರವನ್ನು ನಾವು ಒತ್ತಾಯಿಸುತ್ತೇವೆ ಎಂದು ಎಐಸಿಸಿಎಡಬ್ಲ್ಯು ಪರವಾಗಿ ಎ.ಆರ್. ಸಿಂಧು ರವರು ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಲಾಗಿದೆ.

ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಖರೀದಿಸುವಂತೆ ರಾಜ್ಯಗಳ ಮೇಲೆ ಕೇಂದ್ರ ಸರಕಾರದ ಬಲವಂತ: ವಿದ್ಯುತ್ ಇಂಜಿನಿಯರ್‌ಗಳ ಒಕ್ಕೂಟದ ಆರೋಪ

ತಾಪ ವಿದ್ಯುತ್ ಸ್ಥಾವರಗಳಿಗೆ ದೇಶೀಯ ಕಲ್ಲಿದ್ದಲು ಪೂರೈಸುವಲ್ಲಿ ತನ್ನ ಸ್ವಂತ ಅದಕ್ಷತೆಗಳನ್ನು ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರವು ರಾಜ್ಯಗಳ ಅಧಿಕಾರ ವ್ಯಾಪ್ತಿಯನ್ನು ಅತಿಕ್ರಮಿಸುತ್ತಿದೆ ಮತ್ತು ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಖರೀದಿಸುವಂತೆ ಒತ್ತಡ ಹಾಕುತ್ತಿದೆ ಎಂದು ಅಖಿಲ ಭಾರತ ವಿದ್ಯುತ್ ಇಂಜಿನಿಯರುಗಳ ಒಕ್ಕೂಟ (ಎಐಪಿಇಎಫ್) ಆರೋಪಿಸಿದೆ.

ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಈ ತಿಂಗಳ ಆರಂಭದಲ್ಲಿ ವಿದ್ಯುತ್ ಸಚಿವಾಲಯದ ನಿರ್ದೇಶನಗಳು ಕೋಲ್ ಇಂಡಿಯಾ ಲಿಮಿಟೆಡ್(ಸಿಐಎಲ್)ನಿಂದ ಒಣ ಇಂಧನದ ಕೊರತೆಯನ್ನು ಸರಿದೂಗಿಸಲು ಮಿಶ್ರಣವನ್ನು ಹೆಚ್ಚಿಸಲಿಕ್ಕಾಗಿ ದೇಶೀಯ ಕಲ್ಲಿದ್ದಲಿಗೆ ಪೂರಕವಾಗಿ ಕಲ್ಲಿದ್ದಲು ಆಮದು ಮಾಡಿಕೊಳ್ಳಬೇಕೆಂದು ರಾಜ್ಯಗಳಿಗೆ ನಿರ್ದೇಶನ ನೀಡಿದೆ ಎಂದು ಎಐಪಿಇಎಫ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಸಚಿವಾಲಯವು ಎಲ್ಲಾ ಆಮದು ಮಾಡಿಕೊಂಡ ಕಲ್ಲಿದ್ದಲು ಆಧಾರಿತ ವಿದ್ಯುತ್ ಘಟಕಗಳನ್ನು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುವಂತೆ ಹೇಳಿದೆ ಮತ್ತು ದರ ಹೆಚ್ಚಳದ ಪರಿಷ್ಕರಣೆಯನ್ನು ಒಂದು ಸಮಿತಿಯು ಪ್ರಕಟಿಸಲಿದೆ ಎಂದೂ ಹೇಳಿದೆ.

"ಕೇಂದ್ರ ಸರ್ಕಾರವು ರಾಜಗಳ ಅಧಿಕಾರವ್ಯಾಪ್ತಿಯನ್ನು ಅತಿಕ್ರಮಿಸುತ್ತಿದೆ ಮತ್ತು ತಾಪ ವಿದ್ಯುತ್ ಸ್ಥಾವರಗಳಿಗೆ ದೇಶೀಯ ಕಲ್ಲಿದ್ದಲು ಪೂರೈಸುವಲ್ಲಿ ತನ್ನ ಸ್ವಂತ ಅದಕ್ಷತೆಗಳನ್ನು ಮುಚ್ಚಿಕೊಳ್ಳಲು ಆಮದು ಮಾಡಿಕೊಂಡ ಕಲ್ಲಿದ್ದಲನ್ನು ಖರೀದಿಸಲು ಒತ್ತಾಯಿಸುತ್ತಿದೆ" ಎಂದು ಎಐಪಿಇಎಫ್ ವಕ್ತಾರ ವಿ.ಕೆ. ಗುಪ್ತಾ ಆರೋಪಿಸಿದ್ದಾರೆ.

2003 ರ ವಿದ್ಯುತ್ ಕಾಯಿದೆಯ ಸೆಕ್ಷನ್ 11 ಅಡಿಯಲ್ಲಿ ಕೇಂದ್ರ ಸರ್ಕಾರದ ಅಧಿಕಾರವ್ಯಾಪ್ತಿ ಸಂಪೂರ್ಣ ಅಥವಾ ಭಾಗಶಃ ಮಾಲೀಕತ್ವದ ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಮತ್ತು ಅಂತರ-ರಾಜ್ಯ ಉತ್ಪಾದನಾ ಕೇಂದ್ರಗಳಿಗೆ ಮಾತ್ರ ಸೀಮಿತವಾಗಿದೆ, ರಾಜ್ಯ ಸರ್ಕಾರಿ ಸ್ವಾಮ್ಯದ ಉತ್ಪಾದನಾ ಕೇಂದ್ರಗಳಿಗೆ ಸೆಕ್ಷನ್ 11 ರ ಅನ್ವಯದ ವಿಷಯ ರಾಜ್ಯ ಸರ್ಕಾರದ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ ಎಂದು ಗುಪ್ತಾ ವಿವರಿಸಿದರು.

ದೇಶಾದ್ಯಂತ ತಾಪ ವಿದ್ಯುತ್ ಸ್ಥಾವರಗಳಿಗೆ ಸಾಕಷ್ಟು ಪ್ರಮಾಣದ ಕಲ್ಲಿದ್ದಲು ಸಿಗದಿರುವುದು ಕಲ್ಲಿದ್ದಲು, ರೈಲ್ವೆ ಮತ್ತು ವಿದ್ಯುತ್ ಈ ಮೂರು ಸಚಿವಾಲಯಗಳ ನಡುವಿನ ಸಮನ್ವಯದ ಕೊರತೆಯಿಂದಾಗಿ. ಸರ್ಕಾರಗಳ ಮಟ್ಟದಲ್ಲಿ ಕಲ್ಲಿದ್ದಲು ಆಮದು ಮಾಡಿಕೊಳ್ಳುವ ಜವಾಬ್ದಾರಿಯನ್ನು ಕೇಂದ್ರ ಸರ್ಕಾರ ತೆಗೆದುಕೊಳ್ಳಬೇಕು ಮತ್ತು ಆಮದು ಮಾಡಿಕೊಂಡ ಕಲ್ಲಿದ್ದಲು ಚಾಲ್ತಿಯಲ್ಲಿರುವ ಸಿಐಎಲ್ ದರದಲ್ಲಿ ರಾಜ್ಯದ ಉತ್ಪಾದನಾ ಕಂಪನಿಗಳಿಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ಎಐಪಿಇಎಫ್ ಕೇಂದ್ರ ವಿದ್ಯುತ್ ಸಚಿವ ಆರ್.ಕೆ. ಸಿಂಗ್ ಅವರಿಗೆ ಪತ್ರ ಬರೆದಿದೆ.

ಕೇಂದ್ರ ಸರ್ಕಾರದ ನೀತಿ ಲೋಪಗಳಿಂದಾಗಿ ಉಂಟಾಗಿರುವ ಕಲ್ಲಿದ್ದಲು ಕೊರತೆಯನ್ನು ನೀಗಿಸುವ ಹೆಚ್ಚುವರಿ ವೆಚ್ಚವನ್ನು ರಾಜ್ಯಗಳಿಗೆ ಹೊರಿಸಬಾರದು ಎಂದು ಅದು ಹೇಳಿದೆ.

ಎನ್‌ಟಿಪಿಸಿ ನಡೆಸುತ್ತಿರುವ ಕೇಂದ್ರ ಸರ್ಕಾರದ ತಾಪ ವಿದ್ಯುತ್ ಸ್ಥಾವರಗಳ ದರಪಟ್ಟಿಯಲ್ಲಿ 50-70 ಪೈಸೆಗಳಷ್ಟು ಏರಿಕೆಯಾಗುತ್ತದೆ ಮತ್ತು ಅದನ್ನು ವಿದ್ಯುತ್ ಗ್ರಾಹಕರಿಗೆ ವರ್ಗಾಯಿಸಲಾಗುತ್ತದೆ.

ಕೇಂದ್ರದ ನಿರ್ದೇಶನದ ಹೊರತಾಗಿಯೂ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲು ಆಮದು ಮಾಡಿಕೊಳ್ಳದಿರಲು ಉತ್ತರ ಪ್ರದೇಶ ಸರ್ಕಾರ ನಿರ್ಧರಿಸಿದೆ.

ಮುಂಗಾರಿಗೆ ಮೊದಲು ತಾಪ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ದಾಸ್ತಾನು ಹೆಚ್ಚಿಸದಿದ್ದರೆ ಮತ್ತೊಂದು ವಿದ್ಯುತ್ ಬಿಕ್ಕಟ್ಟು ಶೀಘ್ರದಲ್ಲೇ ಬರಬಹುದು ಎಂದು ಗುಪ್ತಾ ಎಚ್ಚರಿಸಿದ್ದಾರೆ.

ಜೂನ್‌ನಲ್ಲಿ ಕಲ್ಲಿದ್ದಲು ಪೂರೈಕೆಯನ್ನು ಸಚಿವಾಲಯವು ಈಗಾಗಲೇ 10-12% ರಷ್ಟು ಕಡಿಮೆ ಮಾಡಿದೆ ಎಂದು ಅದು ಹೇಳಿದೆ.

ಪಂಜಾಬ್ ಮತ್ತು ಹರಿಯಾಣದಲ್ಲಿ, ಜೂನ್ ಮಧ್ಯದಿಂದ ಭತ್ತದ ನಾಟಿಯೊಂದಿಗೆ ನೀರಾವರಿ ಹೊರೆ ಹೆಚ್ಚಾಗುವಾಗ ವಿದ್ಯುತ್ ಬೇಡಿಕೆ ತೀವ್ರವಾಗಿ ಏರುತ್ತದೆ.

ಬಿಸಿ ಮತ್ತು ಆರ್ದ್ರ ವಾತಾವರಣದಿಂದಾಗಿ ಗೃಹ ಬಳಕೆ ಮತ್ತು ಕೈಗಾರಿಕಾ ಬೇಡಿಕೆಯೂ ಹೆಚ್ಚಾಗುತ್ತದೆ.

ಇದಲ್ಲದೆ, ಮುಂಗಾರು ಹಂಗಾಮಿನಲ್ಲಿ ಕಲ್ಲಿದ್ದಲು ಗಣಿಗಳಲ್ಲಿ ಉತ್ಪಾದನೆ ಕಡಿಮೆಯಾಗುತ್ತದೆ ಎಂಬ ಸಂಗತಿಯತ್ತವೂ ಅವರು ಗಮನ ಸೆಳೆದಿದ್ದಾರೆ.

ಮುಖ್ಯಮಂತ್ರಿಗಳು ತಂದಿದ್ದು ಬಂಡವಾಳವ್ರೋ, ಭರವಸೆಗಳ ಭ್ರಮೆಯೋ?

ದಾವೂಸ್ ನ ವಿಶ್ವ ಬಂಡವಾಳ ಹೂಡಿಕೆ ಶೃಂಗ ಸಭೆ ಮುಗಿಸಿ ಬಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಮುರುಗೇಶ್ ನಿರಾಣಿಯವರು ಕರ್ನಾಟಕಕ್ಕೆ ಹರಿದು ಬರಲಿರುವ ಭವಿಷ್ಯದ ಬಂಡವಾಳದ ಗಂಟನ್ನು ಬಿಚ್ಚಿಟ್ಟಿದ್ದಾರೆ. ನವ ಕರ್ನಾಟಕದ ನಿರ್ಮಾಣದ ಘೋಷಣೆಗೆ ಈ ಹೂಡಿಕೆ ಭರವಸೆ ಪೂರಕವೆಂದೂ ನಂಬಿಸುತ್ತಿದ್ದಾರೆ.

ರಾಜ್ಯಕ್ಕೆ ಎಷ್ಟು ವಿದೇಶಿ ಬಂಡವಾಳವನ್ನು ಹಿಡಿದು ತರಲಾಗುವುದು ಎನ್ನುವುದೇ ಅಭಿವೃದ್ಧಿ ಸಾಮರ್ಥ್ಯದ ಮಾನದಂಡಕ್ಕೆ ಆಧಾರ ಎಂದು ವಾದಿಸಲಾಗುತ್ತಿದೆ. ಆಂತರಿಕ ಉತ್ಪತ್ತಿ, ಜನರ ಕೊಳ್ಳುವ ಶಕ್ತಿಯ ಬೆಳವಣಿಗೆ, ಮಾರುಕಟ್ಟೆಯ ವಿಸ್ತರಣೆ, ವಿತರಣೆ, ಮಾನವ ಅಭಿವೃದ್ದಿ ಯಂತಹ ಅಂಶಗಳು ಅಭಿವೃದ್ದಿಯ ಮಾನದಂಡದ ಪ್ರಮುಖ ಅಂಶಗಳು ಎಂಬುದು ಮರೆಸಲಾಗುತ್ತಿದೆ. ಹೀಗಾಗಿ ಪ್ರತಿ ಮುಖ್ಯಮಂತ್ರಿಯೂ ತನ್ನ ಅವಧಿಯಲ್ಲಿ ಎಷ್ಟು ಬಂಡವಾಳ ಹರಿದು ಬಂತು ಮತ್ತು ಅದನ್ನು ಹಿಡಿದು ತರುವಲ್ಲಿ ಹೇಗೆ ಬೇರೆಯವರಿಗಿಂತ ತಾವು ಸಮರ್ಥರು ಎನ್ನುವುದನ್ನು ಹೆಗ್ಗಳಿಕೆಯಾಗಿ ಹೇಳಿಕೊಳ್ಳುವುದು ಪರಿಪಾಠವಾಗಿದೆ.

ಆದರೆ ಸರಕಾರವೇ ನೀಡಿರುವ ಮಾನವ ಅಭಿವೃದ್ದಿ ಸೂಚ್ಯಂಕದ ವರದಿ ತೆರೆದಿಟ್ಟಿರುವ ಸತ್ಯಗಳನ್ನು ಮರೆಸಿಯೇ ಇವರೆಲ್ಲಾ ಮಾತನಾಡುತ್ತಾರೆ. ವಾಸ್ತವದಲ್ಲಿ ಭಾರತದ ಮತ್ತು ಕರ್ನಾಟಕದ ಆರ್ಥಿಕತೆಯನ್ನು ಅದಃಪತನದ ಕೂಪದಿಂದ ಮೇಲೆತ್ತಲು ಮಾಡಬೇಕಾದುದೇನು ಎನ್ನುವುದರತ್ತ ನಿಜ ಕಾಳಜಿಯ ಚಿಂತನೆಗಳಿರಬೇಕು. ಆದರೆ ಅದೇ ಇಲ್ಲವಾಗಿದೆ.

ಈಗ ಸುಮಾರು ಒಂದು ಲಕ್ಷ ಕೋಟಿ ರೂಗಳ ಬಂಡವಾಳ ಬರಲಿದ್ದು ಅದು ಮುಂದಿನ ನವೆಂಬರ್ ತಿಂಗಳಲ್ಲಿ ರಾಜ್ಯದಲ್ಲಿ ನಡೆಯುವ ಶೃಂಗ ಸಭೆಯಲ್ಲಿ ಖಚಿತ ಸ್ವರೂಪವನ್ನು ಪಡೆಯಲಿದೆ ಎಂದು ಬೃಹತ್ ಕೈಗಾರಿಕಾ ಸಚಿವರು ಹೇಳಿದ್ದಾರೆ. ಇಂತಹ ಬಂಡವಾಳ ಅಭಿವೃದ್ದಿಯ ಅನಿವಾರ್ಯ ಅಂಶವಾಗಿರುವುದು ಒಂದು ವಾಸ್ತವ. ಈ ಬಂಡವಾಳದ ಆಗಮನವೂ ಸಹ ಉದ್ಯಮಿಗಳಿಗೆ ಯಾವ ಸೌಲಭ್ಯ, ರಿಯಾಯಿತಿ, ಮೂಲ ಸೌಕರ್ಯಗಳನ್ನು ನೀಡಲಿದೆ, ಅವರ ಸೂಪರ್ ಲಾಭಕ್ಕೆ ಮುಕ್ತಾವಕಾಶ ಕಲ್ಪಿಸಲಿದೆ ಎನ್ನುವುದನ್ನೂ ಆಧರಿಸಿರುತ್ತದೆ. ಬಂಡವಾಳ ಹೂಡಿಕೆದಾರರನ್ನು ಮೆಚ್ಚಿಸಲು ದುಡಿಯುವ ನೌಕರರು, ಕಾರ್ಮಿಕರ ರಕ್ತ ಹೀರಲು ಸರಕಾರ ಎಷ್ಟು ಅವಕಾಶ ಒದಗಿಸಿ ಕೊಡಲಿದೆ ಎಂಬುದನ್ನೂ ಇದು ಆವಲಂಬಿಸಿರುತ್ತದೆ. ಈ ಸ್ಪರ್ದೆಯಲ್ಲಿ ವಿವಿಧ ರಾಜ್ಯಗಳು ಪೈಪೋಟಿಯನ್ನೂ ನಡೆಸುತ್ತವೆ. ಇಂತಹ ಹೂಡಿಕೆ ಮತ್ತು ಸವಲತ್ತುಗಳ ಒಪ್ಪಂದಗಳು ಅಧಿಕಾರದಲ್ಲಿರುವವರಿಗೆ ಲಾಭ ತರುವ ವ್ಯವಹಾರವೂ ಆಗಿರುತ್ತದೆ. ಮೂಲ ಸೌಕರ್ಯಗಳನ್ನು ನಿರ್ಮಿಸುವ ಗುತ್ತಿಗೆ ಅಥವಾ ಅದನ್ನು ವ್ಯವಸ್ಥೆಗೊಳಿಸುವುದರತ್ತ ಅವಕಾಶ ನೀಡಿಕೆ ರಿಯಲ್ ಎಸ್ಟೇಟ್, ನಿರ್ಮಾಣದಂತಹ ಸಾವಿರಾರು ಕೋಟಿಗಳ ನೆಚ್ಚಿಕೆಯ ವ್ಯವಹಾರವೂ ಆಗಿರುತ್ತದೆ.

ದಾವೋಸ್ ನಿಂದ ಹಿಂತಿರುಗಿದ ಬಳಿಕ ವಿಧಾನ ಸೌದಧದಲ್ಲಿನ ಮಾದ್ಯಮಗೋಷ್ಠಿಯಲ್ಲಿ ಮುಖ್ಯಮಂತ್ರಿ ಬೊಮ್ಮಾಯಿಯವರು 60 ಸಾವಿರ ಕೋಟಿ ಹೂಡಿಕೆಯ ಭರವಸೆ ಸಿಕ್ಕಿದೆ ಎಂದರೆ ವಿಮಾನ ನಿಲ್ದಾಣದಲ್ಲಿ ಕೈಗಾರಿಕ ಸಚಿವ ಮುರುಗೇಶ ನಿರಾಣಿಯವರು ಒಂದು ಲಕ್ಷ ಕೋಟಿ ಇನ್ನೊಂದೆಡೆ ಐದು ಲಕ್ಷ ಕೋಟಿ ರೂ.ಗಳ ವಿದೇಶಿ ಬಂಡವಾಳ ಹೂಡಿಕೆ ಆಗಲಿದೆ ಎಂದು ಹೇಳಿರುವುದು ನಿಜವಾಗಿ ಸಿಕ್ಕ ಭರವಸೆ ಎಷ್ಟು ಎನ್ನುವುದರ ಬಗ್ಗೆ ಅನುಮಾನ ಹುಟ್ಟಿಸಿದೆ. ಕರ್ನಾಟಕ ಉದ್ಯಮ ಸ್ನೇಹಿ, ಬೆಳವಣಿಗೆಗೆ ಉತ್ತಮ ವಾತಾವರಣ ಹೊಂದಿರುವುದು ಗಮನ ಸೆಳೆದಿದೆ ಎನ್ನುವ ಅವರ ಮಾತನ್ನೂ ರಾಜ್ಯದಲ್ಲಿನ ಅಶಾಂತಿ, ಅರಾಜಕತೆಯ ವಿದ್ಯಾಮಾನಗಳ ಹಿನ್ನೆಲೆಯಲ್ಲಿಯೇ ಪರಿಶೀಲಿಸಬೇಕು. ರಾಜ್ಯದ ಹಿರಿಯ ಉದ್ಯಮಿಗಳು ಇಂದಿರುವ ದ್ವೇಷದ ವಾತಾವರಣ ಹೂಡಿಕೆದಾರರಿಗೆ ವಿಶ್ವಾಸ ಹುಟ್ಟಿಸಲಾರದು ಎಂದು ಹೇಳಿದ್ದನ್ನು ಸುಲಭವಾಗಿ ತಳ್ಳಿ ಹಾಕುವಂತಿಲ್ಲ. ಆ ಸನ್ನಿವೇಶವನ್ನು ನಿರಾಕರಿಸಲು ಮುಖ್ಯಮಂತ್ರಿಗಳು, ಸಚಿವರು ಯತ್ನಿಸುತ್ತಿದ್ದಾರೆಯೇ ಎನ್ನುವುದೂ ಗಂಭೀರವಾಗಿ ಕಾಡುತ್ತದೆ. ಖಂಡಿತಕ್ಕೂ ಹೂಡಿಕೆ, ಉದ್ಯಮದ ಬೆಳವಣಿಗೆ ಬೇಕು. ಅದರ ಪ್ರಯೋಜನ ನಾಡಿನ ನಿರುದ್ಯೋಗಿ ಯುವಜನರಿಗೆ, ಶ್ರಮಿಕರಿಗೆ ಸಿಗಬೇಕು. ಉದ್ಯಮ ಸ್ನೇಹಿ ವಾತಾವರಣದ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರುವ ಸರಕಾರ ದುಡಿಯುವವರ ಸ್ನೇಹಿಯಾಗಿಯೂ ಇರಬೇಕಾದುದು ಪ್ರಾಥಮಿಕ ಅವಶ್ಯಕ. ಹೂಡಿಕೆಯಿಂದ ಸ್ಥಳೀಯರಿಗೆ ಉದ್ಯೋಗ ಸಿಗಲಿದೆ ಎಂಬ ಸಚಿವರ ಮಾತುಗಳೂ ಗಾಳಿ ಮೇಲೆ ತೇಲಿಸಿದ ಹುಸಿ ಭರವಸೆ ಆಗುವ ಲಕ್ಷಣಗಳು ಸ್ಪಷ್ಟವಾಗಿವೆ. ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ಕೊಡುವ ಸ್ಪಷ್ಟ ನೀತಿ ಮತ್ತು ಅದರ ಜಾರಿಯ ಬದ್ಧತೆ ಮಾರ್ಗಗಳೂ ಖಚಿತ ಇದ್ದಾಗಲೇ ಕಾರ್ಯ ಸಾಧ್ಯ. ಅಂತಹ ಯಾವ ಒಂದು ಸಣ್ಣ ಅಂಶದ ನೀತಿ ನಿರ್ದೇಶನವನ್ನು ಸರಕಾರ ತೋರಿಲ್ಲ. ಕೈಗಾರಿಕೋದ್ಯಮಿಗಳಿಗೆ ಲಂಗು ಲಗಾಮು ಇಲ್ಲದಂತೆ ವರ್ತಿಸಲು ಬಿಟ್ಟು, ಸ್ಥಳಿಯರನ್ನು ದೂರ ಇಟ್ಟು ಉಳಿದವರನ್ನೂ ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ತೊಡಗಿಸಿ ಹೊಣೆಯೇ ಇಲ್ಲದಂತೆ ವರ್ತಿಸುತ್ತಿರುವ ದಬ್ಬಾಳಿಕೆಯ ಹಲವು ಹತ್ತು ನಿದರ್ಶನಗಳಿವೆ. ಜಿಂದಾಲ್ ಕಂಪನಿಯ ದುಷ್ಟ ಆಡಳಿತದಿಂದಾಗಿ ಸ್ಥಳೀಯ ರೈತರು, ಕೂಲಿಕಾರ ಬಡವರು ತ್ಯಾಜ್ಯ ಕಿಟ್ಟದಲ್ಲಿ ಕಬ್ಬಿಣ ಚೂರು ಆರಿಸಲು ಹೋಗಿ ದುರಂತ ಸಾವನ್ನಪ್ಪಿರುವುದು ಕಣ್ಣೆದುರಿಗಿರುವುದು ಇತ್ತೀಚಿನ ಉದಾಹರಣೆ. ಆದ್ದರಿಂದ ಸ್ಥಳೀಯರಿಗೆ ಉದ್ಯೋಗ ಕೊಡುವ ಬದ್ಧಯೆಯಿಲ್ಲದ ಮಾತುಗಳು ಸಾರ್ವಜನಿಕರ ಕಣ್ಣಿಗೆ ಮಣ್ಣೆರೆಚುವ ವರಸೆಗಳಾಗಿ, ಜನದ್ರೋಹಿಯಾಗಿವೆ. ಈ ವಾಸ್ತವದ ಹಿನ್ನೆಲೆಯಲ್ಲಿ ಬೊಮ್ಮಾಯಿಯವರು ನುಡಿದಂತೆ ನಡೆದು ಬದ್ಧತೆ, ಪ್ರಾಮಾಣಿಕತೆ ತೋರಬೇಕು.

ಮೇಲಾಗಿ, ಸಾವಿರಾರು ಅಥವಾ ಲಕ್ಷ ಕೋಟಿಗಳ ಹೂಡಿಕೆ ನಿಜವಾಗುವುದು ಹೂಡಿಕೆ ಮಾಡಿದ ಮೇಲಷ್ಟೇ ಎನ್ನುವುದು ದಶಕಗಳ ಅನುಭವ. ವಿಶ್ವ ಆರ್ಥಿಕ ವೇದಿಕೆಯಲ್ಲಿ ದೊರೆತ ಭರವಸೆಯ ಒಂದು ಸಣ್ಣ ಪಾಲು ಮಾತ್ರ ರಾಜ್ಯಕ್ಕೆ ಬಂದಿರುವುದೇ ವಾಸ್ತವ. ದೇವೇಗೌಡ, ಎಸ್.ಎಂ. ಕೃಷ್ಣ, ಯಡಿಯೂರಪ್ಪ, ಶೆಟ್ಟರ್, ಸಿದ್ದರಾಮಯ್ಯ, ಕುಮಾರಸ್ವಾಮಿಯವರ ಆಡಳಿತದಲ್ಲಿಯೂ ಆಗಿರುವುದು ಇದೇ. ಆದ್ದರಿಂದ ವಿದೇಶಿ ಹೂಡಿಕೆಯ ವರ್ಣ ರಂಜಿತ ಚಿತ್ರ 2023 ರ ಚುನಾವಣೆಯನ್ನು ಕಣ್ಣಲ್ಲಿರಿಸಿ ನೀಡುವ ಹೇಳಿಕೆ ಆಗಬಾರದು.

ಇಂತಹ ಹೊರಗಿನಿಂದ ಬರುವ ಹೂಡಿಕೆಯಿಂದಲೇ ರಾಜ್ಯ ಅಭಿವೃದ್ಧಿ ಆಗುವುದು ಎನ್ನುವ ಭ್ರಮೆ ಸೃಷ್ಟಿಸುವುದೂ ಸಹ ಅಕ್ಷಮ್ಯ ಅಪರಾಧ. ಸ್ಥಳೀಯ, ಆಂತರಿಕ ಉತ್ಪಾದನೆ, ಆರ್ಥಿಕ ಬೆಳವಣಿಗೆಯ ಜನಪರ ಪರ್ಯಾಯ ಹಾದಿಯೇ ಮುಖ್ಯ. ಇಲ್ಲವಾದರೆ ಸೃಷ್ಟಿಯಾಗುವುದು ಉದ್ಯೋಗ, ಉಜ್ವಲ ಭವಿಷ್ಯ ಅಲ್ಲ, ಭ್ರಮೆಗಳ ಗೊಂಚಲು ಅಷ್ಟೇ.

ಅನುಕೂಲಸಿಂಧು ರಾಜಕಾರಣದಲ್ಲಿ ಒಂದಾದವರು, ಬಿಸಿ ಉಸಿರು ಬಿಡಲಾಗದ ಬಿ.ಎಸ್.ವೈ.

ಎಸ್.ವೈ.ಗುರುಶಾಂತ್

ಈ ವಾರ

ಕರ್ನಾಟಕದ ರಾಜಕೀಯ ರಂಗದಲ್ಲಿ ಪ್ರಧಾನವಾಗಿ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಅಧಿಕಾರದ ಕುರ್ಚಿಗೆ ದಸ್ತಿ ಹಾಕಿವೆ. ಮುಂಬರುವ ವಿಧಾನಸಭಾ ಚುನಾವಣೆಗೆ ರಣ ಕಹಳೆ ಮೊಳಗಿಸಿವೆ. ಆದರೆ ರಾಜಕೀಯ ಹೋರಾಟ ಎನ್ನುವುದು ತಾತ್ವಿಕತೆ ಪಕ್ಕ ಸರಿದು ಅದಃಪತನದ ಸ್ವರೂಪ ಪಡೆದಿದೆ. ಒಂದರ್ಥದಲ್ಲಿ ತಾತ್ವಿಕ, ನಾಗರೀಕ, ಪ್ರಜಾಪ್ರಭುತ್ವೀಯ ಮೌಲ್ಯಗಳು, ಎಲ್ಲಾ ಸಜ್ಜನಿಕೆ, ಸೌಜನ್ಯಗಳ ಸೀಮೆಯನ್ನು ದಾಟಿ ವ್ಯಕ್ತಿಗತ ನಿಂದನೆ, ದ್ವೇಷಾಸೂಯೆ, ಕೀಳು ಬೈಗುಳಗಳ ಮಹಾಪೂರವೇ ರಾಜಕಾರಣದ ಹೊದಿಕೆಯಲ್ಲಿ ಅಬ್ಬರಿಸುತ್ತದೆ.

ನಿಜವಾದ ಪ್ರಚಲಿತ ಬಹು ಮುಖ್ಯ ರಾಜಕೀಯ ಪ್ರಶ್ನೆಗಳಿಗೆ ಒಂದು ರಾಜಕೀಯ ಪಕ್ಷವಾಗಿ ಸ್ಪಷ್ಟ ನಿಲುಮೆ ಪ್ರಬುದ್ಧ ಪರಿಹಾರ, ಪರ್ಯಾಯಗಳನ್ನು ಸೂಚಿಸುವ ಬದಲು ಬೀದಿಯ ರಂಗಿನ ರಂಪಾಟ ಮಾಡಿ ಅವನ್ನು ಮರೆಸುವ ಕುತಂತ್ರವೂ ಅಡಗಿರುತ್ತದೆ. ನೀತಿ ಬದ್ಧ ವಿಮರ್ಶೆ ನಡೆಸಿದಲ್ಲಿ ಲೂಟಿಖೋರ, ದಿವಾಳಿ ನೀತಿಗಳನ್ನು ಸ್ವಂಥಿರ್ಸಿಕೊಳ್ಳ ಬೇಕಾಗುತ್ತದೆ ಇಲ್ಲವೇ ಕೈ ಬಿಡಬೇಕಾಗುತ್ತದೆ, ಇಲ್ಲವೇ ಅದರ ಸುತ್ತ ಚರ್ಚೆ ನಡೆಸುವ ರಾಜಕಾರಣ ಮಾಡ ಬೇಕಾಗುತ್ತದೆ.

ವರ್ತವಾನದ ರಾಜಕಾರಣದಲ್ಲಿ ಯದ್ವಾ ತದ್ವಾ ಗುದ್ದಾಡುವ ಪಕ್ಷಗಳು ವಿಧಾನ ಪರಿಷತ್ ಗೆ ಮತ್ತು ರಾಜ್ಯ ಸಭೆಗೆ ನಡೆಯಬೇಕಿದ್ದ ಚುನಾವಣೆಯಲ್ಲಿ ಸಂಧಾನ ಮಾಡಿಕೊಂಡು ಸ್ಥಾನಗಳನ್ನು ಹಂಚಿಕೊಂಡಿರುವ 'ಅವಿರೋಧ ಆಯ್ಕೆ'ಯ ಸಮಾನ ಮನಸ್ಕತೆ ಈ ವಾರದ ವಿಶೇಷತೆ.

ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಬೇಕಿದ್ದ 7 ಸ್ಥಾನಗಳಿಗೆ ಮೂರು ಪಕ್ಷಗಳ ಏಳು ಜನರನ್ನು ಬಿಟ್ಟರೆ ಬೇರೆ ಯಾರೊಬ್ಬರೂ ನಾಮಪತ್ರ ಸಲ್ಲಿಸದೇ ಇದ್ದುದರಿಂದ ಚುನಾವಣೆ ನಡೆಯದೇ ಅವಿರೋಧವಾಗಿ ಆಯ್ಕೆ ಆಗಿರುವುದಾಗಿ ಚುನಾವಣಾ ಅಧಿಕಾರಿ ಘೋಷಿಸಿದ್ದು ರಾಜಕೀಯ ಚಮತ್ಕಾರ! ಹೀಗಾಗಿ ಬಿಜೆಪಿಯ ನಾಲ್ಕು ಅಭ್ಯರ್ಥಿಗಳು, ಕಾಂಗ್ರೆಸ್ ನ ಮೂವರು, ಜೆಡಿಎಸ್ ನ ಒಬ್ಬರು ಎಂ.ಎಲ್.ಸಿ. ಗಳಾಗಿ ಆಯ್ಕೆಯಾಗಿದ್ದಾರೆ. ವಿಧಾನ ಸಭೆಯಲ್ಲಿರುವ ವಿವಿಧ ಪಕ್ಷಗಳ ಬಲವನ್ನು ಗಣಿಸಿದರೆ 6 ಸ್ಥಾನಗಳನ್ನು ಬಿಜೆಪಿ ಮತ್ತು ಕಾಂಗ್ರೆಸ್ ಗಳು ಪಡೆಯಬಹುದಿತ್ತು. ಆದರೆ 7 ನೇ ಸ್ಥಾನ ಪಡೆಯಲು ಚುನಾವಣೆ ಸ್ಪರ್ದೆ ಏರ್ಪಟ್ಟರೆ ಮತದಾರರನ್ನು 'ಮನ ಒಲಿಸಿಕೊಳ್ಳುವ' ಕಸರತ್ತಿಗೆ ಪಕ್ಷಗಳು ಇಳಿಯಲೇಬೇಕಿತ್ತು. ಈಗಂತೂ ಮನ ಒಲಿಕೆ ಕೋಟ್ಯಾಂತರಗಳ ಅತ್ಯಂತ ದುಬಾರಿ ವ್ಯವಹಾರ. ಇಂತಹುದನ್ನು ನಿಭಾಯಿಸುವ 'ಸಾಮರ್ಥ್ಯ' ಇರುವವರನ್ನೇ ನೋಡಿ ಅಭ್ಯರ್ಥಿಗಳ ಆಯ್ಕೆಯೂ ನಡೆಸಲಾಗುತ್ತದೆ. ತಾವು ಪಡೆದ ಪಕ್ಷದ ಮತದಾರ ಶಾಸಕ ಸದಸ್ಯರಿಗೆ ಹಣ ನೀಡಿ ಖರೀದಿಸುವ ಪರಿಪಾಠ ಇದ್ದೇ ಇದೆ. ಹೀಗಾಗಿ ಮುತ್ಸದ್ದಿಗಳ, ಪರಿಷತ್ತು ವಿವಿಧ ಕ್ಷೇತ್ರ ಪರಿಣಿತರ ವೇದಿಕೆಯಾಗುವ ಬದಲು ಬಹುತೇಕ ಉಳ್ಳವರ, ರಾಜಕೀಯ ನಿರಾಶ್ರಿತರ ಪುನರ್ವಸತಿ ಕೇಂದ್ರವೂ ಆಗಿದೆ. ಹಾಗಾಗಿ ಸ್ಪರ್ದೆ ಏರ್ಪಡದಂತೆ ಹೊಂದಾಣಿಕೆ ಮಾಡಿಕೊಂಡರೆ ಅಧಿಕ ಖರ್ಚು ಮತ್ತು ಶ್ರಮ ಎರಡೂ ಉಳಿಯುವುದು ಎನ್ನುವ ಸೂತ್ರಕ್ಕೆ ಇವರು ಬಂದಿರುತ್ತಾರೆ. 'ನೀ ನನಗಿದ್ದರೆ ನಾ ನಿನಗೆ 'ಎನ್ನುವ ನಾಣ್ಣುಡಿಯನ್ನು ತಮಗೆ ಅನುಕೂಲವಾಗುವಂತೆ ಮುತ್ಸದ್ದಿಗಳು ಬಳಸಿಕೊಳ್ಳುತ್ತಾರೆ. ಹೀಗಾಗಿ ಸ್ಥಾನಕ್ಕೆ ರಾಜಿ ಸಂಧಾನಗಳು ನಡೆದಿವೆ.

ಪ್ರಸಕ್ತವಾಗಿ, ವಿಧಾನ ಪರಿಷತ್ತಿನಲ್ಲಿ ಆಡಳಿತ ಬಿಜೆಪಿ ಪಕ್ಷಕ್ಕೆ ಸ್ಪಷ್ಟ ಬಹುಮತವಿರಲಿಲ್ಲ. ಆದ್ದರಿಂದಲೇ ಹಲವು ಜನದ್ರೋಹಿ ಮಸೂದೆಗಳನ್ನು ಅಂಗೀಕರಿಸಿಕೊಳ್ಳಲು ಸಾಧ್ಯವಿರಲಿಲ್ಲ. ಮತಾಂತರ ನಿಷೇಧದಂತಹ ಸಂವಿಧಾನ ವಿರೋಧಿ ಮಸೂದೆಯನ್ನು ಅಂಗೀಕಾರಕ್ಕೆ ಮಂಡಿಸದೇ ಸುಗ್ರೀವಾಜ್ಞೆಯ ಅಡ್ಡ ದಾರಿ ಹಿಡಿದಿತ್ತು. ಈಗಿನ ಪರಿಷತ್ತಿನ ಚುನಾವಣೆಯನ್ನು ಅದನ್ನೆದುರಿಸಲು ಹೋರಾಟದ ಕಣವಾಗಿ ಪ್ರತಿರೋಧ ಒಡ್ಡುವ ಒಂದು ಸಂದರ್ಭವಾಗಿ ಕಾಂಗ್ರೆಸ್, ಜೆ.ಡಿ ಎಸ್ ಪಕ್ಷಗಳು ಬಳಸಿಕೊಳ್ಳಬಹುದಿತ್ತು. ಹಾಗೆ ಮಾಡುವ ಪ್ರಯಾಸಕ್ಕೆ ಯಾರೂ ಹೋಗಲಿಲ್ಲ. ಹೀಗಾಗಿ ಬಿಜೆಪಿಯ ಲಕ್ಷ್ಮಣ ಸವದಿ, ಛಲವಾದಿ ನಾರಾಯಣಸ್ವಾಮಿ, ಹೇಮಲತಾ ನಾಯಕ್ ಮತ್ತು ಕೇಶವ್ ಪ್ರಸಾದ್ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಪಕ್ಷದಿಂದ ನಾಗರಾಜ್ ಯಾದವ್ ಮತ್ತು ಅಬ್ದುಲ್ ಜಬ್ಬಾರ್ ಹಾಗೂ ಜೆಡಿಎಸ್ ನಿಂದ ಟಿ.ಎ. ಶರವಣ ಅವರು ಪುನಃ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಬಹಳ ಆಸಕ್ತಿದಾಯಕ ಸಂಗತಿ ಎಂದರೆ ಈ ಕಂತಿನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಮಗ ವಿಜಯೇಂದ್ರ ನನ್ನು ಅಭ್ಯರ್ಥಿ ಮಾಡದೇ ಇರುವುದು. ಅವರನ್ನು ಎಂ.ಎಲ್.ಸಿ ಮಾಡಿ ಸಂಪುಟ ವಿಸ್ತರಣೆ ಸಂದರ್ಭದಲ್ಲಿ

ಪುಟ 4 ಕ್ಕೆ





ಶೋಷಣೆ ಮತ್ತು ತಾರತಮ್ಯದ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಲು ದುಡಿಯುವ ಮಹಿಳೆಯರ ಸಮಾವೇಶದ ನಿರ್ಧಾರ

ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ (ಎಐಸಿಸಿಡಬ್ಲುಡಬ್ಲು) 12ನೇ ರಾಷ್ಟ್ರೀಯ ಸಮಾವೇಶ ಮೇ 21–22ರಂದು ಕೊಲ್ಕತಾದಲ್ಲಿ ನಡೆದು ಹೆಚ್ಚುತ್ತಿರುವ ಮಹಿಳೆಯರ, ಅದರಲ್ಲೂ ದುಡಿಯುವ ಮಹಿಳೆಯರ ಶೋಷಣೆ ಮತ್ತು ತಾರತಮ್ಯದ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸಲು ನಿರ್ಧರಿಸಿದೆ.

21 ರಾಜ್ಯಗಳಿಂದ ಮತ್ತು ಆಶಾ, ಅಂಗನವಾಡಿ, ಮಧ್ಯಾಹ್ನದ ಊಟ, ಗ್ರಾಮೀಣ ಆರೋಗ್ಯ ಕಾರ್ಯಕರ್ತೆಯರು, ಟೈಲರಿಂಗ್, ಕಟ್ಟಡ ನಿರ್ಮಾಣ, ಕಾಂಟ್ರಾಕ್ಟ್ ಕಾರ್ಮಿಕರು ಮುಂತಾದ ವಿವಿಧ ಅಸಂಘಟಿತ ಮತ್ತು ಸಂಘಟಿತ ವಲಯಗಳ ಮಹಿಳಾ ಕಾರ್ಮಿಕರ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದರು. ವಿಮೆ, ಬ್ಯಾಂಕ್, ರಾಜ್ಯಸರಕಾರೀ ಮತ್ತು ಬಿಎಸ್‌ಎನ್‌ಎಲ್ ನೌಕರರ ಸಂಘಟನೆಗಳ 9 ಸೌಹಾರ್ದ ಪ್ರತಿನಿಧಿಗಳೂ ಸಮಾವೇಶದ ಚರ್ಚೆಗಳಲ್ಲಿ ಪಾಲ್ಗೊಂಡರು.

ಎಐಸಿಸಿಡಬ್ಲ್ಯುಡಬ್ಲ್ಯುನ ಸಂಚಾಲಕರಾದ ಎ.ಆರ್.ಸಿಂಧು ಮಂಡಿಸಿದ ವರದಿಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ 31 ಪ್ರತಿನಿಧಿಗಳು ದೇಶಾದ್ಯಂತ ಮಹಿಳೆಯರು ತಮ್ಮ ಕೆಲಸದ ಸ್ಥಳಗಳಲ್ಲಿ ಹೇಗೆ ಕಿರುಕುಳವನ್ನು ಎದುರಿಸುತ್ತಿದ್ದಾರೆಂದು ಗಮನಿಸಿದರು; ದುಡಿಯುವ ಮಹಿಳೆಯರಿಗೆ, ವಿಶೇಷವಾಗಿ ಖಾಸಗಿ ಕಚೇರಿಗಳಲ್ಲಿ ವೇತನ ರಚನೆಗಳಲ್ಲಿ ಅಸಮಾನತೆ ಇದೆ ಎಂದು ತಿಳಿಸಿದರು. 'ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬ ನಿಯಮವನ್ನು ದೇಶದ ಖಾಸಗಿ ವಲಯವು ಅನುಸರಿಸುತ್ತಿಲ್ಲ ಎಂದು ಸಮಾವೇಶದಲ್ಲಿನ ಚರ್ಚೆಗಳು ಗಮನಿಸಿದವು. ಪ್ರಸ್ತುತ ಕೇಂದ್ರದ ಬಿಜೆಪಿ ಸರ್ಕಾರವು ಈ ಸಮಸ್ಯೆಯನ್ನು ಪರಿಹರಿಸಲು ಯಾವುದೇ ಕಾನೂನುಗಳನ್ನು ರೂಪಿಸಿಲ್ಲ ಅಥವಾ ಪ್ರಸ್ತುತ ಕಾನೂನುಗಳನ್ನು ಸಮರ್ಥವಾಗಿ ಬಳಸುತ್ತಿಲ್ಲ ಎಂದೂ ಪ್ರತಿನಿಧಿಗಳು ಆಪಾದಿಸಿದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತ ಕಳೆದ ಕೆಲವು ವರ್ಷಗಳಲ್ಲಿ ಹೋರಾಟಗಳಲ್ಲಿ ಹೆಚ್ಚೆಚ್ಚು ಪ್ರಮಾಣದಲ್ಲಿ ದುಡಿಯುವ ಮಹಿಳೆಯರು ಭಾಗವಹಿಸುತ್ತಿರುವುದಕ್ಕಾಗಿ ಅವರನ್ನು ಅಭಿನಂದಿಸಿದರು.

ಸಮಾವೇಶದಲ್ಲಿ ಮಾತನಾಡಿದ ಸಿಐಟಿಯು ಅಧ್ಯಕ್ಷೆ ಕೆ ಹೇಮಲತಾ, ಹೆಚ್ಚು ಹೆಚ್ಚು ದುಡಿಯುವ ಮಹಿಳೆಯರು ಸಂಘಟನೆಗೆ ಸೇರಲು ಹೇಗೆ ಉತ್ಸುಕರಾಗಬೇಕು ಎಂದು ಒತ್ತಿ ಹೇಳಿದರು. ಮಹಿಳೆಯರು ರಾಜಕೀಯವಾಗಿ ತಮ್ಮ ಪರಿಸ್ಥಿತಿಯನ್ನು ಹೆಚ್ಚು ಅರಿತುಕೊಳ್ಳಬೇಕು ಮತ್ತು ಹೊಸ ಕ್ಷೇತ್ರಗಳಲ್ಲಿ ಸಂಘಟನೆಯು ತನ್ನ ವ್ಯಾಪ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದರು.

ಸಮಾವೇಶವನ್ನು ಕರ್ನಾಟಕದ ಲೀಲಾವತಿಯವರೂ ಸೇರಿದಂತೆ ಏಳು ಮಹಿಳಾ ಮುಖಂಡರಿದ್ದ ಅಧ್ಯಕ್ಷ ಮಂಡಳಿ ನಡೆಸಿ ಕೊಟ್ಟಿತು. ಎಸ್.ವರಲಕ್ಷ್ಮಿ ನಿರ್ಣಯಗಳ ಸಮಿತಿಯ ಸಂಚಾಲಕರಾಗಿ ಮತ್ತು ಸೆಲ್ವಿಯವರು ಅರ್ಹತಾ ಪರಿಶೀಲನಾ ಸಮಿತಿಯ ಸದಸ್ಯರಾಗಿ ಕೆಲಸ ಮಾಡಿದರು.

ಸಂಚಾಲಕರ ಉತ್ತರದ ನಂತರ, ಸಮಾವೇಶದ ವರದಿಯನ್ನು 22 ಅಂಶಗಳ ಚಾರ್ಟರ್ ಮತ್ತು ಭವಿಷ್ಯದ ಚಳುವಳಿ ಹಾಗೂ ಸಂಘಟನಾ ಕಾರ್ಯಭಾರಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಸ್ಕೀಮ್ ನೌಕರರ ಆಂದೋಲನವನ್ನು ಕ್ರೋಢೀಕರಿಸಿ ಬಲಪಡಿಸುವುದಲ್ಲದೆ, ಕೆಲವು ಆದ್ಯತೆಯ ವಲಯಗಳನ್ನು ಗುರುತಿಸಲಾಯಿತು. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ದುಡಿಯುತ್ತಿರುವ ಸಾಂಪ್ರದಾಯಿಕ ವಲಯಗಳು, ಮನಗೆಲಸ, ಗಾರ್ಮೆಂಟ್ ವಲಯ, ಉತ್ಪಾದನಾ ಮೌಲ್ಯ ಸರಪಳಿಗಳು, ನರ್ಸಿಂಗ್ ಮತ್ತು ಆರೋಗ್ಯ ರಕ್ಷಣೆ, ಖಾಸಗಿ ಶಾಲೆಗಳು, ಅಂಗಡಿಗಳು ಮತ್ತು ಮಾಲ್‌ಗಳು, ಗಿಗ್ ವರ್ಕರ್‌ಗಳು ಇತ್ಯಾದಿಗಳಲ್ಲಿ ಸಂಯೋಜನಾ ಸಮಿತಿಗಳು ದುಡಿಯುವ ಮಹಿಳೆಯರನ್ನು ಯೂನಿಯನ್‌ಗಳಲ್ಲಿ ಸಂಘಟಿಸಲು ಮುಂದಾಗಬೇಕು ಎಂದು ನಿರ್ಧರಿಸಲಾಯಿತು.

ಸಮಾವೇಶದ ಮೊದಲು ಮೇ 20 ರಂದು ಒಂದು ಬೃಹತ್ ಬಹಿರಂಗ ಸಭೆ ನಡೆಯಿತು. ಅದನ್ನುದ್ದೇಶಿಸಿ ತಪನ್ ಸೇನ್ ಮತ್ತು ಎ.ಆರ್. ಸಿಂಧುರವರಲ್ಲದೆ, ಪಶ್ಚಿಮ ಬಂಗಾಲದ ಸಿಐಟಿಯು ಮತ್ತು ದುಡಿಯುವ ಮಹಿಳೆಯರ ಸಮಿತಿಯ ಮುಖಂಡರುಗಳು ಮಾತನಾಡಿದರು.

ಕೊಯಮತ್ತೂರಿನಲ್ಲಿ ಜವಳಿ ಮತ್ತು ವಿದ್ಯುತ್ ಮಗ್ಗ ಕಾರ್ಮಿಕರ ರಾಷ್ಟ್ರೀಯ ಸಮಾವೇಶ



ಮೇ 17 ರಂದು ತಮಿಳುನಾಡಿನ ಕೊಯಮತ್ತೂರಿನಲ್ಲಿ ಸಿಐಟಿಯು ಜವಳಿ ಮತ್ತು ವಿದ್ಯುತ್‌ಮಗ್ಗ ಕಾರ್ಮಿಕರ ರಾಷ್ಟ್ರೀಯ ಸಮಾವೇಶವನ್ನು ಸಂಘಟಿಸಿತು. ಸಿಐಟಿಯು ಉಪಾಧ್ಯಕ್ಷ ಕಾಂ.ಎ.ಕೆ. ಪದ್ಮನಾಭನ್ ಸಮಾವೇಶವನ್ನು ಉದ್ಘಾಟಿಸಿದರು. ಸಿಐಟಿಯು ಕಾರ್ಯದರ್ಶಿ ಕಾಂ ಆರ್. ಕರುಮಲೈಯನ್ ಅವರು ಕರಡು ವರದಿಯನ್ನು ಮಂಡಿಸಿದರು. ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಅಧ್ಯಕ್ಷೆ ಕಾಂ.ಕೆ. ಹೇಮಲತಾ ಅವರು ಮುಂದಿನ ಕಾರ್ಯಗಳ ರೂಪುರೇಷೆಗಳನ್ನು ಕುರಿತ ಆಶಯ ಭಾಷಣ ಮಾಡಿದರು. ಸಿಐಟಿಯು ತಮಿಳುನಾಡು ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಸುಕುಮಾರನ್ ಮತ್ತು ಸಂಸತ್ ಸದಸ್ಯ ಪಿ.ಆರ್. ನಟರಾಜನ್, ಸಮಾವೇಶವನ್ನು ಅಭಿನಂದಿಸಿದರು.



ಅನುಕೂಲಸಿಂಧು ರಾಜಕಾರಣದಲ್ಲಿ ಒಂದಾದವರು..... ಪುಟ 3 ರಿಂದ

ಮಂತ್ರಿಯನ್ನು ಮಾಡಲಾಗುವುದೆಂಬ ನಿರೀಕ್ಷೆಗೆ ಹೈಕಮಾಂಡ್ ತಣ್ಣೀರೆರಚಿದೆ. ಇದು ಬಿ.ಎಸ್.ವೈ. ನಿಕಟ ವಲಯದಲ್ಲಿ, ಬೆಂಬಲಿಗರಲ್ಲಿ ಅತೃಪ್ತಿ ತಂದಿದೆಯಾದರೂ ಬುಸುಗುಟ್ಟಿ ಉಸಿರು ಬಿಡುವ ಸಾಧ್ಯತೆಗಳಿಲ್ಲ. ಒಂದು ವೇಳೆ ಬಂಡಾಯ ಎದ್ದರೂ ಫಲ ಸಿಗುವ ಸಂದರ್ಭಗಳು ಇನ್ನೂ ಇಲ್ಲ. ಬಹುಶಃ ಇನ್ನಷ್ಟೂ ಕಾದು ನೋಡುವ ಬಣ ಅನಿವಾರ್ಯತೆಗೆ ಸಿಲುಕಿದಂತಿದೆ. ಬಿ.ಎಸ್.ವೈ. ವಿರುದ್ಧ ನಿಂತಿರುವ, ಸಿ.ಎಂ ಆಕಾಂಕ್ಷಿಯಾಗಿರುವ ಬಿ.ಎಲ್. ಸಂತೋಷ್ ಕುತಂತ್ರದಿಂದಾಗಿಯೇ ವಿಜಯೇಂದ್ರನಿಗೆ ರಾಜ್ಯದಿಂದ ಹೆಸರು ಹೋದರೂ ಸಿಗದಂತಾಗಿದ್ದು ಸಂತೋಷ್ ರಿಂದಲೇ, ಅವರದ್ದೇ ಮೇಲುಗೈ ಎನ್ನುವುದೂ ದಟ್ಟವಾದ ಚರ್ಚೆ. ಘಟನೆಗಳ ವಿವರಗಳು ಏನೇ ಇದ್ದರೂ ಬಿಜೆಪಿಯೊಳಗಿನ ಗುಂಪುಗಾರಿಕೆ, ಒಳಜಗಳ ತನ್ನ ಕಾವನ್ನೇನೂ ಕಳೆದುಕೊಂಡಿಲ್ಲ. ಯಡಿಯೂರಪ್ಪನ ಬಳಗಕ್ಕೆ ಆರೆಸ್ಸೆಸ್ ಗುದ್ದು ಕೊಡುವ ಜೊತೆಗೆ ಬೊಮ್ಮಾಯಿಗೂ ಬಿಸಿ ಮುಟ್ಟಿಸಿದೆ. ಇದು ಇನ್ನಷ್ಟೂ ಮುಂದುವರೆಯಬಹುದು.

ರಾಜ್ಯದ ವಿಧಾನಸಭೆಯಿಂದ ರಾಜ್ಯ ಸಭೆಯ ನಾಲ್ಕು ಸ್ಥಾನಗಳಿಗೆ ಜೂನ್ 10, 2022 ರಂದು ಚುನಾವಣೆ ನಡೆಯಲಿದೆ. ಬಿಜೆಪಿ ಎರಡು ಸ್ಥಾನ ಗೆಲ್ಲಬಹುದಾದ ಸಂಖ್ಯೆ ಹೊಂದಿದೆ. ಕಾಂಗ್ರೆಸ್ ಒಂದು ಅನಾಯಾಸವಾಗಿ ಪಡೆಯಬಹುದು. ಆದರೆ ಹೆಚ್ಚುವರಿಯಲ್ಲಿ ಮತ್ತೊಂದು ಪಡೆಯುವುದು ಯಾರು? ಕಾಂಗ್ರೆಸ್ ಅಥವಾ ಬಿಜೆಪಿ ಯತ್ನಿಸಬಹುದು. ಆದರೆ ಇದಕ್ಕೆ ಜೆಡಿಎಸ್ ಸ್ಪರ್ಧಿಸುವ ಸೂಚನೆ ನೀಡಿರುವುದು ಕುತೂಹಲಕರ. ಅದರ ಗೆಲುವಿಗೆ ಇನ್ನು 14 ಮತಗಳು ಬೇಕು. ಜೆಡಿಎಸ್ ಅಲ್ಲದೇ ಬೇರೆ ಯಾರೇ ಆಗಲಿ ಅದನ್ನು ಹೇಗೆ ಗಳಿಸುವರು ಎನ್ನುವುದೇ ಒಳ ರಾಜಕಾರಣ!

ದೇಶದ ಅನೇಕ ರಾಜ್ಯಗಳಿಂದ ಒಟ್ಟು 57 ರಾಜ್ಯಸಭಾ ಸದಸ್ಯರ ಆಯ್ಕೆ ಮುಂಬರುವ ರಾಷ್ಟ್ರಪತಿ ಚುನಾವಣೆಯ ಮೇಲೆ ಪರಿಣಾಮ ಬೀರುವ ಮಹತ್ವ ಹೊಂದಿದೆ.

ಇದಲ್ಲದೇ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ ನ ಮೂರು ಸ್ಥಾನಗಳಿಗೆ ಜೂನ್ 2 ರಂದು ಚುನಾವಣೆ ನಡೆಯಲಿದೆ. ಪಕ್ಷಾಂತರ ಮಾಡಿದ ಬ. ಹೊರಟ್ಟಿಯವರು ಒಬ್ಬ ಅಭ್ಯರ್ಥಿ.

ಈ ಎಲ್ಲಾ ಪ್ರಕ್ರಿಯೆಗಳನ್ನು ಗಮನಿಸಿದರೆ ಈ ಚುನಾವಣೆ, ಆಯ್ಕೆಗಳು ರಾಜಕೀಯ ನೀತಿ, ತಾತ್ವಿಕ ನಿಲುವುಗಳ ಹೋರಾಟಕ್ಕಿಂತ ಅನುಕೂಲ ಸಿಂಧು ರಾಜಕಾರಣವೇ ಪ್ರಮುಖವಾಗಿದೆ. ವಸ್ತುನಿಷ್ಠ ಚರ್ಚೆಗಳು ಮರೆಯಾಗಿ ಹಲವು ದಶಕಗಳೇ ಕಳೆದು ಹೋಗಿವೆ!

ಮುಸ್ಲಿಮರ ಕುರಿತು ವಾಸ್ತವತೆ ಬಿಂಬಿಸುವ ಸಮಾವೇಶ:
– ಸುನೀಲ್ ಕುಮಾರ್ ಬಜಾಲ್

ಸಿಪಿಐ(ಎಂ) ಪಕ್ಷದ ವತಿಯಿಂದ ಮೇ 31 ಹಾಗೂ ಜೂನ್ 1ರಂದು ಹಮ್ಮಿಕೊಳ್ಳಲಾಗಿರುವ ರಾಜ್ಯಮಟ್ಟದ ಮುಸ್ಲಿಂ ಸಮಾವೇಶ ಕೇವಲ ಮುಸ್ಲಿಮರನ್ನು ಒಟ್ಟು ಸೇರಿಸಿ ನಡೆಸುವ ಸಮಾವೇಶವಲ್ಲ ಬದಲಾಗಿ, ವಾಸ್ತವ ಬದುಕಿನ ಚಿತ್ರಣ ಬಿಂಬಿಸುವ ಸಮಾವೇಶವಾಗಿದೆ ಎಂದು ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಸುನೀಲ್ ಕುಮಾರ್ ಬಜಾಲ್ ಹೇಳಿದ್ದಾರೆ.

ಮುಸ್ಲಿಂ ಸಮುದಾಯವನ್ನು ಗುರಿಯನ್ನಾಗಿಸಿ ಹಸಿಹಸಿ ಸುಳ್ಳುಗಳ ಸರಮಾಲೆಯನ್ನು ಸೃಷ್ಟಿಸಿ ದ್ವೇಷ ರಾಜಕಾರಣ ನಡೆಸುವ ಬಿಜೆಪಿ ಹಾಗೂ ಸಂಘಪರಿವಾರದ ಹುನ್ನಾರಗಳನ್ನು ಬಯಲಿಗೆಳೆಯುವ ಹಿನ್ನೆಲೆಯ ಸಿಪಿಐ(ಎಂ) ಪಕ್ಷದಿಂದ ಈ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ದೇಶದಲ್ಲಿ ಕೋಮುವಾದಿ ಶಕ್ತಿಗಳು ಜನತೆಯ ನಿಜ ಸಮಸ್ಯೆಗಳನ್ನು ಬದಿಗೆ ಸರಿಸುವ ನಿಟ್ಟಿನಲ್ಲಿ ದೇಶದ ಹಿಂದೂ–ಮುಸ್ಲಿಂ ಐಕ್ಯತೆ, ಕೋಮು ಸೌಹಾರ್ದತೆಯನ್ನು ಹಾಳು ಮಾಡುವ ಮೂಲಕ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ. ಅದರಲ್ಲೂ, ಕೋಮುವಾದಿಗಳ ಕಪಿಮುಷ್ಠಿಯಲ್ಲಿ ನಲುಗುತ್ತಿರುವ ಮುಸ್ಲಿಂ ಸಮುದಾಯವನ್ನು ಒಂಟಿಯನ್ನಾಗಿಸುವ ಪ್ರಕ್ರಿಯೆ ತೀವ್ರಗೊಳ್ಳುತ್ತಿದೆ ಎಂದರು.

ಸಂಘಪರಿವಾರ ನಿರುದ್ಯೋಗಿಗಳನ್ನು, ಹಿಂದುಳಿದವರನ್ನು, ವಂಚನೆಗೆ ಒಳಗಾದವ ಅಮಾಯಕರನ್ನು ಬಳಸಿಕೊಳ್ಳುವ ಮೂಲಕ ಮುಸ್ಲಿಮರ ಮೇಲೆ ದ್ವೇಷವನ್ನು ಹುಟ್ಟುಹಾಕುತ್ತಿದೆ. ಆ ಮೂಲಕ ನಿರುದ್ಯೋಗ, ಉದ್ಯೋಗ ನಷ್ಟ, ಬೆಲೆ ಏರಿಕೆ, ಖಾಸಗೀಕರಣದಂತಹ ಪ್ರಶ್ನೆಗಳನ್ನು ಪ್ರಶ್ನಿಸದಂತೆ ಮಾಡುವಂತೆ ದಾರಿ ತಪ್ಪಿಸುವ ಕೆಲಸಕ್ಕೆ ಮುಂದಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಅಭದ್ರತೆಯಿಂದ ಕಾಡುತ್ತಿರುವ ಮುಸ್ಲಿಂ ಸಮುದಾಯದ ಬಗೆಗಿನ ಅಪಪ್ರಚಾರಗಳಿಗೆ ಸರಿಯಾದ ಉತ್ತರ ಹೇಳುವ ಮೂಲಕ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವ ನಿಟ್ಟಿನಲ್ಲಿ ರಾಜ್ಯಮಟ್ಟದ ಮುಸ್ಲಿಂ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ.

ಜಾತ್ಯಾತೀತ ಮನಸುಗಳು, ಮಾನವೀಯ ಹೃದಯಗಳು, ಪ್ರಜಾಪ್ರಭುತ್ವವಾದಿ ಶಕ್ತಿಗಳು ಸೇರಿದಂತೆ ಮುಸ್ಲಿಮೇತರ ಬಂಧುಗಳು ಭಾಗವಹಿಸುವ ಮೂಲಕ ಅರ್ಥಪೂರ್ಣವಾದ ಮುಸ್ಲಿಂ ಸಮಾವೇಶ ನಡೆಸಲಾಗುತ್ತದೆ. ಈ ಮೂಲಕ ಕೋಮುವಾದ ಮುಕ್ತ ಭವ್ಯ ಭಾರತದ ನಿರ್ಮಾಣಕ್ಕೆ ಹೆಜ್ಜೆಯಿಡಲಿದ್ದೇವೆ ಎಂದು ಸುನೀಲ್ ಕುಮಾರ್ ಬಜಾಲ್ ಕರೆ ನೀಡಿದರು.



ಮೇ 31 ಜೂನ್ 1. ಮಂಗಳೂರಿನಲ್ಲಿ ರಾಜ್ಯ ಮಟ್ಟದ ಮುಸ್ಲಿಂ ಸಮಾವೇಶ

ಭಾರತದ ದೊಡ್ಡ ಅಲ್ಪಸಂಖ್ಯಾತ ಸಮುದಾಯವಾದ ಮುಸ್ಲಿಮರ ಸ್ಥಿತಿಗತಿ, ದೇಶದ ರಾಜಕಾರಣ ಹೆಚ್ಚು ಹೆಚ್ಚು ಕೋಮುವಾದೀಕರಣ ಗೊಳ್ಳುತ್ತಿರುವುದರಿಂದ ಮುಸ್ಲಿಂ ಸಮುದಾಯ ಎದುರಿಸುತ್ತಿರುವ ಬಹು ಆಯಾಮಗಳ ಬಿಕ್ಕಟ್ಟುಗಳ ಹಿನ್ನಲೆಯಲ್ಲಿ ಸಿಪಿಐಎಂ ಕರ್ನಾಟಕ ರಾಜ್ಯ ಸಮಿತಿಯು ಮಂಗಳೂರಿನ ಪುರಭವನದಲ್ಲಿ ಮೇ 31, ಜೂನ್ 1 ರಂದು ಎರಡು ದಿನಗಳ ರಾಜ್ಯ ಮಟ್ಟದ ಮುಸ್ಲಿಂ ಸಮಾವೇಶವನ್ನು ಹಮ್ಮಿಕೊಂಡಿದೆ.

ನ್ಯಾಯಮೂರ್ತಿ ರಾಜೇಂದ್ರ ಸಾಚಾರ್ ವರದಿಯ ಪ್ರಕಾರ ಮುಸ್ಲಿಮರ ಸ್ಥಿತಿ ಹಲವು ವಿಭಾಗಗಳಲ್ಲಿ ದಲಿತ ಸಮುದಾಯಗಳಿಗಿಂತ ನಿಕೃಷ್ಟವಾಗಿದೆ. ಭೂಮಿಯ ಒಡೆತನ, ಶಿಕ್ಷಣದ ಅವಕಾಶ, ಸರಕಾರಿ, ಸಾರ್ವಜನಿಕ ವಲಯದ ಉದ್ಯೋಗಗಳಲ್ಲಿ ಬೇರೆಲ್ಲ ಸಮುದಾಯಗಳಿಗಿಂದ ಮುಸ್ಲಿಮರ ಪಾಲು ಕಡಿಮೆ. ಬಡತನದ ಸರಾಸರಿಯಲ್ಲೂ ಮುಸ್ಲಿಮರ ಪ್ರಮಾಣಅತೀ ಹೆಚ್ಚಿದೆ. ಇಂತಹ ಸಮುದಾಯವೊಂದನ್ನು ಮೇಲೆತ್ತಲು ಸರಕಾರವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿತ್ತು. ಬದಲಿಗೆ ಕೋಮುದ್ವೇಷದ ರಾಜಕಾರಣಕ್ಕೆ ನಿರಂತರ ಗುರಿಯಾಗಿಸಲಾಗುತ್ತಿದೆ. ಮುಸ್ಲಿಮರ ಆಚರಣೆ, ನಂಬಿಕೆಗಳು, ಆಹಾರ ಪದ್ಧತಿ, ಆರಾಧನಾಲಯಗಳನ್ನು ವಿವಾದವನ್ನಾಗಿಸಲಾಗುತ್ತಿದೆ. ವ್ಯಾಪಾರ, ಒಡನಾಟಗಳಿಗೆ ತಡೆ ಹೇರಲಾಗುತ್ತಿದೆ. ಪ್ರಕೃತಿ ವಿಕೋಪ ಹಾಗೂ ಇನ್ನಿತರೆ ದುರಂತಗಳ ಸಂದರ್ಭ ಪರಿಹಾರ ವಿತರಣೆಗಳಲ್ಲೂ ಸರಕಾರ ಮುಸ್ಲಿಮರೊಂದಿಗೆ ತಾರತಮ್ಯತೋರುತ್ತಿದೆ. ಅಲ್ಪಸಂಖ್ಯಾತ ಸಮುದಾಯವೊಂದರ ಮೇಲಿನ ಇಂತಹ ಆಘಾತಕಾರಿ ದಾಳಿಗಳಿಗೆ ಆಳುವ ಸರಕಾರಗಳೇ ಬೆಂಬಲವಾಗಿ ನಿಂತಿರುವುದು ಮುಸ್ಲಿಂ ಸಮುದಾಯವನ್ನು ಅಸಹಾಯಕತೆ, ಅಭದ್ರತೆ, ಆತಂಕದ ಸ್ಥಿತಿಗೆ ತಳ್ಳಿದೆ. ರಾಜ್ಯದ ಬಿಜೆಪಿ ಸರಕಾರ ತನ್ನ ವೈಫಲ್ಯಗಳನ್ನು ಮುಚ್ಚಿ ಹಾಕಲು ಪೂರ್ತಿಯಾಗಿ ಕೋಮುವಾದದ ಮೊರೆ ಹೋಗಿದೆ. ಒಟ್ಟು ದೇಶದ ರಾಜಕಾರಣವನ್ನೇ ಈಗ ಮುಸ್ಲಿಂ ವಿರೋಧಿ ಭಾವನೆಗಳ ಸುತ್ತತಂದು ನಿಲ್ಲಿಸಲಾಗಿದೆ.

ಇಂತಹ ಸಂದರ್ಭದಲ್ಲಿ ವ್ಯವಸ್ಥೆಯ ದ್ವೇಷ, ಅನಾದಾರಕ್ಕೆ ಗುರಿಯಾದ ಮುಸ್ಲಿಮರ ನೈಜ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬೇಕು. ಕರ್ನಾಟಕದಲ್ಲಿ ಮುಸ್ಲಿಮರ ಸ್ಥಿತಿಗತಿಗಳ ವಾಸ್ತವವನ್ನು ಜನರ ಮುಂದೆ ತೆರೆದಿಡಬೇಕು, ಸುಳ್ಳುಆರೋಪ, ಪೂರ್ವಾಗ್ರಹಗಳನ್ನು, ಸಂಶಯಗಳನ್ನು ದೂರೀಕರಿಸಲು ಯತ್ನಿಸಬೇಕು ಹಾಗೂ ಮತೀಯವಾದದ ಬಗ್ಗೆ ಪ್ರಜ್ಞಾ ಪೂರ್ವಕ ತಿಳುವಳಿಕೆ, ಕೋಮು ಸೌಹಾರ್ದತೆ, ಜಾತ್ಯಾತೀತತೆ, ಸಂವಿಧಾನದ ಮೌಲ್ಯಗಳ ಪ್ರತಿಪಾದನೆಯ ಉದ್ದೇಶದೊಂದಿಗೆ ಜಾತ್ಯಾತೀತತೆ, ಸಬಲೀಕರಣ, ಮುನ್ನಡೆ ಎಂಬ ಘೋಷಣೆಯ ಅಡಿಯಲ್ಲಿ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಕೇರಳದ ಮಾಜಿ ಉನ್ನತ ಶಿಕ್ಷಣ ಸಚಿವರೂ ಹಾಲಿ ಶಾಸಕರಾದ ಡಾ.ಕೆ.ಟಿ. ಜಲೀಲ್‌ರವರು ಸಮಾವೇಶವನ್ನು ಮೇ 31 ರಂದು ಬೆಳಿಗ್ಗೆ 10:30ಕ್ಕೆ ಉದ್ಘಾಟಿಸಲಿದ್ದಾರೆ. ಹಿರಿಯ ದಲಿತ ನಾಯಕ ಮಾವಳ್ಳಿ ಶಂಕರ್, ಖ್ಯಾತ ಸಾಹಿತಿಡಾ. ಕೆ.ಷರೀಫಾ ಮತ್ತಿತರಗಣ್ಯರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮಧ್ಯಹ್ನದ ನಂತರ ಎರಡು ಮಹತ್ವದ ಗೋಷ್ಠಿಗಳು ಜರುಗಲಿದೆ. ಇದರಲ್ಲಿ ಹಂಪಿ ವಿ.ವಿಯ ನಿವೃತ್ತ ಪ್ರಾಧ್ಯಾಪಕ ಡಾ.ಚಂದ್ರ ಪೂಜಾರಿ, ಪತ್ರಕರ್ತ ಬಿ.ಎಮ್. ಹನೀಫ್, ಡಾ. ಕೆ ಪ್ರಕಾಶ್, ಕೆ.ನೀಲಾ, ಬಿ.ಪೀರ್ ಭಾಷಾ ಮುಂತಾದಖ್ಯಾತನಾಮರು ವಿಷಯ ಮಂಡಿಸಲಿದ್ದಾರೆ. ಸಂಜೆ ಏಳರ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಜೂನ್ 1ರಂದು ಅಲ್ಪಸಂಖ್ಯಾತ ಸಮುದಾಯಗಳ ಸಬಲೀಕರಣಕ್ಕಾಗಿ ಮುಂದೆ ನಡೆಸಬೇಕಾದ ಕೆಲಸಗಳ ಕುರಿತು ವಿವಿಧಜಿಲ್ಲೆಗಳಿಂದ ಆಗಮಿಸುವ ಪ್ರತಿನಿಧಿಗಳಿಗಾಗಿ ಆಂತರಿಕ ಕಲಾಪಗಳು ನಡೆಯಲಿವೆ. ಮೇ 31 ರಂದು ನಡೆಯುವ ಸಮಾವೇಶದಲ್ಲಿ ಸಾರ್ವಜನಿಕರಿಗೆ ಮುಕ್ತ ಪ್ರವೇಶ ಇದೆ ಎಂದು ಸಿಪಿಐಎಂ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ತಿಳಿಸಿದೆ.

ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯದ ಜನಪ್ರತಿನಿಧಿಗಳು:
ನ್ಯಾ. ನಾಗಮೋಹನ್‌ದಾಸ್

ಅಖಿಲ ಭಾರತ ವಿಮಾ ಪೆನ್ಶನ್‌ದಾರರ ಸಂಘದ ಸಮ್ಮೇಳನವು ನಗರದ ಸಿಟಿ ಸೆಂಟಾರ್ ಹೋಟೆಲ್‌ನಲ್ಲಿ 29–31ನೆಯ ಮೇ ವರೆಗೆ ನಡೆಯುತ್ತಿದೆ. ಇಂದು(ಮೇ 29) ಬೆಳಿಗ್ಗೆ 11 ಗಂಟೆಗೆ ಸಮ್ಮೇಳನವನ್ನು ಖ್ಯಾತ ನ್ಯಾಯವಾದಿ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೆರವೇರಿಸಿದರು.

ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ದೇಶದ ಪ್ರಚಲಿತ ರಾಜಕೀಯ, ಆರ್ಥಿಕ ಸನ್ನಿವೇಶಗಳನ್ನು ವಿಶ್ಲೇಷಿಸುತ್ತ, ಈ ದೇಶದ ಸೌಹಾರ್ದ ಸಾಮರಸ್ಯವನ್ನು ಕಾಪಾಡುವಲ್ಲಿ ಎಲ್ಲ ಹಿರಿಯ ನಾಗರೀಕರಿಗೆ ದೊಡ್ಡ ಜವಾಬ್ದಾರಿಯದೆಯೆಂದರು. ದೇಶವನ್ನಾಳುತ್ತಿರುವ ಬಹುತೇಕ ಜನಪ್ರತಿನಿಧಿಗಳಿಗೆ ಅಪರಾಧದ ಹಿನ್ನೆಲೆಯಿದೆ. ನಾಲ್ಕನೇ ಮೂರರಷ್ಟು ಜನಪ್ರತಿನಿಧಿಗಳು ಕೋಟ್ಯಾಧಿಪತಿಗಳು. ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾದವರೇ ಸಂವಿಧಾನವನ್ನು ಬದಲಿಸುವ ಮಾತುಗಳನಾಡುತ್ತಿದ್ದಾರೆ ಎಂದು ಹೇಳಿದರು.


ಸಂವಿಧಾನ ಉಳಿಸುವ, ಅದರ ಆಶಯಗಳನ್ನು ಜಾರಿ ಮಾಡುವಂತೆ ಮಾಡುವ ಹೊಣೆಯನ್ನು ನಿರ್ವಹಿಸುವ ಮೂಲಕ ಮುಂದಿನ ಪೀಳಿಗೆಯ ಹಿತಕಾಯುವಂತೆ ಕೆಲಸ ಮಾಡಿರಿ ಎಂದು ಕರೆ ನೀಡಿದರು.

ಅಖಿಲ ಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಶ್ರೀಕಾಂತ ಮಿಶ್ರ ಮಾತನಾಡಿ, ಎಲ್ಲರಿಗೂ ಶುಭ ಕೋರುತ್ತಾ, ವಿಮಾ ಉದ್ದಿಮೆಯನ್ನು ರಾಷ್ಟ್ರೀಕರಣದ ದಿನಗಳಿಂದ ಬಲ್ಲವರು ನೀವು. ಸರ್ಕಾರವು ವಿಮಾ ರಂಗದಲ್ಲಿ ಖಾಸಗೀಯವರಿಗೆ ತೆರೆದಿಟ್ಟಿರುವುದು ಮಾತ್ರವಲ್ಲ, ಭಾರತೀಯ ಜೀವ ವಿಮಾ ನಿಗಮದಲ್ಲೂ ಪ್ರಾಥಮಿಕ ಸಾರ್ವಜನಿಕ ಕೊಡುಗೆಗೆ(ಐಪಿಓ) ಅವಕಾಶ ಮಾಡಿದೆ. ವಿಮಾ ಮಾರುಕಟ್ಟೆಯ ನಾಯಕನಾಗಿರುವ ನಮ್ಮ ಈ ಸಂಸ್ಥೆಯನ್ನು ಖಾಸಗೀಕರಣದಿಂದ ರಕ್ಷಿಸುವುದು ನಮ್ಮ ಆದ್ಯತೆ. ಜನತೆಯ ಬದುಕನ್ನು ಬರ್ಬರಗೊಳಿಸುತ್ತಿರುವ ಆರ್ಥಿಕ ನೀತಿಗಳನ್ನು ವಿರೋಧಿಸದೆ ಇದು ಸಾಧ್ಯವಿಲ್ಲ ಎಂದು ಹೇಳಿದರು.

ದುಡಿಯುವ ಜನರ ಹಿತಕಾಯುವ ಏಕೈಕ ಸಾಧನ ಎಂದರೆ ಐಕ್ಯತೆ. ಇಂದು ಆ ಐಕ್ಯತೆ ಒಡೆಯುವ ಹುನ್ನಾರಗಳು ತೀವ್ರಗೊಳ್ಳುತ್ತಿದೆ. ಹಾಗಾಗಿ ಈ ದೇಶದ ಪರಂಪರೆಯಾದ ಸೌಹಾರ್ದ ರಕ್ಷಿಸುವ ಮೂಲಕ ನಮ್ಮ ಐಕ್ಯತೆಯನ್ನು ಉಳಿಸಿಕೊಳ್ಳೋಣ ಎಂದರು.

ಅಖಿಲ ಭಾರತ ವಿಮಾ ನೌಕರರ ಸಂಘದ ಮಾಜಿ ಅಧ್ಯಕ್ಷ ಅಮಾನುಲ್ಲ ಖಾನ್ ಮಾತನಾಡಿ, ಘನತೆಯ ಬದುಕು ಎಲ್ಲರ ಹಕ್ಕು ಹಾಗಾಗಿ ಸಾರ್ವತ್ರಿಕ ಸಾಮಾಜಿಕ ಭದ್ರತೆಗಾಗಿ ನೀವು ಮುಂದಿಟ್ಟಿರುವ ಬೇಡಿಕೆ ಅತ್ಯಂತ ನ್ಯಾಯಯುತವಾದದ್ದು. ನಿವೃತ್ತಿ ವೇತನದ ಉನ್ನತೀಕರಣ, ಕೌಟುಂಬಿಕ ನಿವೃತಿ ವೇತನವನ್ನು ಶೇ. 30ಕ್ಕೆ ಏರಿಸುವಂತೆ ಆಡಳಿತ ಮಂಡಳಿಯ ಮುಂದಿಟ್ಟಿರುವ ಬೇಡಿಕೆಗಳ ಈಡೇರುವಂತಾಗಲಿ. ಹಾಗಾಗಲು ಅಗತ್ಯವಿರುವ ಹೋರಾಟಗಳು ಇನ್ನಷ್ಟು ತೀವ್ರವಾಗಲಿ ಎಂದರು.

ವಿಮಾ ನಿವೃತ್ತಿದಾರರ ಸಂಘದ ಅಧ್ಯಕ್ಷ ಅಶೋಕ್ ತಿವಾರಿ ಸಮ್ಮೇಳನ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ನಡೆಸಿಕೊಟ್ಟರು. ಸಮಾರಂಭದಲ್ಲಿ ವಿವಿಧ ಸಹೋದರ ಸಂಘಟನೆಗಳ ನಾಯಕರುಗಳು ಭಾಗವಹಿಸಿದ್ದರು.



ಸ್ವಾಗತ ಸಮಿತಿಯ ಅಧ್ಯಕ್ಷರಾದ ಖ್ಯಾತ ರಂಗನಟ ಮತ್ತು ನಿರ್ದೇಶಕ ಬಿ. ಸುರೇಶ ಅವರು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಪ್ರಧಾನ ಕಾರ್ಯದರ್ಶಿ ಟಿ.ಕೆ. ಚಕ್ರವರ್ತಿ ವಂದನಾರ್ಪಣೆ ಮಾಡಿದರು.

ಕೇಂದ್ರ ಸರಕಾರ ಕಳೆದ ವಾರ ತೈಲದ ತೆರಿಗೆಗಳಲ್ಲಿ ಅಲ್ಪ ಕಡಿತ ಮಾಡಿ ರಾಜ್ಯಗಳೂ ತೆರಿಗೆ ಕಡಿತ ಮಾಡಬೇಕು ಎಂದು ಪ್ರಧಾನಿಗಳೇ ಹುಯಿಲೆಬ್ಬಿಸಿದರು. ಹೆಚ್ಚಿನ ರಾಜ್ಯಗಳು ಹಾಗೆ ಮಾಡಲು ಹಿಂಜರಿದವು. ಇದಕ್ಕೆ ಕಾರಣ ರಾಜ್ಯಗಳ ದುರ್ಭರ ಹಣಕಾಸಿನ ಸ್ಥಿತಿ. ಇದಕ್ಕೆ ಕೇಂದ್ರ ಸರಕಾರ ಅನುಸರಿಸುತ್ತಿರುವ ಮತ್ತು ರಾಜ್ಯಗಳ ಮೇಲೂ ಹೇರಲಾಗುತ್ತಿರುವ ನವ-ಉದಾರವಾದಿ ನೀತಿಗಳಲ್ಲದೆ, ಆರ್ಥಿಕ ಒಕ್ಕೂಟವಾದದ ನೀತಿಗಳ ತೀವ್ರ ಉಲ್ಲಂಘನೆಯಿಂದ ರಾಜ್ಯಗಳ ಸಂಪನ್ಮೂಲ ಸಂಗ್ರಹ ಮೂಲಗಳು ಕಡಿಮೆಯಾಗಿ ಬೊಕ್ಕಸ ಬರಿದಾಗುತ್ತಿರುವುದು. ಇದು ಯಾಕೆ ಹೇಗೆ ನಡೆಯುತ್ತಿದೆ ಎಂದು ಲೇಖಕರು ಕರ್ನಾಟಕದ ನಿರ್ದಿಷ್ಟ ಉದಾಹರಣೆ ಮತ್ತು ಅಂಕೆ ಸಂಖ್ಯೆಗಳೊಂದಿಗೆ ತಿಳಿಸಿದ್ದಾರೆ.

ರಾಜ್ಯಗಳು ತೈಲದ ತೆರಿಗೆ ಕಡಿತ ಮಾಡಲು ಏಕೆ ಹಿಂಜರಿಯುತ್ತಿವೆ?



ಪ್ರೊ. ಟಿ.ಆರ್. ಚಂದ್ರಶೇಖರ

ನಮ್ಮದು ಒಕ್ಕೂಟ (ಫೆಡರೆಲ್) ರಾಜಕೀಯ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಎರಡೂ ಪಕ್ಷಗಳಿಗೆ – ರಾಜ್ಯಗಳು ಮತ್ತು ಒಕ್ಕೂಟ ಸರ್ಕಾರ –– ಸಂವಿಧಾನದಲ್ಲಿ ಸಮಾನವಾದ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ನೀಡಲಾಗಿದೆ. ಇವೆರಡರ ನಡುವಣ ಸಂಬಂಧದಲ್ಲಿ ಅತ್ಯಂತ ವಿವಾದಾತ್ಮಕವಾದುದೆಂದರೆ ಹಣಕಾಸು ಸಂಬಂಧ. ಇದು ವಿವಾದಾತ್ಮಕ, ಏಕೆಂದರೆ ಒಕ್ಕೂಟ ಸರ್ಕಾರದ ತೆರಿಗೆಗಳೆಲ್ಲ ಹೆಚ್ಚು ಉತ್ಪತ್ತಿ ನೀಡುವ ತೆರಿಗೆಗಳಾಗಿದ್ದರೆ ರಾಜ್ಯಗಳ ತೆರಿಗೆಗಳು ಕಡಿಮೆ ಉತ್ಪತ್ತಿ ನೀಡುವ ತೆರಿಗೆಗಳು. ಇದಲ್ಲದೆ 2014 ರಿಂದ ಒಕ್ಕೂಟ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಸಂವಿಧಾನ ನೀಡಿರುವ ಅಧಿಕಾರಗಳನ್ನೆಲ್ಲ ತನ್ನಲ್ಲಿ ಕೇಂದ್ರೀಕರಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದೆ.

ಇದಕ್ಕೆ ಅನೇಕ ನಿದರ್ಶನಗಳಿವೆ. ಉದಾ: ಕೃಷಿ ಕಾಯಿದೆಗಳು (ಈಗ ಅವನ್ನು ಒಕ್ಕೂಟ ರದ್ದುಪಡಿಸಿದೆ, ಅದು ಬೇರೆ ವಿಚಾರ). ಸಂವಿಧಾನದ ಪ್ರಕಾರ ರಾಜ್ಯ ಪಟ್ಟಿಯಲ್ಲಿರುವ ಕೃಷಿಯ ಬಗ್ಗೆ ಕಾಯಿದೆ ರೂಪಿಸುವ ಹಕ್ಕನ್ನು ಸಂವಿಧಾನ ರಾಜ್ಯಗಳಿಗೆ ನೀಡಿದೆ. ಆದರೆ 'ವ್ಯಾಪಾರ, ವಾಣಿಜ್ಯ ಮತ್ತು ಉತ್ಪಾದನೆ, ಪೂರೈಕೆ ಮತ್ತು ವಿತರಣೆ' ಎಂಬುದು ಸಂವಿಧಾನದ ಸಂಯುಕ್ತ ಪಟ್ಟಿಯ 33 ನೆಯ ಕ್ರಮ ಸಂಖ್ಯೆಯಲ್ಲಿದೆ ಎಂದು ಒಕ್ಕೂಟ ಸರ್ಕಾರವು ನೆಪ ಮಾಡಿ ರಾಜ್ಯಗಳ ಅಧಿಕಾರಗಳನ್ನು ಹರಣ ಮಾಡಿ ಅವುಗಳನ್ನು ತನ್ನ ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಅನೇಕ ದಶಕಗಳಿಂದ ರಾಜ್ಯಗಳು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದ ವೈದ್ಯಕೀಯ-ದಂತ ವೈದ್ಯಕೀಯ ಪ್ರವೇಶ ಪರೀಕ್ಷೆಗಳನ್ನು 'ನೀಟ್' ಎಂಬ ಕ್ರಮದ ಮೂಲಕ ಒಕ್ಕೂಟ ಸರ್ಕಾರವು ನಡೆಸುವ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಸಂವಿಧಾನವು ತೆರಿಗೆ ವಿಧಿಸುವ ಹಕ್ಕನ್ನು ರಾಜ್ಯಗಳಿಗೂ ನೀಡಿತ್ತು. ಆದರೆ ಇದನ್ನು 'ಒಂದು ದೇಶ–ಒಂದು ತೆರಿಗೆ' ಎಂಬ ಘೋಷಣೆಯಡಿಯಲ್ಲಿ ಒಕ್ಕೂಟ ಸರ್ಕಾರವು ತನ್ನ ವಶ ಮಾಡಿಕೊಂಡಿದೆ. ಇಂತಹ ಅನೇಕ ಘಟನೆಗಳಿವೆ.

ಒಟ್ಟಾರೆ ಕಳೆದ 72 ವರ್ಷಗಳಿಂದ ಎಲ್ಲ ಇತಿ–ಮಿತಿಗಳ ನಡುವೆ ಒಕ್ಕೂಟ ಸಂಬಂಧವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗಿತ್ತು. ಆದರೆ 2014 ರಿಂದ ಈ ವ್ಯವಸ್ಥೆಗೆ ಅಪಾಯವುಂಟು ಮಾಡುವ ರೀತಿಯ ಬೆಳವಣಿಗೆಗಳು ನಿರಂತರವಾಗಿ ನಡೆಯುತ್ತಿವೆ. ಈ ಪ್ರಬಂಧದ ಮೊದಲ ಭಾಗದಲ್ಲಿ ಹೇಗೆ ಒಕ್ಕೂಟ ಸರ್ಕಾರವು 2014 ರಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ ಮಾಡಿಕೊಂಡು ಬರುತ್ತಿದೆ ಎಂಬುದನ್ನು ಸ್ಥೂಲವಾಗಿ ವಿವರಿಸಲಾಗಿದೆ. ಎರಡನೆಯ ಭಾಗದಲ್ಲಿ ಒಕ್ಕೂಟ–ರಾಜ್ಯಗಳ ನಡುವಣ ಹಣಕಾಸು ಸಂಬಂಧವನ್ನು ಹೇಗೆ ಒಕ್ಕೂಟ ಸರ್ಕಾರ ಕೆಡಿಸುತ್ತಿದೆ ಮತ್ತು ಇದರಿಂದ ಕರ್ನಾಟಕಕ್ಕೆ ಏನೆಲ್ಲ ಅನ್ಯಾಯವಾಗುತ್ತಿದೆ ಎಂಬುದನ್ನು ಚರ್ಚಿಸಲಾಗಿದೆ.

ಒಕ್ಕೂಟ ಸರ್ಕಾರದಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ

ದಕ್ಷಿಣ ಭಾರತದ ಐದು ರಾಜ್ಯಗಳು (ಆಂಧ್ರ, ತೆಲಂಗಾಣ, ಕರ್ನಾಟಕ ತಮಿಳುನಾಡು ಮತ್ತು ಕೇರಳ) ದೇಶದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. 19.25 ಮತ್ತು ದೇಶದ ಜನಸಂಖ್ಯೆಯಲ್ಲಿ ಶೇ.20.67 ಪಾಲು ಪಡೆದಿವೆ. ಆದರೆ ದೇಶದ ಜಿಡಿಪಿಗೆ ಇವುಗಳ ಕೊಡುಗೆ ಶೇ.30.01. ಆದರೆ ಉತ್ತರ ಭಾರತದ ಐದು ರಾಜ್ಯಗಳು (ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಗುಜರಾತ್ ಮತ್ತು ರಾಜಸ್ಥಾನ) ದೇಶದ ಭೌಗೋಳಿಕ ವಿಸ್ತೀರ್ಣದಲ್ಲಿ ಶೇ.28.92 ರಷ್ಟು ಮತ್ತು ದೇಶದ ಜನಸಂಖ್ಯೆಯಲ್ಲಿ ಶೇ.38.47 ಪಾಲು ಪಡೆದಿವೆ. ಆದರೆ ದೇಶದ ಜಿಡಿಪಿಗೆ ಇವುಗಳ ಕಾಣಿಕೆ ಕೇವಲ ಶೇ.17.30. ದೇಶದಲ್ಲಿ 2018–19ರಲ್ಲಿ ಒಟ್ಟು ಸಂಗ್ರಹವಾದ ನೇರ ತೆರಿಗೆ ರೂ. 11.38 ಲಕ್ಷ ಕೋಟಿ. ಇದರಲ್ಲಿ ದಕ್ಷಿಣ ಭಾರತದ ರಾಜ್ಯಗಳ ಕೊಡುಗೆ ರೂ.3.73 ಲಕ್ಷ ಕೋಟಿ (ಶೇ.32.78). ಆದರೆ ಉತ್ತರ ಭಾರತದ ಐದು ರಾಜ್ಯಗಳ ಕಾಣಿಕೆ ರೂ.1.10 ಲಕ್ಷ ಕೋಟಿ (ಶೇ.9.37). ಇದಿಷ್ಟೆ ಅಲ್ಲ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ, ತಲಾ ವರಮಾನದಲ್ಲಿ, ಆರೋಗ್ಯ ಮತ್ತು ಶೈಕ್ಷಣಿಕ ವಲಯಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳು ಮುಂಚೂಣಿಯಲ್ಲಿವೆ. ನೀತಿ ಆಯೋಗ ಪ್ರಕಟಿಸಿರುವ ವರದಿಯ ಪ್ರಕಾರ ಬಹುಮುಖಿ ಬಡತನದ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ(ಶೇ.25.01) ದಕ್ಷಿಣ ಭಾರತದ ರಾಜ್ಯಗಳಲ್ಲಿ ಕೆಳಮಟ್ಟದಲ್ಲಿದ್ದರೆ ಉತ್ತರ ಭಾರತದ ರಾಜ್ಯಗಳಲ್ಲಿ ಇದು ಶೇಕಡ 30ಕ್ಕಿಂತ ಅಧಿಕವಾಗಿದೆ.

ಆದರೆ ದಕ್ಷಿಣದ ರಾಜ್ಯಗಳ ಸಿದ್ಧಿ–ಸಾಧನೆಗಳನ್ನು ಇಂದಿನ ಒಕ್ಕೂಟ ಸರ್ಕಾರ ಗುರುತಿಸಲು ಸಿದ್ಧವಿಲ್ಲ. ಬದಲಾಗಿ ಇವುಗಳನ್ನು ಹೀಯಾಳಿಸಲಾಗುತ್ತಿದೆ. ಉತ್ತರ ಪ್ರದೇಶದ ಮಾದರಿ–ಗುಜರಾತ್ ಮಾದರಿಯನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಪ್ರಧಾನಮಂತ್ರಿ–ಇತರೆ ಮಂತ್ರಿಗಳು ಅಬ್ಬರಿಸುತ್ತಿದ್ದಾರೆ. ದೇಶದ ಜಿಡಿಪಿಗೆ ದಕ್ಷಿಣದ ರಾಜ್ಯಗಳ ಕೊಡುಗೆ ಅಪಾರ. ದೇಶದ ತೆರಿಗೆ ರಾಶಿಗೆ ಇವುಗಳ ಕೊಡುಗೆ ಅಪಾರ. ಈ ರಾಜ್ಯಗಳ ಸಾಧನೆಗೆ ತಕ್ಕುದಾದ ಬೆಂಬಲವನ್ನು ಒಕ್ಕೂಟ ಸರ್ಕಾರ ನೀಡುತ್ತಿಲ್ಲ. ತೆರಿಗೆ ಹಣವನ್ನು ರಾಜ್ಯಗಳಿಗೆ ಹಂಚುವುದರಲ್ಲಿ ಮತ್ತು ಸಹಾಯ ಅನುದಾನವನ್ನು ನೀಡುವಲ್ಲಿ ಒಕ್ಕೂಟ ಸರ್ಕಾರ ತಾರತಮ್ಯ ಮಾಡುತ್ತಿದೆ. ಉದಾ: ಒಕ್ಕೂಟ ತೆರಿಗೆ ರಾಶಿಯಲ್ಲಿ (ರೂ.81.66 ಲಕ್ಷ ಕೋಟಿ) 15ನೆಯ ಹಣಕಾಸು ಆಯೋಗದ ಶಿಫಾರಸ್ಸಿನಂತೆ 2022–23ರಲ್ಲಿ ದಕ್ಷಿಣ ಭಾರತದ ರಾಜ್ಯಗಳಿಗೆ ಒಕ್ಕೂಟದ ಹಂಚಿಕೊಳ್ಳುವ ತೆರಿಗೆ ರಾಶಿಯಿಂದ ದೊರೆಯುವ ಮೊತ್ತ 1.29 ಲಕ್ಷ ಕೋಟಿ (ಶೇ.15.79)ಯಾದರೆ ಉತ್ತರ ಭಾರತದ ರಾಜ್ಯಗಳಿಗೆ ದೊರೆಯುವ ಮೊತ್ತ ರೂ.3.09 ಲಕ್ಷ ಕೋಟಿ (ಶೇ.37.84). ಹಿಂದುಳಿದ ರಾಜ್ಯಗಳಿಗೆ ಹೆಚ್ಚು ಹೆಚ್ಚು ನೆರವು ಬೇಕು ಎಂಬುದ ಬಗ್ಗೆ ಭಿನ್ನಾಭಿಪ್ರಾಯ ಸಾಧ್ಯವಿಲ್ಲ. ಆದರೆ ದಕ್ಷಿಣ ಭಾರತದ ರಾಜ್ಯಗಳಿಗೆ ತಾರತಮ್ಯ ಮಾಡುವುದು, ಅವುಗಳನ್ನು ಹೀಯಾಳಿಸುವುದು, ಇಲ್ಲಿ ಧಾರ್ಮಿಕ ದಳ್ಳುರಿಯನ್ನು ಹಚ್ಚುವುದಕ್ಕೆ ಪ್ರಯತ್ನಿಸುವುದು ಸಲ್ಲ. ದಕ್ಷಿಣ ಭಾರತದ ಪ್ರಗತಿಪರ ಅಭಿವೃದ್ಧಿಗೆ ಅವು ಕಾಪಿಟ್ಟುಕೊಂಡು ಬರುತ್ತಿರುವ ಧಾರ್ಮಿಕ ಸಹಿಷ್ಣುತೆ, ಸಾಮಾಜಿಕ ನ್ಯಾಯದ ನೀತಿಗಳು ಮತ್ತು ಶಿಕ್ಷಣ–ಆರೋಗ್ಯಕ್ಕೆ ನೀಡುತ್ತಿರುವ ಆದ್ಯತೆ ಮುಂತಾದ ಸಂಗತಿಗಳ ಕಾಣಿಕೆ ಮಹತ್ವದ್ದಾಗಿದೆ. ಇವುಗಳಿಗೆ ವಿರುದ್ಧವಾದ ಸಂಗತಿಗಳು ಉತ್ತರ ಭಾರತದ ರಾಜ್ಯಗಳ ಹಿಂದುಳಿದಿರುವಿಕೆಗೆ ಕಾರಣವಾಗಿವೆ.

ಕರ್ನಾಟಕ ಅನುಭವಿಸುತ್ತಿರುವ ಅನ್ಯಾಯ

ಮೊದಲನೆಯದಾಗಿ 15ನೆಯ ಹಣಕಾಸು ಆಯೋಗವು ಒಕ್ಕೂಟ ತೆರಿಗೆ ರಾಶಿಯಲ್ಲಿ ಕರ್ನಾಟಕದ ಪಾಲನ್ನು ಹಿಂದಿನ ಶೇ.4.713 ರಷ್ಟಿದ್ದುದನ್ನು ಶೇ. 3.647ಕ್ಕಿಳಿಸಿದೆ. ಇಲ್ಲಿನ ಕಡಿತದ ಪ್ರಮಾಣಾಂಶ ಶೇ. (–)1.066. ದೇಶದಲ್ಲಿ ಅತಿ ಹೆಚ್ಚು ಕಡಿತಕ್ಕೆ ಕರ್ನಾಟಕ ಒಳಗಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು 15ನೆಯ ಹಣಕಾಸು ಆಯೋಗವು ಕರ್ನಾಟಕಕ್ಕೆ 2020–21ರಲ್ಲಿ ವಿಶೇಷ ಅನುದಾನ ರೂ.5495 ಕೋಟಿ ಶಿಫಾರಸ್ಸು ಮಾಡಿತ್ತು. ಈ ಶಿಫಾರಸ್ಸನ್ನು ಕರ್ನಾಟಕವನ್ನು ಪ್ರತಿನಿಧಿಸುವ ವಿತ್ತ ಮಂತ್ರಿ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ತಿರಸ್ಕರಿಸಿದ್ದರು. ಒಂದು ಸಂವಿಧಾನಾತ್ಮಕ ಸಂಸ್ಥೆಯ ಶಿಫಾರಸ್ಸಿನಂತೆ ತನ್ನ ಪಾಲನ್ನು ಪಡೆದುಕೊಳ್ಳುವುದು ಕರ್ನಾಟಕದ 'ಡಬಲ್ ಎಂಜಿನ್' ಸರ್ಕಾರಕ್ಕೆ ಸಾಧ್ಯವಾಗಲಿಲ್ಲ.

ಇದಿಷ್ಟೆ ಅಲ್ಲ. ದೊಡ್ಡ ಪ್ರಮಾಣದಲ್ಲಿ ಕರ್ನಾಟಕಕ್ಕೆ ಒಕ್ಕೂಟ ಸರ್ಕಾರವು ಅನ್ಯಾಯವೆಸಗುತ್ತಿದೆ. ಒಕ್ಕೂಟ ಸರ್ಕಾರವು ರಾಜ್ಯಗಳಿಗೆ ಪ್ರತಿ ವರ್ಷ ತನ್ನ ಬಜೆಟ್ಟಿನಲ್ಲಿ ಎರಡು ರೀತಿಯಲ್ಲಿ ಅನುದಾನ ನೀಡುತ್ತದೆ. (1). ಒಕ್ಕೂಟ ತೆರಿಗೆ ರಾಶಿಯಲ್ಲಿ ಪಾಲು. (2). ಒಕ್ಕೂಟ ರಾಜ್ಯಗಳಿಗೆ ನೀಡುವ ಸಹಾಯಾನುದಾನ. ಕರ್ನಾಟಕದ 2009–10ರ ಒಟ್ಟು ಬಜೆಟ್ ಮೊತ್ತದಲ್ಲಿ ಒಕ್ಕೂಟ ತೆರಿಗೆ ರಾಶಿಯಲ್ಲಿನ ವರ್ಗಾವಣೆ ಪಾಲು ಶೇ. 12.13 ಮತ್ತು ಸಹಾಯಾನುದಾನದಲ್ಲಿ ವರ್ಗಾವಣೆ ಪಾಲು ಶೇ. 12.99ರಷ್ಟಿತ್ತು. ಇವೆರಡರ ಒಟ್ಟು ಪಾಲು ಶೇ. 25.12. ಇವುಗಳ ಪ್ರಮಾಣ 2022–23ರ ಬಜೆಟ್ಟಿನ ಗಾತ್ರದಲ್ಲಿ ಕ್ರಮವಾಗಿ ಶೇ. 11.21ಕ್ಕೆ ಮತ್ತು ಶೇ. 6.50ಕ್ಕಿಳಿದಿದೆ. ಒಟ್ಟು ಇಳಿಕೆ ಶೇ. 17.71. ಒಕ್ಕೂಟ ತೆರಿಗೆ ರಾಶಿಯಲ್ಲಿ ಕಡಿತವಾಗಿರುವುದರಿಂದ ಕರ್ನಾಟಕದ ಪಾಲು ಕಡಿಮೆಯಾಗಿರುವುದನ್ನು ಅರ್ಥ ಮಾಡಿಕೊಳ್ಳಬಹುದು. ಏಕೆಂದರೆ ಇದು 15ನೆಯ ಹಣಕಾಸು ಆಯೋಗವು ಒಕ್ಕೂಟ ತೆರಿಗೆ ರಾಶಿಯಲ್ಲಿ ಕರ್ನಾಟಕದ ಪಾಲನ್ನು ಶೇ. 4.713 ರಿಂದ ಶೇ. 3.647ಕ್ಕಿಳಿಸಿದೆ. ಆದರೆ ಸಹಾಯಾನುದಾನದಲ್ಲಿನ ಕಡಿತವನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? ಕರ್ನಾಟಕಕ್ಕೆ ಅದರ ಬಜೆಟ್ಟಿನ ಗಾತ್ರದಲ್ಲಿ ದೊರೆತಿದ್ದ ಸಹಾಯಾನುದಾನದ ಪ್ರಮಾಣ 2009–10ರಲ್ಲಿ ಶೇ. 12.99 ರಷ್ಟಿದ್ದುದು 2022–23ರಲ್ಲಿ ಶೇ. 6.50ಕ್ಕಿಳಿದಿದೆ. ಇದು ನೇರವಾಗಿ ಒಕ್ಕೂಟ ಸರ್ಕಾರ ಕರ್ನಾಟಕಕ್ಕೆ ಮಾಡಿರುವ ಅನ್ಯಾಯವಾಗಿದೆ.



ಕೃಪೆ: ಸತೀಶ್ ಆಚಾರ್ಯ

ಸೆಸ್ ಮತ್ತು ಸರ್ ಚಾರ್ಜ್ ತೆರಿಗೆಗಳಲ್ಲಿನ ಸಮಸ್ಯೆಗಳು

ಇದಲ್ಲದೆ ಒಕ್ಕೂಟ ಸರ್ಕಾರವು ಸೆಸ್ ಮತ್ತು ಸರ್ ಚಾರ್ಜ್ ವಿಧಿಸುವುದಕ್ಕೆ ಸಂಬಂಧಿಸಿದಂತೆ ಅನುಸರಿಸುತ್ತಿರುವ ನೀತಿಯಿಂದ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ. ಏಕೆಂದರೆ ಇವುಗಳಿಂದ ಸಂಗ್ರಹವಾಗುವ ಮೊತ್ತವನ್ನು ಉಳಿದ ತೆರಿಗೆಗಳಂತೆ ರಾಜ್ಯಗಳ ಜೊತೆ ಹಂಚಿಕೊಳ್ಳುವಂತಿಲ್ಲ. ಇದರ ಎಲ್ಲ ಉತ್ಪತ್ತಿಯನ್ನು ಪೂರ್ಣವಾಗಿ ಒಕ್ಕೂಟ ಸರ್ಕಾರವು ಅನುಭವಿಸುತ್ತದೆ. ಒಕ್ಕೂಟ ಸರ್ಕಾರಕ್ಕೆ ಅದರ ಒಟ್ಟು ಸ್ವೀಕೃತಿಯಲ್ಲಿ ಸೆಸ್ ಮತ್ತು ಸರ್‌ಚಾರ್ಜ್‌ಗಳ ಪಾಲು 2011–12ರಲ್ಲಿ ಶೇ. 10.4 ರಷ್ಟಿತ್ತು. ಅಂದರೆ 2011–12ರ ಒಟ್ಟು ಸ್ವೀಕೃತಿಯಲ್ಲಿ ಇದು ರೂ.1,37,146.88 ರಷ್ಟಾಗುತ್ತದೆ. ಇದೇ ರೀತಿಯಲ್ಲಿ 2020–21ರಲ್ಲಿ ಇದರ ಪ್ರಮಾಣ ಶೇ. 19.9ಕ್ಕೇರಿದೆ. ಇದು 2020–21ರ ಒಟ್ಟು ಸ್ವೀಕೃತಿಯಲ್ಲಿ ರೂ.6,86,610.69 ಕೋಟಿಯಾಗುತ್ತದೆ. ಒಕ್ಕೂಟ ಸರ್ಕಾರದ ಈ ತೆರಿಗೆಗಳ ಮೊತ್ತವಾದರೂ. 6,86,610.69 ಕೋಟಿಯನ್ನು ಒಕ್ಕೂಟದ ಹಂಚಿಕೊಳ್ಳುವ ತೆರಿಗೆ ರಾಶಿಗೆ ಸೇರಿಸಿದರೆ ಇದರಿಂದ ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲ ದೊರೆಯುತ್ತದೆ. ಈ ತೆರಿಗೆಗಳನ್ನು ಒಕ್ಕೂಟ ಹಂಚಿಕೆ ತೆರಿಗೆ ರಾಶಿಯಲ್ಲಿ ವಿಲೀನಗೊಳಿಸುವಂತೆ 15ನೆಯ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದೆ.

ಈಗಾಗಲೆ ಹೇಳಿರುವಂತೆ ಸಂವಿಧಾನಾತ್ಮಕ ಸಂಸ್ಥೆಗಳ ಬಗ್ಗೆ ನಮ್ಮ ಇಂದಿನ ಒಕ್ಕೂಟ ಸರ್ಕಾರಕ್ಕೆ ಗೌರವವಿಲ್ಲ. ಮೇಲಾಗಿ ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ಯಾವ ಉದ್ದೇಶಕ್ಕಾಗಿ ಸಂಗ್ರಹಿಸಲಾಗಿರುತ್ತದೋ ಅದೇ ಉದ್ದೇಶಕ್ಕೆ ಬಳಸಬೇಕು ಎಂಬ ನಿಯಮವಿದೆ. ಆದರೆ ಸಿ.ಎ.ಜಿ. ವರದಿಗಳ ಪ್ರಕಾರ ಸೆಸ್ ಮತ್ತು ಸರ್ ಚಾರ್ಜ್‌ಗಳ ಹಣವನ್ನು ಹೀಗೆ ಬಳಸುತ್ತಿಲ್ಲ. ಉದಾ: ಸಿ.ಎ.ಜಿ. ಯ 2018–19ರ ವರದಿ ಪ್ರಕಾರ 35 ಸೆಸ್‌ಗಳ ಮೂಲಕ ಸಂಗ್ರಹವಾದ ಮೊತ್ತ ರೂ. 2.74 ಲಕ್ಷ ಕೋಟಿ. ಇದರಲ್ಲಿ ರೂ.1.64 ಲಕ್ಷ ಕೋಟಿಯನ್ನು ಮಾತ್ರ ನಿದಗಿಪಡಿಸಿದ ಉದ್ದೇಶಗಳಿಗಾಗಿ ಬಳಕೆ ಮಾಡಲಾಗಿದೆ. ಉಳಿದ ರೂ.1.10 ಲಕ್ಷ ಕೋಟಿಯನ್ನು ನಿರ್ದಿಷ್ಟಪಡಿಸಿದ ನಿಧಿಗೆ ವರ್ಗಾಯಿಸಿಲ್ಲ. ಇದೇ ರೀತಿಯಲ್ಲಿ ಕಳೆದ ದಶಕದಲ್ಲಿ ಕ್ರೂಡ್ ಆಯಿಲ್ ಮೇಲಿನ ಸೆಸ್ ಮೂಲಕ ವಸೂಲಾದ ಮೊತ್ತ ರೂ.1.24 ಲಕ್ಷ ಕೋಟಿ. ಇದನ್ನು ನಿಗದಿಪಡಿಸಿರುವ ಮೀಸಲು ನಿಧಿಗೆ ಜಮಾ ಮಾಡಿಲ್ಲ. ಹೀಗೆಯೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಸಂಬಂಧಿಸಿದ ಸೆಸ್‌ಗಳನ್ನು ಯಾವ ಉದ್ದೇಶಕ್ಕಾಗಿ ಸೆಸ್ ವಿಧಿಸಲಾಗಿರುತ್ತದೊ ಅದಕ್ಕೆ ಬಳಕೆ ಮಾಡಿಲ್ಲ ಎಂಬುದು ಸಿ.ಎ.ಜಿ ವರದಿಯಲ್ಲಿನ ಅಭಿಪ್ರಾಯವಾಗಿದೆ.

ಒಟ್ಟಾರೆ, ಒಕ್ಕೂಟ ಸರ್ಕಾರವು ಹಣಕಾಸು ನಿರ್ವಹಣೆ ವಿಷಯದಲ್ಲಿ ತನ್ನ ಹಿತಾಸಕ್ತಿಗಳನ್ನು ಗಮನದಲ್ಲಿ ಇಟ್ಟುಕೊಳ್ಳುತ್ತಿದೆಯೆ ವಿನಾ ಒಕ್ಕೂಟ ವ್ಯವಸ್ಥೆಯ ಭಾಗವಾದ ರಾಜ್ಯಗಳ ಹಿತಾಸಕ್ತಿಗಳನ್ನು ಅದು ಕಡೆಗಣಿಸುತ್ತಿದೆ. ಉದಾ:

ಪೂಜಾ ಸ್ಥಳಗಳ ಕಾನೂನನ್ನು ದೃಢವಾಗಿ ಜಾರಿ ಮಾಡಿ

ವಿಭಜನಕಾರಿ ಹಾಗೂ ಪ್ರತಿಗಾಮಿ ವಿವಾದಗಳಿಗೆ ಕೊನೆ ಹಾಡಬೇಕೆಂಬ ಉದ್ದೇಶದಿಂದಲೇ ಸಂಸತ್ತು ಪಿ.ವಿ. ನರಸಿಂಹ ರಾವ್ ಸರಕಾರದ ಅವಧಿಯಲ್ಲಿ 1991ರ ಧಾರ್ಮಿಕ ಪೂಜಾ ಸ್ಥಳಗಳು (ವಿಶೇಷ ನಿಯಮಗಳು) ಕಾನೂನನ್ನು ರಚಿಸಿತ್ತು. ಈ ಕಾನೂನಿನ ಸೆಕ್ಷನ್ 3, ಪೂಜಾ ಸ್ಥಳಗಳನ್ನು ಪರಿವರ್ತಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸುತ್ತದೆ. 1947ರ ಆಗಸ್ಟ್ 15 ರಂದು ಇದ್ದಂಥ ಪೂಜಾ ಸ್ಥಳಗಳ ಸ್ವರೂಪವು ಆ ದಿನ ಇದ್ದಂತೆಯೇ ಮುಂದುವರಿಯಬೇಕೆಂದು ಸೆಕ್ಷನ್ 4 (1) ನಮೂದಿಸಿದೆ. ಪೂಜಾ ಸ್ಥಳಗಳ ಸ್ವರೂಪವನ್ನು ಬದಲಾಯಿಸುವುದಕ್ಕೆ ಸಂಬಂಧಿಸಿ ಹೊಸದಾಗಿ ಯಾವುದೇ ಉಪಕ್ರಮಕ್ಕೆ ಮುಂದಾಗುವುದನ್ನು ಸೆಕ್ಷನ್ 4 (2) ನಿಷೇಧಿಸಿದೆ.

— ಪ್ರಕಾಶ್ ಕಾರತ್ —

ರಾಮಜನ್ಮಭೂಮಿ ಚಳವಳಿ ನಡೆಯುತ್ತಿದ್ದ ಸಂದರ್ಭದಲ್ಲಿ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಮತ್ತು ಇತರ ಹಿಂದುತ್ವ ಸಂಘಟನೆಗಳು 'ಅಯೋಧ್ಯಾ ಸಿರ್ಫ್ ಏಕ್ ಝಂಕಿ ಹೈ, ಮಥುರಾ ಔರ್ ಕಾಶಿ ಬಾಕಿ ಹೈ' ಎಂಬ ಘೋಷಣೆ ಮೊಳಗಿಸಿದ್ದವು. 'ಅಯೋಧ್ಯೆ ಆರಂಭವಷ್ಟೇ. ಮಥುರಾ ಮತ್ತು ಕಾಶಿ ಬಾಕಿಯಿದೆ' ಎನ್ನುವುದು ಅದರ ಅರ್ಥ.

ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಇದ್ದ ಜಾಗದಲ್ಲೇ ರಾಮ ಮಂದಿರ ಕಟ್ಟುವ ಹೋರಾಟದಲ್ಲಿ ಗೆಲುವು ಸಾಧಿಸಿದ ನಂತರ; ಅಯೋಧ್ಯೆಯಲ್ಲಿ ಮಂದಿರಕ್ಕೆ ಶಿಲಾನ್ಯಾಸ ಮಾಡಿದ ಎರಡು ವರ್ಷಕ್ಕಿಂತ ಕಡಿಮೆ ಅವಧಿಯಲ್ಲಿ, ಅದೇ ಶಕ್ತಿಗಳು ಕಾಶಿ ಮತ್ತು ಮಥುರೆಗಾಗಿ ಹೋರಾಟ ಆರಂಭಿಸಿವೆ. ವಾರಾಣಸಿಯ ಜ್ಞಾನವಾಪಿ ಮಸೀದಿ ಮತ್ತು ಮಥುರೆಯ ಷಾಹಿ ಈದ್ಗಾ ಅವುಗಳ ಟಾರ್ಗೆಟ್ ಆಗಿವೆ. 17ನೇ ಶತಮಾನದಲ್ಲಿದ್ದ ದೇವಸ್ಥಾನಗಳ ಮೇಲೆ ಅವುಗಳನ್ನು ನಿರ್ಮಿಸಲಾಗಿದೆ ಎನ್ನುವುದು ಅವುಗಳ ವಾದವಾಗಿದೆ. ಮೊಘಲ್ ಸಾಮ್ರಾಟ ಔರಂಗಜೇಬನ ಕಾಲದಲ್ಲಿ ಅದು ನಡೆದಿತ್ತು ಎನ್ನುವುದು ಐತಿಹಾಸಿಕ ವಾಸ್ತವವಾಗಿದೆ.

ಇತಿಹಾಸದ ತಪ್ಪುಗಳನ್ನು ಸರಿಪಡಿಸುವುದು ಆರ್‌ಎಸ್‌ಎಸ್ ಮತ್ತು ಹಿಂದೂತ್ವ ಶಕ್ತಿಗಳ ಆದ್ಯತೆಯಾಗಿದೆ. ಇತಿಹಾಸವನ್ನು ಕಾಮಾಲೆ ಕಣ್ಣಿನಿಂದ ನೋಡುವ ಅವರ ದೃಷ್ಟಿಯಲ್ಲಿ ಮುಸ್ಲಿಂ ಆಡಳಿತವು ಭಾರತೀಯರಿಗೆ ದಾಸ್ಯತ್ವವಾಗಿದ್ದು ಈ ಗುಲಾಮಗಿರಿಯ ಎಲ್ಲ ಕುರುಹುಗಳನ್ನು ಅಳಿಸಿಹಾಕಬೇಕೆಂದು ಅವರು ಹೇಳುತ್ತಾರೆ. ಮಸೀದಿಗಳ ಅಸ್ತಿತ್ವವನ್ನು ಕಾನೂನು ಮೂಲಕವಾಗಿ ಪ್ರಶ್ನಿಸಲು ಆರಂಭಿಸಿದರೂ ಕಾಶಿ ಮತ್ತು ಮಥುರಾವನ್ನು 'ಕಬ್ಜಾ' ಮಾಡುವ ಕುತ್ಸಿತ ಹುನ್ನಾರ ಮೊದಲೇ ಆರಂಭವಾಗಿತ್ತು.

ಕಾನೂನು ಮಾರ್ಗದ ಮೂಲಕದ ಪ್ರಕ್ರಿಯೆಯಲ್ಲಿ ವಾರಾಣಸಿ ಮತ್ತು ಮಥುರಾ ಕೋರ್ಟ್‌ಗಳಲ್ಲಿ ಕಾಶಿ ವಿಶ್ವನಾಥ ಮಂದಿರ–ಜ್ಞಾನವಾಪಿ ಮಸೀದಿ ಹಾಗೂ ಕೃಷ್ಣ ಜನ್ಮಭೂಮಿ ದೇವಾಲಯ–ಈದ್ಗಾ ಜಮೀನಿನ ಸಂಬಂಧವಾಗಿ ಹಲವಾರು ಅರ್ಜಿಗಳನ್ನು ಸಲ್ಲಿಸಲಾಗಿದೆ. ದೆಹಲಿಯ ಕುತುಬ್ ಮಿನಾರ್, ಮಧ್ಯ ಪ್ರದೇಶದ ಭೋಜಶಾಲಾ ಸಂಕೀರ್ಣ ಮಾತ್ರವಲ್ಲದೆ ಆಗ್ರಾದ ತಾಜ್ ಮಹಲ್‌ನಲ್ಲಿ ಕೂಡ ಶಿಲ್ಪಗಳು ಮತ್ತು ದೇವತೆಗಳ ವಿಗ್ರಹಗಳಿವೆ ಎಂದು ವಾದಿಸಿಯೂ ಅರ್ಜಿಗಳನ್ನು ಸಲ್ಲಿಸಲಾಗಿದೆ.

ಇಂಥ ವಿಭಜನಕಾರಿ ಹಾಗೂ ಪ್ರತಿಗಾಮಿ ವಿವಾದಗಳಿಗೆ ಕೊನೆ ಹಾಡಬೇಕೆಂಬ ಉದ್ದೇಶದಿಂದಲೇ ಸಂಸತ್ತು ಪಿ.ವಿ. ನರಸಿಂಹ ರಾವ್ ಸರಕಾರದ ಅವಧಿಯಲ್ಲಿ 1991ರ ಧಾರ್ಮಿಕ ಪೂಜಾ ಸ್ಥಳಗಳು (ವಿಶೇಷ ನಿಯಮಗಳು) ಕಾನೂನನ್ನು ರಚಿಸಿತ್ತು. ಈ ಕಾನೂನಿನ ಸೆಕ್ಷನ್ 3, ಪೂಜಾ ಸ್ಥಳಗಳನ್ನು ಪರಿವರ್ತಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸುತ್ತದೆ. 1947ರ ಆಗಸ್ಟ್ 15 ರಂದು ಇದ್ದಂಥ ಪೂಜಾ ಸ್ಥಳಗಳ ಸ್ವರೂಪವು ಆ ದಿನ ಇದ್ದಂತೆಯೇ ಮುಂದುವರಿಯಬೇಕೆಂದು ಸೆಕ್ಷನ್ 4 (1) ನಮೂದಿಸಿದೆ. ಪೂಜಾ ಸ್ಥಳಗಳ ಸ್ವರೂಪವನ್ನು ಬದಲಾಯಿಸುವುದಕ್ಕೆ ಸಂಬಂಧಿಸಿ ಹೊಸದಾಗಿ ಯಾವುದೇ ಉಪಕ್ರಮಕ್ಕೆ ಮುಂದಾಗುವುದನ್ನು ಸೆಕ್ಷನ್ 4 (2) ನಿಷೇಧಿಸಿದೆ. ಯಾವುದೇ ಕಾನೂನು ಪ್ರಕ್ರಿಯೆಗಳು ಬಾಕಿಯಿದ್ದಲ್ಲಿ ಅವುಗಳು ಹಾಗೇ ಇರಬೇಕೆಂದೂ (ಸ್ಟಾಂಡ್ ಅಬೇಟೆಡ್) ಅದು ತಿಳಿಸಿದೆ. ಜಮೀನಿನ ಮೂಲ ದಾವೆಯ ಸಂಬಂಧ ವಿವಾದ ಕೋರ್ಟ್‌ಗಳಲ್ಲಿ ಇದ್ದಿದ್ದರಿಂದ ರಾಮಜನ್ಮಭೂಮಿ ವಿವಾದಕ್ಕೆ ಮಾತ್ರ ಇದರಿಂದ ವಿನಾಯಿತಿ ನೀಡಲಾಗಿತ್ತು.

ಜ್ಞಾನವಾಪಿ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ, ಮಸೀದಿ ಸಂಕೀರ್ಣದಲ್ಲಿ ಇರುವ 'ಮಾ ಶೃಂಗಾರಿ ಗೌರಿ' ವಿಗ್ರಹಕ್ಕೆ ಪೂಜೆ ಸಲ್ಲಿಸಲು ಅವಕಾಶ ಕೋರಿ ಕೆಲವು ಮಹಿಳೆಯರು ಸಲ್ಲಿಸಿದ್ದ ಅರ್ಜಿ ಆಧಾರದಲ್ಲಿ ವಾರಾಣಸಿಯ ಸಿವಿಲ್ ಕೋರ್ಟ್ ಮಸೀದಿ ಸಂಕೀರ್ಣದ ವಿಡಿಯೋಗ್ರಫಿ ಸಮೀಕ್ಷೆ ನಡೆಸುವಂತೆ ಆದೇಶಿಸಿತ್ತು. ಇದು ಧಾರ್ಮಿಕ ಪೂಜಾ ಸ್ಥಳಗಳ ಕಾನೂನಿಗೇ ವ್ಯತಿರಿಕ್ತವಾದ ಆದೇಶವಾಗಿದೆ. ಪೂಜಾ ಸ್ಥಳದ ಪ್ರಸ್ತುತ ಸ್ವರೂಪವನ್ನು ಪ್ರಶ್ನಿಸುವ ಅಥವಾ ಅದನ್ನು ಹೀಗಳೆಯುವ ಯಾವುದೇ ಪ್ರಯತ್ನ ಮಾಡಬಾರದೆಂಬ ನಿಯಮದ ಉಲ್ಲಂಘನೆಯಾಗಿದೆ. ವಿಡಿಯೋಗ್ರಫಿ ಸಮೀಕ್ಷೆ ನಡೆಸಿದ ರೀತಿಯೇ ಪ್ರಶ್ನಾರ್ಹವಾಗಿದೆ. ಮಸೀದಿಯ ಆವರಣದಲ್ಲಿರುವ ಕೊಳದಲ್ಲಿ ಒಂದು 'ಶಿವಲಿಂಗ' ಸಿಕ್ಕಿದೆ ಎಂಬ ವರದಿಯನ್ನು ಮಾಧ್ಯಮಗಳಿಗೆ ಸೋರಿಕೆ ಮಾಡಲಾಗಿದೆ. ಆ ಕಲ್ಲಿನ ರಚನೆಯು ಒಂದು ಕಾರಂಜಿಯಾಗಿದೆ ಎಂದು ಮಸೀದಿಯ ಆಡಳಿತ ಮಂಡಳಿಯವರು ಹೇಳಿದ್ದಾರೆ.

ಸಿವಿಲ್ ನ್ಯಾಯಾಲಯದ ಆದೇಶ ಪ್ರಶ್ನಿಸಿ ಹಾಗೂ ಪೂಜೆಗೆ ಅವಕಾಶ ಕೋರಿದ ಅರ್ಜಿಯನ್ನು ಮಾನ್ಯ ಮಾಡದಂತೆ ಕೋರಿ ಮಸೀದಿಯ ಅಧಿಕಾರಿಗಳು ಸುಪ್ರೀಂ ಕೋರ್ಟ್ ಮೊರೆ ಹೋದಾಗ; ಸರ್ವೋನ್ನತ ನ್ಯಾಯಾಲಯವು ವಿಡಿಯೋ ಸಮೀಕ್ಷೆಗೆ ತಡೆ ನೀಡಲಿಲ್ಲ. ಇಲ್ಲವೇ ಪೂಜಾ ಸ್ಥಳಗಳ ಕಾನೂನಿನ ಉಲ್ಲಂಘನೆಯಾಗುವ ಅರ್ಜಿಯನ್ನು ನಿರ್ಬಂಧಿಸಲು ಮಧ್ಯ ಪ್ರವೇಶ ಮಾಡಲೂ ಇಲ್ಲ. 'ಧಾರ್ಮಿಕ ಸ್ಥಳದ ಸ್ವರೂಪವನ್ನು ಖಚಿತಪಡಿಸಿಕೊಳ್ಳುವುದನ್ನು 1991ರ ಕಾನೂನು ನಿರ್ಬಂಧಿಸಿಲ್ಲ' ಎಂದು ಜಸ್ಟಿಸ್ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಹೇಳಿದೆ. ಇಂಥದ್ದೊಂದು ಧೋರಣೆಯು ಅಯೋಧ್ಯೆ ವಿವಾದದ ಸಂಬಂಧ 2019ರಲ್ಲಿ ಸ್ವತಃ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನ ಅಂತಃಸತ್ವಕ್ಕೇ ವಿರುದ್ಧವಾಗುತ್ತದೆ. ಆ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಹೀಗೆ ಹೇಳಿತ್ತು:

'ಕಾನೂನು ಪ್ರಭುತ್ವ ಮಾತ್ರವಲ್ಲದೆ ದೇಶದ ಪ್ರಜೆಗಳನ್ನು ಉದ್ದೇಶಿಸಿರುತ್ತದೆ. ಪ್ರಭುತ್ವವು ಕಾನೂನು ರೂಪಿಸುವ ಮೂಲಕ ಸಾಂವಿಧಾನಿಕ ಬದ್ಧತೆಯನ್ನು ಜಾರಿ ಮಾಡುತ್ತದೆ ಹಾಗೂ ಎಲ್ಲ ಧರ್ಮಗಳು ಮತ್ತು ಸಂವಿಧಾನದ ಮೂಲ ಲಕ್ಷಣದ ಭಾಗವಾದ ಜಾತ್ಯತೀತತೆಯ ಸಾಂವಿಧಾನಿಕ ಬಾಧ್ಯತೆಗಳನ್ನು ಈಡೇರಿಸುತ್ತದೆ. ಧಾರ್ಮಿಕ ಪೂಜಾ ಸ್ಥಳಗಳ ಕಾನೂನು ಭಾರತೀಯ ಸಂವಿಧಾನದಲ್ಲಿ ನಮೂದಿಸಲಾಗಿರುವ ಜಾತ್ಯತೀತತೆಯ ಬದ್ಧತೆಗೆ ನಿಸ್ಸಂದೇಹವಾದ ಬಾಧ್ಯತೆಯನ್ನು ಹೇರುತ್ತದೆ. ಹೀಗಾಗಿ ಈ ಕಾನೂನು ನಮ್ಮ ರಾಜಕೀಯ ವ್ಯವಸ್ಥೆಯ ಜಾತ್ಯತೀತ ಲಕ್ಷಣಗಳನ್ನು ರಕ್ಷಿಸುವ ಶಾಸನಾತ್ಮಕ ಸಾಧನವಾಗಿದೆ. ಪೂಜಾ ಸ್ಥಳಗಳ ಕಾನೂನು ನಮ್ಮ ಜಾತ್ಯತೀತ ಮೌಲ್ಯಗಳ ಅಗತ್ಯ ಲಕ್ಷಣವನ್ನು ರಕ್ಷಿಸುವ ಶಾಸನಾತ್ಮಕ ಮಧ್ಯಪ್ರವೇಶವಾಗಿದೆ'.

ಪೂಜಾ ಸ್ಥಳಗಳ ಕಾನೂನಿನ ಸಿಂಧುತ್ವವನ್ನು ಇಷ್ಟು ಸ್ಪಷ್ಟವಾಗಿ ಸರ್ವೋನ್ನತ ನ್ಯಾಯಾಲಯವೇ ಹೇಳಿರುವಾಗ ಅದು ಈಗ ಕಾನೂನಿನ ನಿಯಮಗಳನ್ನು ದೃಢವಾಗಿ ಎತ್ತಿ ಹಿಡಿಯದಿರುವುದು ಹಾಗೂ ವಾರಾಣಸಿಯ ಸಿವಿಲ್ ಕೋರ್ಟ್‌ನಲ್ಲಿ ಸಲ್ಲಿಕೆಯಾಗಿರುವ ಅರ್ಜಿಯ ಪ್ರಕ್ರಿಯೆಗಳನ್ನು ತಿರಸ್ಕರಿಸದಿರುವುದು ತೀರಾ ನಿರಾಶಾದಾಯಕ ಸಂಗತಿಯಾಗಿದೆ. ಅದರ ಬದಲು, ವಾರಾಣಸಿ ಜಿಲ್ಲಾ ಹಿರಿಯ ನ್ಯಾಯಾಧೀಶರು ಅರ್ಜಿಯ ವಿಚಾರಣೆ ನಡೆಸುವಂತೆ ನಿರ್ದೇಶಿಸಿದೆ. ಒಂದು ಸ್ಥಳಧ ಧಾರ್ಮಿಕ ಸ್ವರೂಪವನ್ನು ಖಚಿತಪಡಿಸಿಕೊಳ್ಳಲು ಕ್ರಮಕೈಗೊಳ್ಳುವುದು ಕಾನೂನು ಕ್ರಮಗಳ ಸುನಾಮಿಗೇ ಹಾದಿ ಮಾಡಿಕೊಟ್ಟಂತಾಗುತ್ತದೆ. ಹಾಗೂ ಅದರ ಪರಿಣಾಮವಾಗಿ ಅಂತರ್–ಸಮುದಾಯಗಳ ಸಂಬಂಧದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.

ಕಾಶಿ ಮತ್ತು ಮಥುರೆಯಲ್ಲಿನ ಧಾರ್ಮಿಕ ಸ್ಥಳಗಳ ಸ್ವರೂಪವನ್ನು ಬದಲಾಯಿಸಲು ಕಾನೂನಾತ್ಮಕ ಸವಾಲನ್ನು ಒಡ್ಡಲು ಅವಕಾಶಗಳನ್ನು ನೀಡುವಲ್ಲಿ ನ್ಯಾಯಾಂಗದ ಕೆಳ ಹಂತದ ನ್ಯಾಯಾಧೀಶರು ಶಾಮೀಲಾಗಿರುವುದರಿಂದ ಪರಿಸ್ಥಿತಿ ಇನ್ನಷ್ಟು ಸಂಕೀರ್ಣಗೊಂಡಿದೆ. ಮಥುರೆಯಲ್ಲಿ ಜಿಲ್ಲಾ ಜಡ್ಜ್, ಕೆಳ ನ್ಯಾಯಾಲಯವೊಂದರ ನಿರ್ಧಾರವನ್ನು ತಿರಸ್ಕರಿಸಿ ಮಸೀದಿ ಕಟ್ಟಲಾಗಿರುವ ಜಾಗದ ಒಡೆತನ ಬಯಸಿ ಶ್ರೀಕೃಷ್ಣ ಜನ್ಮಭೂಮಿ ಟ್ರಸ್ಟ್ ಮತ್ತಿತರ ಸಂಘಟನೆಗಳು ಸಲ್ಲಿಸಿರುವ ಮನವಿಗೆ ಅವಕಾಶ ಕಲ್ಪಿಸಿದ್ದಾರೆ. 1991ರ ಕಾನೂನು ಆರಂಭವಾಗುವುದಕ್ಕೂ ಮುಂಚಿನ ಮೇಲ್ಮನವಿಗಳು, ಕಾನೂನುಗಳು ಮತ್ತು ಪ್ರಕ್ರಿಯೆಗಳಿಗೆ ಅದು ಅನ್ವಯವಾಗುವುದಿಲ್ಲ ಎಂಬ ಕಾನೂನಿನಲ್ಲಿರುವ ಒಂದು ನಿಯಮವನ್ನು ಆಧಾರವಾಗಿಸಿಕೊಂಡು ಜಿಲ್ಲಾ ಜಡ್ಜ್ ಈ ಕೆಲಸ ಮಾಡಿದ್ದಾರೆ. ದೇವಸ್ಥಾನ ಮತ್ತು ಮಸೀದಿಯ ಆಡಳಿತ ಮಂಡಳಿಗಳ ನಡುವೆ 1974ರಲ್ಲಿ ಏರ್ಪಟ್ಟ ರಾಜಿಯನ್ನು ಪ್ರಶ್ನಿಸಿ ಅರ್ಜಿಯನ್ನು ಸಲ್ಲಿಸಲಾಗಿದೆ.

ಜನರು ಬೆಲೆಯೇರಿಕೆ ಮತ್ತು ಆರ್ಥಿಕ ಕಷ್ಟಗಳನ್ನು ಎದುರಿಸುತ್ತಿರುವಾಗ ಅವರ ಸಂಕಷ್ಟಗಳಿಂದ ಗಮನವನ್ನು ಬೇರೆಡೆ ಸೆಳೆಯಲು ಮಂದಿರ–ಮಸೀದಿ ವಿವಾದಗಳನ್ನು ಕೆದಕಲಾಗುತ್ತಿದೆ ಎಂದು ಅನೇಕ ತಜ್ಞರು ಮತ್ತು ರಾಜಕೀಯ ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆ. 2024ರ ಲೋಕಸಭೆ ಚುನಾವಣೆಗಳಲ್ಲಿ ಬಿಜೆಪಿಗೆ ಹೆಚ್ಚು ಲಾಭ ಮಾಡಿಕೊಡುವ ಉದ್ದೇಶದಿಂದ ಈ ರೀತಿಯ ಧ್ರುವೀಕರಣದ ವಿಚಾರಗಳನ್ನು ಕೆದಕಿ ನೆಲವನ್ನು ಹದಗೊಳಿಸಲಾಗುತ್ತಿದೆ ಎಂದೂ ಕೆಲವು ರಾಜಕೀಯ ವೀಕ್ಷಕರು ಭಾವಿಸಿದ್ದಾರೆ.

ಹೌದು, ಇದೆಲ್ಲ ನಿಜವೇ. ಆದರೆ ಇನ್ನೂ ಆಳವಾಗಿ ಯೋಚಿಸಿದರೆ ಗೊತ್ತಾಗುವ ಸಂಗತಿಯೊಂದಿದೆ. ತನ್ನ ಹಿಂದೂತ್ವ ಇಮೇಜ್‌ಗೆ ತಕ್ಕಂತೆ ಭಾರತವನ್ನು ಪುನರ್‌ರಚಿಸುವ ಹಿಂದೂತ್ವ ಅಜೆಂಡಾವನ್ನು ಜಾರಿ ಮಾಡಲು ಬಿಜೆಪಿ–ಆರ್‌ಎಸ್‌ಎಸ್ ಕೂಟ ಸಿದ್ಧವಾಗಿದೆ ಎನ್ನುವುದೇ ಆ ವಿಚಾರವಾಗಿದೆ.


ಯಾವುದೇ ಚುನಾವಣೆ ಅಥವಾ ರಾಜಕೀಯ ಚದುರಂಗದಾಟಕ್ಕಿಂತ ಮೂಲಭೂತವಾದ ಸವಾಲು ಇಲ್ಲಿ ಅಡಕವಾಗಿದೆ. ಬಿಜೆಪಿ–ವಿರೋಧಿ ಶಕ್ತಿಗಳು ಇದನ್ನು ಎಷ್ಟು ಬೇಗ ಮನವರಿಕೆ ಮಾಡಿಕೊಳ್ಳುತ್ತವೋ ಈ ದೇಶಕ್ಕೆ ಅಷ್ಟು ಒಳ್ಳೆಯದಾಗುತ್ತದೆ.

ಅನು: ವಿಶ್ವ



ವಿವಾದಗ್ರಸ್ತಗೊಳಿಸಲಾದ ಜ್ಞಾನವಾಪಿ ಮಸೀದಿ

ಇಡೀ ಆರ್ಥಿಕತೆ ಮೇಲೆ ಪರಿಣಾಮ ಬೀರಬಲ್ಲ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ –– ಡಿಮಾನಿಟೈಸೇಶನ್, ದೇಶವ್ಯಾಪಿ ಲಾಕ್‌ಡೌನ್ – ಸಂದರ್ಭದಲ್ಲಿ ಒಕ್ಕೂಟ ಸರ್ಕಾರವು ರಾಜ್ಯಗಳ ಜೊತೆಯಲ್ಲಿ ಸಮಾಲೋಚಿಸದೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿದ್ದು ಮತ್ತು ಸಂಸತ್ತಿನಲ್ಲಿ ಚರ್ಚೆಯಿಲ್ಲದೆ, ಕಾರಣಗಳನ್ನು ವಿವರಿಸದೆ ಕೃಷಿ ಕಾಯ್ದೆಗಳನ್ನು ರದ್ದುಪಡಿಸಿದ್ದು ಮುಂತಾದವು. ಈ ರೀತಿಯ ಒಕ್ಕೂಟದ ನಡೆಯಿಂದ ರಾಜ್ಯಗಳಿಗೆ ಅನ್ಯಾಯವಾಗುತ್ತಿದೆ. ಈ ಎಲ್ಲ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲಿನ ಒಕ್ಕೂಟ ಮತ್ತು ರಾಜ್ಯಗಳ ನಡುವಣ ಸಂಬಂಧವನ್ನು, ವಿಶೇಷವಾಗಿ ಹಣಕಾಸು ಸಂಬಂಧದ ಬಗ್ಗೆ ವಿಶೇಷ ಆಯೋಗದಿಂದ ಅಧ್ಯಯನ ನಡೆಸುವ ಅಗತ್ಯವಿದೆ. ಈ ಹಿಂದೆ ನೇಮಿಸಿದ್ದ ಸರ್ಕಾರಿಯಾ ಆಯೋಗದಂತೆ ಮತ್ತೊಂದು ತಜ್ಞರ ಆಯೋಗವನ್ನು ನೇಮಿಸಿ ಬದಲಾಗುತ್ತಿರುವ ಒಕ್ಕೂಟ–ರಾಜ್ಯಗಳ ನಡುವಣ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳ ಬಗ್ಗೆ, ವಿಶೇಷವಾಗಿ ಹಣಕಾಸು ಸಂಬಂಧದ ಬಗ್ಗೆ ಅಧ್ಯಯನ ನಡೆಸಿ ವರದಿಯೊಂದನ್ನು ಪಡೆದುಕೊಳ್ಳುವುದು ಅಗತ್ಯವಿದೆ.



ಅಕ್ರಮ ಪಠ್ಯ ಪರಿಷ್ಕರಣೆ : ಸಂವಿಧಾನ ವಿರೋಧಿ ಮೌಲ್ಯಗಳಿಗೆ ಮಣೆ

ಒಮ್ಮೆ ರಚನೆಯಾದ ಪಠ್ಯ ಪುಸ್ಕಕಗಳು ಶಾಶ್ವತವೇನಲ್ಲ. ಆದರೆ ಪಠ್ಯ ಪುಸ್ತಕಗಳ ರಚನೆಗೆ ಆಧಾರವಾದ ಪ್ರಜಾಪ್ರಭುತ್ವ, ಸಮಾನತೆ, ಜಾತ್ಯತೀತತೆ, ವೈಜ್ಞಾನಿಕ ಮನೋಭಾವ, ಸಾಮಾಜಿಕ ನ್ಯಾಯ ಈ ಸಾಂವಿಧಾನಿಕ ತತ್ವಗಳು ಶಾಶ್ವತ. ಈಗಿನ ಪಠ್ಯ ಪುಸ್ತಕ ಪರಿಷ್ಕರಣೆಯಲ್ಲಿ ಈ ಮೂಲತತ್ವಗಳ ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿದೆ. ಇದನ್ನು ಸಾಧಿಸಲು ಅಕ್ರಮ ವಿಧಾನವನ್ನು ಅನುಸರಿಸಿರುವುದು ಸಹ ಸ್ವಯಂ ಸ್ಪಷ್ಟವಾಗಿದೆ. ಯಾವ ಕಾರಣಕ್ಕೂ ಇದನ್ನು ಒಪ್ಪಲಾಗದು.

ಆರ್. ರಾಮಕೃಷ್ಣ

ಕರ್ನಾಟಕ ರಾಜ್ಯದಲ್ಲಿ ಕಳೆದ ಕೆಲ ವಾರಗಳಿಂದ ಶಾಲಾ ಪಠ್ಯ–ಪುಸ್ತಕ ಪರಿಷ್ಕರಣೆ ವಿಷಯ ತೀವ್ರವಾದ ವಾದ ವಿವಾದಗಳಿಗೆ ಕಾರಣವಾಗಿದೆ. ಈ ವಿಷಯ ಈಗ ದೇಶದ ಗಮನವನ್ನು ಸೆಳೆದಿದೆ. ಕೇವಲ ಐದು ವರ್ಷಗಳ ಹಿಂದೆ ಜಾರಿಗೆ ಬಂದಿರುವ ಪಠ್ಯ ಪುಸ್ತಕಗಳನ್ನು ತರಾತುರಿಯಲ್ಲಿ ಗುಟ್ಟು ಗುಟ್ಟಾಗಿ ಪರಿಷ್ಕರಣೆ ಮಾಡಲಾಗುತ್ತಿದೆ. ಕ್ಷಮಿಸಿ 'ಪರಿಷ್ಕರಣೆ' ಅಲ್ಲ. ಪರಿಷ್ಕರಣೆ, ಮರು ಪರಿಷ್ಕರಣೆ, ಮರು ಪರಿಷ್ಕರಣೆಗೊಂಡ ಪಠ್ಯಗಳ ಮರು, ಮರು ಪರಿಷ್ಕರಣೆಗಳು ನಡೆಯುತ್ತಿರುವಂತೆ ಕಾಣುತ್ತಿದೆ. ಹೌದು, 'ಕಾಣುತ್ತಿದೆ'. ಹೀಗೇ ಹೇಳಬೇಕಿದೆ. ಏಕೆಂದರೆ ಇವೆಲ್ಲವೂ ಗೋಪ್ಯ ಅಥವಾ ರಹಸ್ಯ ಕಾರ್ಯಾಚರಣೆಯಂತೆಯೇ ನಡೆಯುತ್ತಿದೆ. ಈ ವಿಚಾರದಲ್ಲಿ ಶಿಕ್ಷಣ ಸಚಿವರು, ಪರಿಷ್ಕರಣಾ ಸಮಿತಿಯ ಮುಖ್ಯಸ್ಥರು ನೀಡುತ್ತಿರುವ ಹೇಳಿಕೆಗಳು, ತೊದಲುತ್ತಾ ಮತ್ತು ಆಗಾಗ್ಗೆ ಬದಲಿಸುತ್ತಾ ಆಡುತ್ತಿರುವ ಮಾತುಗಳು, ಹರಿದಾಡುತ್ತಿರುವ ನಾನಾ ಅವತಾರಗಳ, ಅಂದರೆ ನಾನಾ ಆವೃತ್ತಿಗಳ ಪರಿಷ್ಕೃತ ಮತ್ತು ಮರು ಪರಿಷ್ಕೃತ ಪಠ್ಯಗಳು ಈ ಒಟ್ಟು ಪ್ರಕ್ರಿಯೆಯೇ ಅಕ್ರಮ, ಅಪಾರದರ್ಶಕ, ಅಪಾಯಕಾರಿ ಎಂದು ಸಾರಿ ಸಾರಿ ಹೇಳುತ್ತಿವೆ.

ಪಠ್ಯ ಪರಿಷ್ಕರಣೆ – ಏನು ಆಧಾರ

ಸದ್ಯ ನಮ್ಮ ದೇಶದ ಯಾವುದೇ ಪಠ್ಯ ರಚನೆಯಾಗಲಿ ಅಥವಾ ಪರಿಷ್ಕರಣೆಯಾಗಲಿ ಅದಕ್ಕೆ ಆಧಾರವಾಗಬೇಕಾದದ್ದು, 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005'ನ ಆಶಯಗಳು, ಸ್ಪಷ್ಟ ಮಾರ್ಗಸೂಚಿಗಳು. ಈ ಆಶಯಗಳು ಮತ್ತು ಮಾರ್ಗಸೂಚಿಗಳಿಗೆ ವ´ು ಊ ಲ ಬ, ´ ಊ ತ´ ವ ಾ ಗಿ ಆಧಾರವಾಗಿರುವುದು ಭಾರತದ ಸಂವಿಧಾನ ಮೂಲಭೂತ ತತ್ವಗಳಾದ ಜಾತ್ಯತೀತತೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯ, ಸಮಾಜವಾದದ ಮೂಲ ತತ್ವಗಳು. ಈ ತತ್ವಗಳಿಗೆ ಈ ಮೌಲ್ಯಗಳಿಗೆ ಬದ್ಧವಾಗಿಲ್ಲದ ಯಾವುದೇ ಪಠ್ಯವು ಸಂವಿಧಾನ ವಿರೋಧಿಯೂ ಮತ್ತು ಆ ಕಾರಣಕ್ಕಾಗಿ ಸಮಾಜ ವಿರೋಧಿಯೂ ಆಗುತ್ತದೆ. ಈಗ ಆಗಿರುವುದು, ಆಗುತ್ತಿರುವುದು ಅದೇ. ಅದನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ.

ಎನ್.ಸಿ.ಎಫ್. –2005 – ಮಾರ್ಗಸೂಚಿಗಳು

- ಕಲಿಕೆಯು ವಿಮರ್ಶಾತ್ಮಕ ಸಿದ್ಧಾಂತವನ್ನು ಆಧರಿಸಿರಬೇಕು.
- ಪಠ್ಯಕ್ರಮ ರಚನೆ, ಪರಿಷ್ಕರಣೆಯ ಮೂಲಕ ವಿದ್ಯಾರ್ಥಿಗಳ ಬೌದ್ಧಿಕ ಮತ್ತು ಮಾನಸಿಕ ವಿಕಸನಕ್ಕೆ ವೈವಿಧ್ಯ ಅವಕಾಶಗಳನ್ನು ಕಲ್ಪಿಸಬೇಕು.
- ತರಗತಿಗಳಲ್ಲಿ ವಿದ್ಯಾರ್ಥಿಗಳು ಪ್ರಶ್ನಿಸುವ, ಮುಕ್ತವಾಗಿ ಚರ್ಚೆ ಮಾಡುವಂತಹ ಅವಕಾಶಗಳಿರಬೇಕು.
- ಲಿಂಗ, ಧರ್ಮ, ಜಾತಿ, ಭಾಷೆ, ಪ್ರದೇಶ ಇತ್ಯಾದಿಗಳ ಆಧಾರದಲ್ಲಿ ಯಾವುದೇ ರೀತಿಯ ತಾರತಮ್ಯಕ್ಕೆ ಅವಕಾಶವಾಗಬಾರದು.
- ಯಾವುದೇ ಬಗೆಯ ತಾರತಮ್ಯವಿಲ್ಲದೆ ವಿದ್ಯಾರ್ಥಿಗಳಿಗೆ ಸೂಕ್ತವಾದ ಗುಣಮಟ್ಟದ ಶಿಕ್ಷಣ ಲಭ್ಯವಿರಬೇಕು.
- ಕಲಿಕೆಯನ್ನು ಹೊರಗಿನ ಬದುಕಿನ ಅನುಭವಗಳ ಜೊತೆಗೆ ಬೆಸೆಯಬೇಕು.
- ಪಠ್ಯಪುಸ್ತಕಗಳಾಚೆಗೆ ಜ್ಞಾನಾರ್ಜನೆ ಪಡೆಯುವಂತಹ ಪಠ್ಯಕ್ರಮ ರೂಪಿಸಬೇಕು.
- ಪಠ್ಯವು ಅತಿಯಾದ ಹೊರೆಯನ್ನು ಹೇರದೆ ಕಲಿಕೆಯ ದೃಷ್ಟಿಕೋನವನ್ನು ಬೆಳೆಸಬೇಕು.

ಏನು ನಡೆದಾವೋ ಇನ್ನೇನು ನಡಿತಾವೋ..??

ಕರ್ನಾಟಕದ ಬಿಜೆಪಿ ಸರಕಾರವು ಪಾರದರ್ಶಕವಾಗಿ ಜನತೆಗೆ ಸಮರ್ಪಕವಾದ ಮಾಹಿತಿಗಳನ್ನು ನೀಡದೆ, ಶಿಕ್ಷಣ ತಜ್ಞರು, ಶಿಕ್ಷಕರು, ಪೋಷಕರು–ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ಮಾಡದೆ ಏಕಪಕ್ಷೀಯವಾಗಿ ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯ ಪಠ್ಯಪುಸ್ತಕ ರಚನಾ ಸಮಿತಿಯ ಆಯ್ಕೆಗಳನ್ನು ಪರಿಶೀಲಿಸಿ ಪರಿಷ್ಕರಿಸಲು ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯಲ್ಲಿ ಪರಿಷ್ಕರಣಾ ಸಮಿತಿಯನ್ನು ನೇಮಿಸಿತು. ಆದರೆ ಈ ಸಮಿತಿಯನ್ನು ನೇಮಿಸುವಾಗ ಅನೇಕ ನಿಯಮಗಳನ್ನು, ಸಂವಿಧಾನದ ನೀತಿಸಂಹಿತೆಗಳನ್ನು ಉಲ್ಲಂಘಿಸಿಲಾಗಿದೆ.

ಪಠ್ಯ ಪುಸ್ತಕ ರಚನೆ ಅಥವಾ ಪರಿಷ್ಕರಣೆಯ ಸಮಿತಿಯ ಅಧ್ಯಕ್ಷರಾಗಲು ಕೆಲವು ಪ್ರಮುಖ ಅರ್ಹತೆಗಳು ಇರಬೇಕು. ಈ ಸಮಿತಿಯ ಅಧ್ಯಕ್ಷರಾದ ರೋಹಿತ್ ಚಕ್ರತೀರ್ಥ ಶಿಕ್ಷಣ ತಜ್ಞರಲ್ಲ. ಸಂಶೋಧಕರೂ ಅಲ್ಲ. (ಈ ವಿಷಯದಲ್ಲಿ ಪ್ರಶ್ನೆ ಎದುರಾದಾಗ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ರೋಹಿತ್ ಅವರು 'ಐ.ಐ.ಟಿ. ಮತ್ತು ಸಿ.ಇ.ಟಿ. ಪ್ರೊಫೆಸರ್' ಎಂಬ ಹಾಸ್ಯಾಸ್ಪದ ಉತ್ತರ ನೀಡಿದರು. ಆನಂತರ ರೋಹಿತ್ ಚಕ್ರತೀರ್ಥ ಅವರು ತಾವು ಐ.ಐ.ಟಿ. ಮತ್ತು ಸಿ.ಇ.ಟಿ. ಪ್ರೊಫೆಸರ್ ಅಲ್ಲ ಎಂದು ಹೇಳಿಕೆ ನೀಡಿದ್ದಾರೆ.)

ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ ರಚನೆಯಲ್ಲಿ ಸಾಮಾಜಿಕ ನ್ಯಾಯ ಮತ್ತು ಲಿಂಗ ಸಮಾನತೆಯನ್ನು ಪಾಲಿಸಿಲ್ಲ. ಏಳು ಜನರಲ್ಲಿ ಆರು ಸದಸ್ಯರು ಬ್ರಾಹ್ಮಣ ಜಾತಿಗೆ ಸೇರಿದವರು. ಸದಸ್ಯರ ಪಟ್ಟಿಯಲ್ಲಿ, ಲೇಖಕಿಯರ ಪಟ್ಟಿಯಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಕಡೆಗಣಿಸಲಾಗಿದೆ. ಹೊಸದಾಗಿ ಸೇರ್ಪಡೆ ಮಾಡಲಾದ ಹತ್ತು ಪಾಠಗಳಲ್ಲಿ ಒಂಬತ್ತು ಬ್ರಾಹ್ಮಣ ಜಾತಿಗೆ ಸೇರಿದ ಲೇಖಕರ ಪಾಠಗಳು. ಅಷ್ಟೇ ಅಲ್ಲ, ಈ ಬಹುತೇಕ ಪಾಠಗಳು ಭಾರತದ ಬಹುತ್ವವನ್ನು ನಿರಾಕರಿಸುವ, ಬ್ರಾಹ್ಮಣ್ಯದ ಅವೈಜ್ಞಾನಿಕ, ಅಮಾನವೀಯ, ಅಸಮಾನತೆಯ ಮೌಲ್ಯಗಳನ್ನು ಎತ್ತಿ ಹಿಡಿಯುವಂತಹ ಮನುವಾದಿ ಚಿಂತನ ಧಾರೆಯ ಬರಹಗಳು.

ಜೊತೆಗೆ ಈ ಪರಿಷ್ಕರಣಾ ಸಮಿತಿ ನಡೆಸಿದ ಸಭೆಗಳು, ಸಮಾಲೋಚನೆಗಳ ಕುರಿತು ಎಲ್ಲಿಯೂ ಪಾರದರ್ಶಕವಾಗಿಲ್ಲ. ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿಯು ಒಂದೂವರೆ ವರ್ಷಗಳ ಕಾಲ 175 ವಿಷಯ ತಜ್ಞರನ್ನೊಳಗೊಂಡ 27 ಸಮಿತಿಗಳ ಶಿಫಾರಸ್ಸುಗಳನ್ನು ಆಧರಿಸಿ ಎಲ್ಲ ಅಗತ್ಯ ಪ್ರಜಾಸತ್ತಾತ್ಮ ಕ್ರಮಗಳನ್ನು ಪಾಲಿಸಿ, ಶಿಕ್ಷಕರು–ವಿದ್ಯಾರ್ಥಿ–ಪೋಷಕರು ಮುಂತಾದ ಸಮುದಾಯಗಳೊಂದಿಗೆ ಚರ್ಚಿಸಿ ಪಠ್ಯ ರಚನೆಯನ್ನು ಮಾಡಿತ್ತು.

ಚಕ್ರತೀರ್ಥ ಅಧ್ಯಕ್ಷತೆಯ ಸಮಿತಿಗೆ ಒಂದು ತಿಂಗಳು ಕಾಲಾವಕಾಶ ಕೊಟ್ಟು ಪಠ್ಯ ಪುಸ್ತಕ ಪರಿಶೀಲನೆ ಮಾಡಲು ಸೂಚಿಸಲಾಯಿತು. ಈ ಮೂಲಕ ಕ್ರಮಬದ್ಧತೆಗೆ ಸಂಬಂಧಿಸಿದಂತೆ ಪಠ್ಯಕ್ರಮ ರಚನೆಯ ಎಲ್ಲಾ ಬಗೆಯ ನಿಯಮಗಳ ಉಲ್ಲಂಘನೆಯಾಗಿದೆ. ಈ ಸಮಿತಿ ಯಾವ ತಜ್ಞರೊಂದಿಗೆ ಸಮಾಲೋಚನೆ ನಡೆಸಿದೆ, ಯಾರ ಜೊತೆ, ಎಷ್ಟು ಸಭೆಗಳನ್ನು ನಡೆಸಿದೆ ಎನ್ನುವುದಕ್ಕೆ ಎಲ್ಲಿಯೂ ದಾಖಲೆಗಳು ಲಭ್ಯವಿಲ್ಲ.

ಈ ಸಮಿತಿಯು ಈ ಧ್ಯೇಯವನ್ನು ಎಲ್ಲಿಯೂ ಪಾಲನೆ ಮಾಡಿಲ್ಲ. ಆ ಸಮಿತಿಯ ರಚನೆಯಲ್ಲಿ ಮತ್ತು ಅದು ಆಯ್ಕೆ ಮಾಡಿಕೊಂಡ ಬ್ರಾಹ್ಮಣ ಜಾತಿಯ ಲೇಖಕರ ಪಠ್ಯಗಳು, ಕೈ ಬಿಟ್ಟ ಶೂದ್ರ, ದಲಿತ ಲೇಖಕರ ಪಠ್ಯಗಳು ಮತ್ತು ವಿಷಯಗಳನ್ನು ಅವಲೋಕಿಸಿದಾಗ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಜಾತ್ಯತೀತತೆಯನ್ನು ಸಂಪೂರ್ಣವಾಗಿ ಕಡೆಗಣಿಸಿರುವುದು ಸ್ಪಷ್ಟವಾಗಿದೆ. ಪಠ್ಯದಲ್ಲಿ

ಪುಟ 14 ಕ್ಕೆ

'ರಾಷ್ಟ್ರೀಯ ಪಠ್ಯ ಕ್ರಮ ಚೌಕಟ್ಟು –2005'ರ ಮುಖ್ಯ ತತ್ವಗಳು


'ರಾಷ್ಟ್ರೀಯ ಪಠ್ಯ ಕ್ರಮ ಚೌಕಟ್ಟು –2005'(ಎನ್.ಸಿ.ಎಫ್.–2005)ರ ಮುಖ್ಯವಾದ ತತ್ವಗಳು ಈ ರೀತಿ ಇವೆ.

1. **ಮಾನವೀಯ ತತ್ವ :–** ದೇಶದ ಪ್ರಜೆಗಳ ನಡುವೆ ಸಹಕಾರ ಮತ್ತು ಸೌಹಾರ್ದತೆಯನ್ನು ಬೆಳೆಸುವ ಮಾನವೀಯ ತತ್ವ.
2. **ಬಹು ಸಂಸ್ಕೃತಿ :–** ಬಹುಧರ್ಮ ಮತ್ತು ಬಹು ಸಂಸ್ಕೃತಿಗಳ ನೆಲೆವೀಡಾದ ಭಾರತದಲ್ಲಿ ಪರಸ್ಪರರನ್ನು ಗೌರವಿಸುವಂತಹ ಮತ್ತು ವಿವಿಧತೆಯಲ್ಲಿ ಏಕತೆ ತತ್ವವನ್ನು ಪೊರೆಯಂತಹ ಭಾರತೀಯ ಸಂಸ್ಕೃತಿಯನ್ನು ಪೋಷಿಸುವ ಮೂಲಕ ದೇಶದ ಐಕ್ಯತೆಯನ್ನು ಬಲಗೊಳಿಸುವುದು.
3. **ಜನರ ಐಕ್ಯತೆ :–** ಸರ್ವ ಜನರಿಗೆ ಸಮಾನ ಮೂಲಭೂತ ಹಕ್ಕುಗಳನ್ನು ಖಾತ್ರಿ ಪಡಿಸುವ ಮೂಲಕ ಭಾರತದ ಐಕ್ಯತೆ ಸಮಗ್ರತೆ ಮತ್ತು ಸಾರ್ವಭೌಮತೆಯನ್ನು ರಕ್ಷಿಸುವುದು.


ಇದಲ್ಲದೆ ಸಮಾಜದ ಪ್ರಗತಿಗೆ ಪೂರಕವಾದ ಸಾಮಾಜಿಕ–ನೈತಿಕ ಮೌಲ್ಯಗಳು ಹಾಗೂ ಅವುಗಳಲ್ಲಿ ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಹೊಂದಾಣಿಕೆಗೆ ಹಾಗೂ ಮಕ್ಕಳಲ್ಲಿ ಕಲಿಕೆಯ ಆಸಕ್ತಿ ಮೂಡಿಸುವ ಮತ್ತು ಸಮಾಜಕ್ಕೆ ಉಪಯುಕ್ತವಾದ ಪಠ್ಯಕ್ಕೆ ಒತ್ತು ನೀಡುವುದು ಮುಂತಾದ ಒಟ್ಟು ಎಂಟು ಮುಖ್ಯ ತತ್ವಗಳು ಎನ್.ಸಿ.ಎಫ್.ನ ಅಡಿಪಾಯ ತತ್ವಗಳಾಗಿವೆ.




ಕೃಪೆ: ಪಿ. ಮಹಮ್ಮದ್, ವಾರ್ತಾ ಭಾರತಿ



ಕೃಪೆ: ದಿನೇಶ್ ಕುಕ್ಕುಜಡ್ಕ







ಮನುವಾದಿ ವ್ಯವಸ್ಥೆಯನು ಮರಳಿ ಸ್ಥಾಪಿಸುವ ಹೊಂಚು ಬ್ರಿಟೀಷರ ಜೊತೆಗಿನ ಶಾಮೀಲಾತಿಯನು ಮರೆಮಾಚುವ ಸಂಚು

ಪ್ರಸ್ತಾವನೆ

ನಮ್ಮ ಶಾಲಾ ಪಠ್ಯ ಪುಸ್ತಕಗಳು ಘೋರ ದ್ವೇಷವನ್ನೇ ಉಸಿರಾಡುವ ಮತಾಂಧ ಸಂಘಟನೆಯೊಂದರ ಕಪಿಮುಷ್ಟಿಯಲ್ಲಿರುವ ರಾಜಕೀಯ ಪಕ್ಷವೊಂದಕ್ಕೆ ಬೇಕಾದ 'ಪಕ್ಷ ಪುಸ್ತಕ'ಗಳಾತ್ತಿರುವ ದುರಂತದ ಹೊತ್ತಿದು. ಇದು ಸ್ಪಷ್ಟ. ಸುಮಾರು ಒಂದೂವರೆ ಶತಮಾನಗಳನ್ನೂ ಮೀರಿದ ಸುದೀರ್ಘ ಸ್ವಾತಂತ್ರ್ಯ ಹೋರಾಟದಿಂದ ಗಳಿಸಿಕೊಂಡ ಎಲ್ಲ ಸಾಮಾಜಿಕ ಪ್ರಗತಿಯನ್ನು ಬುಡಮೇಲು ಮಾಡಿ, ಎಲ್ಲ ಪ್ರಗತಿಪರ ಮುನ್ನಡೆಗಳನ್ನು ಧ್ವಂಸ ಮಾಡಿ ಸಮಾಜದ ಮೇಲೆ ಕರಾಳ ಜಾತಿವಾದಿ–ಪುರುಷ ದಬ್ಬಾಳಿಕೆಯ ಮನುವಾದಿ ವ್ಯವಸ್ಥೆಯನ್ನು ಮರಳಿ ಹೇರುವ ವ್ಯವಸ್ಥಿತ ಸಂಚಿನ ಭಾಗ ಈ ಪಠ್ಯ ಪುಸ್ತಕ ಪರಿಷ್ಕರಣೆ.

ಯಜ್ಞ–ಯಾಗ ಮಾಡಿ ಆಹಾರ ಧಾನ್ಯ ಸುಡುವುದು ಮೌಢ್ಯ ಮಾತ್ರವಲ್ಲ, ಕ್ರೌರ್ಯ ಕೂಡ

'ಶತಾವಧಾನಿ' ಹಾಗೂ 'ವಿದ್ಯಾವಾಚಸ್ಪತಿ' ಬಿರುದಾಂಕಿತ ಡಾ.ಆರ್. ಗಣೇಶ ಅವರ 'ಶುಕನಾಸನ ಉಪದೇಶ' ಎಂಬ ಈ ಪಾಠದ ಈ ಭಾಗವನ್ನು ಓದಿ.

"ಧರ್ಮದ ಆಚರಣೆಗಿರುವ ಪ್ರಧಾನ ಮಾರ್ಗವೇ 'ಯಜ್ಞ'. ಯಜ್ಞ ಎಂದರೆ ಬೆಂಕಿಯಲ್ಲಿ ತುಪ್ಪ ಸುರಿಯುವ, ಆಹಾರವನ್ನು ಪೋಲು ಮಾಡುವ ಕಂದಾಚಾರ ಎಂದು ಹಲವರ ಆಕ್ಷೇಪ. ಅಗ್ನಿಮುಖದಲ್ಲಿ ಆಹುತಿ ನೀಡುವುದು ಒಂದು ಸಂಕೇತ ಮಾತ್ರ. ಇದು ಬಟ್ಟೆಯಿಂದಾದ ಬಾವುಟಕ್ಕೆ ರಾಷ್ಟ್ರಧ್ವಜವೆಂದು ಎಲ್ಲರೂ ಗೌರವ ಸಲ್ಲಿಸುವಂತೆಯೇ ಸರಿ."

"ಯಜ್ಞ ಸಂಸ್ಕೃತಿಯ ಒಂದು ಅನುಷ್ಠಾನ. ಅಗ್ನಿಯಲ್ಲಿ ಯಾವುದಾದರೂ ಆಹಾರ ಪದಾರ್ಥವನ್ನು ಹಾಕಿದರೆ ಅದನ್ನು ಮತ್ತೆ ಪಡೆದುಕೊಳ್ಳಲು ಸಾಧ್ಯವಿಲ್ಲವೆಂಬುದು ಎಲ್ಲರಿಗೂ ತಿಳಿದ ತಥ್ಯ. ವಸ್ತುಸ್ಥಿತಿ ಹೀಗಿದ್ದರೂ ಅದನ್ನು ಮಾಡುವುದೆಂದರೆ – ತನಗೆ ಮರಳಿ ಬರುವುದೆಂಬ ಯಾವುದೇ ನಿಶ್ಚಯ ಇಲ್ಲದಿದ್ದರೂ ಕೊಡಬೇಕೆಂಬ ಜೀವನಪಾಠ ಕಲಿಕೆ ತಾನೆ!"

ಹೇಗಿದೆ ನೋಡಿ ಆಹಾರಧಾನ್ಯಗಳನ್ನು ಬೆಂಕಿಗೆ ಹಾಕಿ ಸುಡುವ ಯಜ್ಞ–ಯಾಗಗಳ ಸಮರ್ಥನೆ.!! ಚಿನ್ನವಿಲ್ಲದಿದ್ದರೂ ಬದುಕಬಹುದು, ಅನ್ನವಿಲ್ಲದೆ ಬದುಕಲಾಗದು ಎಂದು ವೇದದಲ್ಲಿ ಹೇಳಿದೆಯಂತೆ...ಅದನ್ನು ಸಾಧಿಸಿ ತೋರಿಸಲು.. ಯಜ್ಞಗಳಲ್ಲಿ ಆಹಾರ ಧಾನ್ಯ ಸುಡುವುದಂತೆ...!!! ಆಹಾ...ಆಹಾ...!! ಏನು ವಿವೇಕ! ಎಂತಹ ಜ್ಞಾನ!! ಅಬ್ಬಬ್ಬ.!!!

ಕಳೆದ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ಆರನೇ ತರಗತಿಯ ವಿದ್ಯಾರ್ಥಿಗಳಿಗೆ ಸಮಾಜ ವಿಜ್ಞಾನ ಭಾಗ–1 ರಲ್ಲಿನ ಏಳನೇ ಪಾಠ 'ಹೊಸ ಧರ್ಮಗಳ ಉದಯ' (ಪುಟ 82–83) ಎಂಬುದರ ವಿಷಯಗಳನ್ನು ಕಲಿಕೆ ಮತ್ತು ಮೌಲ್ಯಮಾಪನಕ್ಕೆ ಪರಿಗಣಿಸಬಾರದು ಎಂದು ಶಿಕ್ಷಣ ಇಲಾಖೆ ಆದೇಶ ಹೊರಡಿಸಿತ್ತು.

ಯಾವುದೇ ಸಮುದಾಯದ ಭಾವನೆಗಳಿಗೆ ಧಕ್ಕೆ ತರಬಾರದು, ವಿಶೇಷವಾಗಿ ನಮ್ಮ ಮಕ್ಕಳಲ್ಲಿ ಅನಗತ್ಯ ದ್ವೇಷದ ಭಾವನೆಯನ್ನು ಬಿತ್ತಬಾರದೆನ್ನುವ ಕಾರಣಕ್ಕೆ ಹಾಗೂ ಮಕ್ಕಳ ವಯಸ್ಸಿಗೆ ಮೀರಿದ ವಿಚಾರಗಳು ಎಂಬ ಕಾರಣಕ್ಕೆ ಈ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿರುತ್ತದೆ ಎಂದೂ, ಈ ಪಾಠದ ಸಂಬಂಧ ಮಂತ್ರಾಲಯ ಮಠದ ಶ್ರೀ ಸುಭುದೇಂದ್ರ ತೀರ್ಥರು ತಮಗೆ ಕರೆ ಮಾಡಿ ಮಾತನಾಡಿ ಮಾತನಾಡಿದ್ದಾರೆ ಎಂದೂ ಅಂದಿನ ಶಿಕ್ಷಣ ಸಚಿವರು ಆಗ ಹೇಳಿದ್ದರು.

"ವೈದಿಕ ಆಚರಣೆಗಳಾದ ಯಾಗ, ಯಜ್ಞಗಳ ಹೆಸರಿನಲ್ಲಿ ಕೃಷಿಗೆ ನೆರವಾಗುತ್ತಿದ್ದ ಪ್ರಾಣಿಗಳನ್ನು ಕೊಲ್ಲಲಾಗುತ್ತಿತ್ತು. ಇದರಿಂದ ಆಹಾರದ ಉತ್ಪಾದನೆಯು ಕುಂಠಿತವಾಯಿತು. ಅಷ್ಟು ಮಾತ್ರವಲ್ಲ, ಯಾಗ, ಯಜ್ಞಗಳಲ್ಲಿ ಆಹಾರ ಧಾನ್ಯ, ಹಾಲು, ತುಪ್ಪಗಳನ್ನು ಹವಿಸ್ಸು ಎಂದು ದಹಿಸಲಾಗುತ್ತಿತ್ತು." ಎಂಬ ಅಂಶಗಳು ಆ ಪಾಠದಲ್ಲಿದ್ದವು. ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕವಾದ ದೃಷ್ಟಿಕೋನವನ್ನು ಬೆಳೆಸುವುದು ಮತ್ತು ಬೌದ್ಧ ಮತ್ತು ಜೈನ ಧರ್ಮಗಳಂತಹ ಹೊಸ ಧರ್ಮಗಳ ಉದಯಕ್ಕೆ ಕಾರಣವಾದ ಚಾರಿತ್ರಿಕ ಅಂಶಗಳನ್ನು ವಸ್ತುನಿಷ್ಟವಾಗಿ ವಿವರಿಸುವುದು ಪಠ್ಯದ ಉದ್ದೇಶವಾಗಿತ್ತು. ಅದನ್ನಷ್ಟೆ ಇಲ್ಲಿ ಹೇಳಲಾಗಿದೆ. ಇಂತಹ ಸತ್ಯ ಮರೆ ಮಾಚುವ ಪಠ್ಯಗಳ ಕುರಿತು ಖ್ಯಾತ ಶಿಕ್ಷಣ ತಜ್ಞ ಡಾ. ಜಿ. ರಾಮಕೃಷ್ಣ ಅವರು 'ಮಂಕುದಿಣ್ಣೆಗಳನ್ನು ತಯಾರು ಮಾಡುವ ಶಿಕ್ಷಣ' ಎಂದು ಕಟುವಾಗಿ ಟೀಕಿಸಿದ್ದರು. ಹಸಿವು–ಅಪೌಷ್ಟಿಕತೆಗಳಿಂದ ಕಂಗೆಟ್ಟಿರುವ ಭಾರತದಲ್ಲಿ, ಹಸಿವು ನಿವಾರಣೆ ಸೂಚ್ಯಂಕದಲ್ಲಿ ಪಾತಾಳ ತಪುಪಿದೆ. 116 ದೇಶಗಳ ಪೈಕಿ ಭಾರತವು ನೆರೆಯ ಪಾಕಿಸ್ತಾನ(92), ನೇಪಾಳ(76), ಬಾಂಗ್ಲಾದೇಶ(76)ಗಳಿಗಿಂತಲೂ ತೀರಾ ಕೆಳಗೆ 101 ನೇ ಸ್ಥಾನದಲ್ಲಿದೆ. ಇಂತಹ ಒಂದು ದೇಶದಲ್ಲಿ ಆಹಾರ ಧಾನ್ಯಗಳನ್ನು ಸುಡುವುದು, ಅದನ್ನು ಹೀಗೆ ನಿರ್ಲಜ್ಜವಾಗಿ ಪಠ್ಯ ಪುಸ್ತಕಗಳ ಮೂಲಕ ಸಮರ್ಥಿಸುವುದು ಮೌಢ್ಯ ಮಾತ್ರವಲ್ಲ, ದೊಡ್ಡ ಕ್ರೌರ್ಯ.

'ಹೆಣ್ಣು ಹೆಣ್ಣೆಂದೇಕೆ ಕೀಳುಗಳೆವಿರಿ..?'

ಗಂಡು–ಹೆಣ್ಣು ಇಬ್ಬರೂ ಸಮಾನರು ಎಂಬ ಲಿಂಗ ಸಮಾನತೆಯನ್ನು ಕಲಿಯಬೇಕಾದ ಹೂ ಮನಸ್ಸಿನ ಶಾಲಾ ಮಕ್ಕಳಿಗೆ ನಿಗದಿಯಾಗಿರುವ, ಘನ 'ವಿದ್ವಾನ್' ಬನ್ನಂಜೆ ಗೋವಿಂದಾಚಾರ್ಯ ಅವರ ಪಾಠದ ಹೂರಣವನ್ನು ಗಮನಿಸಿ.

"ಹಣ ಅನರ್ಥಗಳನ್ನು ಸೃಷ್ಟಿಸುತ್ತದೆ ಎಂಬುದನ್ನು ಹಲವು ಮಹಾತ್ಮರು ಹೇಳಿದ್ದಾರೆ. ಹಣವು ತಾನೇ ತಾನಾಗಿ ಅನರ್ಥಗಳನ್ನು ಮಾಡುತ್ತದೆಯೇ? ಇಲ್ಲ. ಅದು ಯಾರ ಬಳಿಯಾದರೂ ಸಂಚಯವಾದಾಗ ಅವರಿಗೊಂದು ಹುಸಿ ಹಮ್ಮು ಆವರಿಸಿಕೊಳ್ಳುತ್ತದೆ. ದುಡ್ಡಿನಿಂದ ಏನನ್ನು ಬೇಕಾದರೂ ಕೊಳ್ಳಬಲ್ಲೆ, ಯಾರನ್ನಾದರೂ ತನ್ನ ಅಡಿಯಾಳಾಗಿಸಬಲ್ಲೆ, ಹೇಗೆ ಬೇಕಾದರೂ ಬದುಕಬಲ್ಲೆ ಎಂಬ ಅಹಂಕಾರದ ಹುಟ್ಟುತ್ತದಲ್ಲ; ಅದು ಅನರ್ಥಗಳನ್ನು ಸೃಷ್ಟಿಸುತ್ತದೆ "

"ಈ ಸಿರಿಯೆಂಬ ಹೊಸ ಹೆಣ್ಣನ್ನು ಕಂಡು ಮರುಳಾಗದವರನ್ನು ನಾನು ಕಂಡಿಲ್ಲ. ಎಲ್ಲರೂ ಆಕೆಯತ್ತ ಆಕರ್ಷಿತರಾದವರೆ. ಎಲ್ಲರೂ ಆಕೆಯಿಂದ ಮೋಸಹೋಗುವವರೇ. ಯಾವುದೇ ಒಬ್ಬನನ್ನು ನಿರ್ವಂಚನೆಯಿಂದ ಪ್ರೇಮಿಸುವುದು ಆಕೆಯ ಜಾಯಮಾನಕ್ಕೆ ಸಲ್ಲದು."

"ಕೆಟ್ಟ ನಡತೆಯ ಇಂಥ ಸಿರಿಯೆಂಬ ಹೆಣ್ಣು ಹೇಗೋ ದೈವಯೋಗದಿಂದ ಕೆಲ ಮಂದಿ ರಾಜರಿಗೆ ಒಲಿಯುತ್ತಾಳೆ. ಅಲ್ಲಿಗೆ ಮುಗಿಯಿತು ಅವರ ಕಥೆ. ಏನು ಸಂಭ್ರಮ, ಏನು ಕೋಲಾಹಲ! ಜಗತ್ತಿನ ಎಲ್ಲ ದೌರ್ಜನ್ಯಗಳಿಗೆ ಅವರು ಆಸರೆ.."

ಇಲ್ಲಿ ಕೆಟ್ಟದ್ದರ ಕುರಿತು ಹೇಳುವುದಕ್ಕೆ ರೂಪಕವಾಗಿ ಹೆಣ್ಣೇ ಯಾಕೆ ಇವರಿಗೆ ಸಿಗುವುದು.? ಈ ಪ್ರಶ್ನೆ ಮೂಡಿ ಬರುವುದು ಸಹಜವೇ? ಇದೇ ಶಾಲಾ ಪಠ್ಯ ಪರಿಷ್ಕರಣೆಯಲ್ಲಿ 'ನಿಮ್ಮ ಆದರ್ಶ ಪುರುಷ ಯಾರು?' ಎಂಬ ಒಂದು ಪಾಠವನ್ನು ತುರುಕಲಾಗಿದೆ. ಈ ಪಾಠದಲ್ಲಿ ವ್ಯಕ್ತಿಗಳು ಆದರ್ಶವಾಗಬಾರದು, ಸಿದ್ಧಾಂತಗಳು ಆದರ್ಶವಾಗ ಬೇಕು ಎಂದು ಹೇಳಲಾಗಿದೆ. ಆ ಪಾಠದ ವಿಮರ್ಶೆ ಬೇರೆ ಇದೆ. ಆದರೆ ಇಲ್ಲಿ ಆದರ್ಶದ ಬಗೆಗೆ ಹೇಳುವಾಗ 'ಪುರುಷ' ಎಂಬ ಶಬ್ದ ಏಕೆ ಬೇಕು? ಆದರ್ಶ 'ವ್ಯಕ್ತಿ' ಎನ್ನಬಹುದಲ್ಲವೇ? ಅದು ಆದರ್ಶ ಸ್ತ್ರೀ ಯನ್ನೂ ಒಳಗೊಳ್ಳುತ್ತದೆಯಲ್ಲವೇ? ಈಗಿನ ಪದ ಬಳಕೆ ಪುರುಷ ಮಾತ್ರ ಆದರ್ಶನಾಗಬಲ್ಲ ಎಂಬ ಒಳ ಇಂಗಿತವನ್ನು ಸೂಚಿಸುವುದಿಲ್ಲವೇ? ಏಕೆ ಈ ಲಿಂಗ ಪಕ್ಷಪಾತ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.

ಈ ಕೆಳಗೆ ಮನುಸ್ಮೃತಿ ಎಂಬ ಕರಾಳ ಗ್ರಂಥದಲ್ಲಿ ಹೆಣ್ಣಿನ ಕುರಿತು ಹೇಳಲಾಗಿರುವ ಮಾತುಗಳನ್ನು ಗಮನಿಸಿ. ಆಗ ಈ ಒಟ್ಟು ವಿಚಾರಗಳು ಸರಿಯಾಗಿ ಅರ್ಥವಾಗುತ್ತವೆ.

ಮಹಿಳೆಯ ಕುರಿತು ಮನುಸ್ಮೃತಿ

- ಶಯ್ಯೆ, ಆಸನ, ಅಲಂಕಾರ, ಇವುಗಳ ಮೋಹ, ಕಾಮ, ಕ್ರೋಧ, ಅಪ್ರಾಮಾಣಿಕತೆ, ಪತಿದ್ರೋಹ ಮತ್ತು ದುರ್ನಡತೆ ಇವೆಲ್ಲಾ ಸಾಮಾನ್ಯವಾಗಿ ಸ್ತ್ರೀಯಲ್ಲಿರುವ ಸ್ವಾಭಾವಿಕ ಗುಣಗಳು (ಅ–9:17)
- ಸ್ತ್ರೀಯರಿಗೆ ಮಂತ್ರಪೂರ್ವಕವಾದ ಧರ್ಮ ಸಂಸ್ಕಾರಗಳಿಲ್ಲ ಎಂದು ಶಾಸ್ತ್ರ ಹೇಳುತ್ತದೆ. ಇಂದ್ರಿಯಗಳನ್ನು ನಿಗ್ರಹಿಸಲು ಮಂತ್ರಸಾಧನಗಳು ಸ್ತ್ರೀಯರಿಗೆ ಹೇಳಲ್ಪಟ್ಟಿಲ್ಲವಾದ್ದರಿಂದ ಅವರು ಸದಾ ಅಶುದ್ಧರಾಗಿಯೇ ಇರುತ್ತಾರೆ ಎಂಬುದು ಧರ್ಮದ ವಿಚಾರವಾಗಿದೆ. (ಅ: 9:19)
- ಪತಿಯ ನಡತೆಯು ಚೆನ್ನಾಗಿಲ್ಲವಾದರೂ, ಅವನು ಕಾಮಾತುರನಾಗಿ ಅನ್ಯ ಹೆಂಗಸಲ್ಲಿ ಮನಸ್ಸಿಟ್ಟರೂ, ದುರ್ಗುಣಿಯಾಗಿದ್ದರೂ ಸಾಧ್ವಿಯಾದ ಆ ಹೆಂಗಸು ಆ ತನ್ನ ಪತಿಯನ್ನು ದೇವರೆಂದೇ ಭಾವಿಸಿ ಅವನ ಸೇವೆ ಮಾಡಬೇಕು (ಅ– 5:154)

ಪ್ರತಿಭಟನಾ ಪರಂಪರೆಗಳನ್ನೇ ನುಂಗಿ ನೊಣೆಯುವ

ಪುರೋಹಿತಶಾಹಿ ಷಡ್ಯಂತ್ರಗಳು

ವೈದಿಕ ಧರ್ಮದ ಕ್ರೌರ್ಯ ಮತ್ತು ಡಾಂಭಿಕತೆಯ ವಿರುದ್ಧದ ಪ್ರತಿಭಟನೆಯಾಗಿ ಮೂಡಿಬಂದ ಬೌದ್ಧ ಮತ್ತು ಜೈನ ಧರ್ಮಗಳ ಕುರಿತ ವಿವರಗಳನ್ನು ಪಠ್ಯಗಳಲ್ಲಿ ಮಸುಕು ಮಾಡುವಂತಹ ಪ್ರವೃತ್ತಿ ಮುಂದುವರಿದಿದೆ. ಖ್ಯಾತ ಸಾಹಿತಿ ಅರವಿಂದ ಮಾಲಗತ್ತಿಯವರ ಬುದ್ಧನ ಕುರಿತ ಕವನ 'ಮರಳಿ ಮನೆಗೆ' ಅನ್ನು ಪಠ್ಯದಿಂದ ತೆಗೆದು ಹಾಕಲಾಗಿದೆ. 'ಯುದ್ಧ'ದ ಕುರಿತ ಸಾರಾ ಅಬೂಬಕರ್ ಅವರ ಪಾಠ, ಉತ್ತರ ಕರ್ನಾಟಕ ಭಾಷಾ ಸೊಗಡು ಮತ್ತು ಸೌಹಾರ್ದ ಬದುಕಿನ ಸಂದೇಶಕ್ಕೆ ಉದಾಹರಣೆಯಾಗಿದ್ದ ಕೆ. ನೀಲಾ ಅವರ 'ಸಾಮರಸ್ಯ ರಂಜಾನ್ ಸುರಕುಂಬ' ಪಾಠವನ್ನು ತೆಗೆದು ಹಾಕಲಾಗಿದೆ. ಇವರೆಲ್ಲರ ಸಾಮಾಜಿಕ ಹಿನ್ನೆಲೆಯನ್ನು ಗಮನಿಸಿ.



ಬುದ್ಧನ ಜೊತೆಗೆ ಈಗ ಬಸವಣ್ಣ, ನಾರಾಯಣ ಗುರುಗಳು, ಪೆರಿಯಾರ್ ಮುಂತಾದವರ ಸರದಿ. ಶ್ರೇಷ್ಠ ಸಮಾಜ ಸುಧಾರಣಾ ಚಳುವಳಿಯಾದ ವಚನ ಚಳುವಳಿಯ ನೇತಾರರಾದ ಬಸವಣ್ಣನವರ ವಚನಗಳನ್ನು ಪಠ್ಯದಿಂದ ಕೈಬಿಡಲಾಗಿದೆ ಎಂದು ವರದಿಯಾಗಿದೆ. ಪೆರಿಯಾರ್ ಅವರ ಪ್ರಖರ ವೈಚಾರಿಕ ವಿಚಾರಗಳನ್ನು ಪಠ್ಯದಿಂದ ಕಿತ್ತೆಸೆಯಲಾಗಿದೆ.

ಹತ್ತನೇ ತರಗತಿಯ 'ಸಮಾಜ ವಿಜ್ಞಾನ'ದಲ್ಲಿ 49 ನೆಯ ಪುಟದಿಂದ ಆರಂಭವಾಗುವ 'ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು' ಎಂಬ ಪಾಠದಲ್ಲಿ 'ಶ್ರೀ ನಾರಾಯಣಗುರು ಧರ್ಮಪರಿಪಾಲನಾ ಯೋಗಂ' ಭಾಗವಿದ್ದುದನ್ನು ಕೈಬಿಡಲಾಗಿತ್ತು. ಜನರ ಆಕ್ರೋಶ ಭುಗಿಲೆದ್ದ ಮೇಲೆ 'ಪಾಠವನ್ನು ಕೈ ಬಿಟ್ಟಿಲ್ಲ, ಮತ್ತೊಂದು ತರಗತಿಗೆ ಪಠ್ಯವನ್ನು ವರ್ಗಾಯಿಸಲಾಗಿದೆ.' ಎಂದು ತಿಪ್ಪೆ ಸಾರಿಸಲಾಯಿತು. ಈಗ ನೋಡಿದರೆ ನಾರಾಯಣ ಗುರುಗಳ ನಿಜವಾದ ಸಮಾಜ ಸುಧಾರಣಾ ಚಳುವಳಿಯ ಆಶಯಗಳನ್ನು ಮರೆ ಮಾಚಿ ನಾರಾಯಣ ಗುರುಗಳು, ಒಬ್ಬ ಹಿಂದೂ ಧರ್ಮ ಸಮಾಜ ಸುಧಾರಕರು, ಅವರು ವೈದಿಕ ಸಂಸ್ಕೃತ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದವರಾಗಿದ್ದರು ಎಂಬ ಅರ್ಥ ಬರುವಂತೆ ವಿವರಿಸುವ ಸಂಕ್ಷಿಪ್ತ ಪಾಠವನ್ನು ಸೇರಿಸಲಾಗಿದೆ ಎನ್ನುತ್ತವೆ ವರದಿಗಳು.

ಇದು ಅಂದಿನ ಕೇರಳ ಸಮಾಜದ ಮಹಾ ಕೊಳಕು ಜಾತಿ ತಾರತಮ್ಯ ಮತ್ತು ಅನ್ಯಾಯಗಳ ವಿರುದ್ಧ ಧಾರ್ಮಿಕ ಸ್ವರೂಪದ ಸಂಘರ್ಷ ಹೂಡಿದ ಮಹಾನ್ ಸಮಾಜ ಸುಧಾರಕ ನಾರಾಯಣ ಗುರುಗಳ ಹೋರಾಟದ ಸ್ವರೂಪವನ್ನೆಲ್ಲಾ ಮರೆಮಾಚುವುದು ನಾರಾಯಣ ಗುರುಗಳಿಗೆ ಮಾಡಿದ ಅಪಮಾನವಲ್ಲದೇ ಬೇರೇನು? ಮೂಲ ಪಠ್ಯದಲ್ಲಿದ್ದುದೇನು ಗಮನಿಸಿ.

ಪೆರಿಯಾರ್ ಸಂದೇಶಕ್ಕೆ ಜಾಗವಿಲ್ಲ...

ಹಿಂದಿನ ವರ್ಷದ ಪಠ್ಯಪುಸ್ತಕದಲ್ಲಿ ಪೆರಿಯಾರ್ ಅವರ ಜೀವನ ಮತ್ತು ದರ್ಶನ ಪರಿಚಯಿಸುವ ಭಾಗದಲ್ಲಿ ಹೀಗೆ ಹೇಳಲಾಗಿತ್ತು.

"20ನೇ ಶತಮಾನದ ಆರಂಭದಲ್ಲಿ ಬ್ರಾಹ್ಮಣೇತರ ಚಳವಳಿಯೆಂಬ ಹೊಸ ಬಗೆಯ ಚಳವಳಿ ದಕ್ಷಿಣ ಭಾರತದಲ್ಲಿ ಆರಂಭವಾಯಿತು. ಬಹುಸಂಖ್ಯಾತರಾಗಿದ್ದ ಬ್ರಾಹ್ಮಣೇತರರು ಸರ್ಕಾರಿ ರಂಗದಲ್ಲಿ ಅವಕಾಶಗಳಲ್ಲಿ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ತಮಗೆ ಪ್ರಾತಿನಿಧ್ಯ ಸಿಗಬೇಕೆಂದು ಹೋರಾಟ ಆರಂಭಿಸಿದರು. ಕರ್ನಾಟಕವೂ ಸೇರಿ ವಿವಿಧ ರಾಜ್ಯಗಳಲ್ಲಿ ಇದೊಂದು ಪ್ರಮುಖ ಚಳವಳಿಯಾಗಿ ಬ್ರಾಹ್ಮಣೇತರ ಸಮುದಾಯಗಳು ತಮ್ಮ ಮೇಲೆ ಹೇರಲಾಗಿದ್ದ ಸಾಮಾಜಿಕ ನಿರ್ಬಂಧಗಳನ್ನು ವಿರೋಧಿಸ ತೊಡಗಿದರು. 1916ರಲ್ಲಿ ಜಸ್ಟೀಸ್ ಪಾರ್ಟಿ ಈ ಚಳವಳಿಯನ್ನು ಮುನ್ನಡೆಸಿತು".

ಒಟ್ಟಿನಲ್ಲಿ ಬ್ರಾಹ್ಮಣ್ಯದ ಮೋಸ, ಕ್ರೌರ್ಯ, ಅನ್ಯಾಯಗಳ ಕುರಿತ ಅರಿವು ಮೂಡಿಸುವ ಯಾವ ಪಾಠಗಳೂ ಇರಕೂಡದು ಎಂಬುದು ಈ ಪಠ್ಯ ಪರಿಷ್ಕರಣೆಯ ಒಂದು ಮುಖ್ಯ ಗುರಿ ಎಂಬುದು ಈ ಮೂಲಕ ಸಾಬೀತಾಗುತ್ತದೆ.

ಅಮರ ಸ್ವಾತಂತ್ರ್ಯ ಹೋರಾಟಗಾರ 'ಭಗತ್ ಸಿಂಗ್'ರನ್ನು ಬಿಡದ ಹೇಡಿಗಳು

ಡಾ. ಜಿ. ರಾಮಕೃಷ್ಣ ಅವರು ಬರೆದ ಅಪ್ರತಿಮ ಕ್ರಾಂತಿಕಾರಿ ಭಗತ್ ಸಿಂಗ್ ಕುರಿತ ಪಾಠ 10ನೇ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿದ್ದದ್ದನ್ನು ಕೈಬಿಡಲಾಗಿತ್ತು. ಜನರ ತೀವ್ರ ಪ್ರತಿಭಟನೆಯ ನಂತರ ಪಾಠವನ್ನು ಮರು ಸೇರ್ಪಡೆ ಮಾಡಲಾಗಿದೆ. ಈ ಪಾಠವನ್ನು ಕೈಬಿಟ್ಟಿಲ್ಲ ಎಂದು ಶಿಕ್ಷಣ ಸಚಿವರು ಸುಳ್ಳು ಹೇಳಿದ್ದರು. ಪರಿಷ್ಕರಣಾ ಸಮಿತಿ ಸಿದ್ಧಪಡಿಸಿದ್ದ ಪುಸ್ತಕದಲ್ಲಿ ಭಗತ್ ಸಿಂಗ್ ಪಾಠ ಇರಲಿಲ್ಲ. ಮತ್ತೆ ಸೇರಿಸಲಾಗಿದೆ. (ಈ ಬೇಜವಾಬ್ದಾರಿ ಆಟದಲ್ಲಿ ಕೋಟ್ಯಂತರ ರೂಪಾಯಿ ಜನರ ತೆರಿಗೆ ಹಣ ಪೋಲಾಗಿರುವುದಂತೂ ಸತ್ಯ.)

ಚಕ್ರವರ್ತಿ ಸೂಲಿಬೆಲೆಯ 'ತಾಯಿ ಭಾರತ ಮಾತೆಯ ಪುತ್ರರು' ಬರಹವನ್ನು ಪಠ್ಯಕ್ಕೆ ಸೇರಿಸಲಾಗಿದೆ. ಇಂತಹ ಅಮೋಘ ಲೇಖಕರ ಪಾಠಗಳನ್ನು ಓದಬೇಕಾಗಿರುವ ಇಪ್ಪತ್ತೊಂದನೇ ಶತಮಾನದ ವಿದ್ಯಾರ್ಥಿಗಳು ಮತ್ತು ಪಾಠ ಮಾಡಬೇಕಾದ ಶಿಕ್ಷಕರೇ ಧನ್ಯರು.

ಬ್ರಿಟೀಷರನ್ನು ಭಾರತದ ಉಪಖಂಡದಿಂದಲೇ ಓಡಿಸಬೇಕೆಂದು ಪಣತೊಟ್ಟು ರಣರಂಗದಲ್ಲೇ ಹೋರಾಡುತ್ತಾ ಪ್ರಾಣತೆತ್ತ ಹುತಾತ್ಮ ಟಿಪ್ಪು ಕುರಿತ ಪಾಠವನ್ನು ಕಿತ್ತೆಸೆಯಲು ಎಷ್ಟೇ ಪ್ರಯತ್ನ ಪಟ್ಟರೂ ಇತಿಹಾಸಕಾರರ ವಿರೋಧದಿಂದ ಅದು ಆಗಿಲ್ಲವೆಂದು ಕಾಣುತ್ತಿದೆ. ಎಷ್ಟೇ ತಿಣುಕಿದರೂ 'ಮೈಸೂರು ಹುಲಿ' ಎಂಬ ಪದ ವಿಶೇಷಣವನ್ನೂ ಸಹ ತೆಗೆಸಲು ಸಂಘ ಪರಿವಾರದ ಭಂಡರಿಗೆ ಸಾಧ್ಯವಾಗಿಲ್ಲ ಎನ್ನುವುದು ಆರೆಸ್ಸೆಸ್–ಬಿಜೆಪಿಗಳ ವಾದದ ಟೊಳ್ಳುತನಕ್ಕೆ ಸಾಕ್ಷಿಯಾಗಿದೆ. ಆದರೆ ಈ ಹೇಡಿಗಳ ಪ್ರಯತ್ನವಂತೂ ಮುಂದುವರೆಯುತ್ತದೆ. ಪ್ರಜ್ಞಾವಂತ ಜನತೆ ದೇಶ ರಕ್ಷಣೆಗೆ ಟೊಂಕ ಕಟ್ಟಿ ನಿಲ್ಲಬೇಕಿದೆ.



–ಆರ್. ರಾಮಕೃಷ್ಣ

'ನಿಮ್ಮ ಆದರ್ಶ ಪುರುಷ ಯಾರು?'

ಎಚ್ಚರ! ಸ್ವಾತಂತ್ರ್ಯ ಹೋರಾಟಕ್ಕೆ ದ್ರೋಹ ಬಗೆದವರಂತೂ ಮಕ್ಕಳ ಆದರ್ಶ ಆಗಲಾರರು..!!

ಹತ್ತನೆಯ ತರಗತಿಗೆ ಹೊಸದಾಗಿ 'ನಿಮ್ಮ ಆದರ್ಶ ಪುರುಷ ಯಾರು' ಎಂಬ ಒಂದು ಬರಹವನ್ನು ಸೇರಿಸಲಾಗಿದೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಸ್ಥಾಪಕ ಕೇಶವ ಬಲಿರಾಮ ಹೆಗ್ಡೇವಾರ್ ಅವರ ಬರಹ ಅದು. ವ್ಯಕ್ತಿಗಳು ಮುಖ್ಯವಲ್ಲ, ಸಿದ್ಧಾಂತಗಳು ಮುಖ್ಯ, ಸಿದ್ಧಾಂತದ ಸಂಕೇತವಾದ ಬಾವುಟ ಮುಖ್ಯ ಎಂದು ಆರೆಸ್ಸೆಸ್‌ನ ದೇಶಪ್ರೇಮದ ವೇಷದೊಳಗಿನ, ದ್ವೇಷಾಧರಿತ ವಿಕೃತ ಸಿದ್ಧಾಂತ ಮತ್ತು ಅದಕ್ಕೆ ಪೂರಕವಾಗಿ ದುರ್ಬಳಕೆಯಾಗುತ್ತಿರುವ ಬಾವುಟದ ಬಗೆಗೆ ಬರೆದ ಬರಹ ಇದು. ಬರಹದಲ್ಲಿ ಭಗವಾಧ್ವಜ ಎಂಬುದನ್ನು ಸೂಚಿಸುವ ಭಾಗವನ್ನು ಕಿತ್ತು ಹಾಕಿ ಶಾಲಾ ಪಠ್ಯದಲ್ಲಿ ತುರುಕಲಾಗಿದೆ. ಇದನ್ನು ಓದಿದವರು ಇಲ್ಲಿ 'ಬಾವುಟ' ಎಂದರೆ 'ರಾಷ್ಟ್ರಧ್ವಜ'ದ ಬಗೆಗೆ ಹೇಳಲಾಗಿರುವುದು ಎಂದೂ ಭಾವಿಸಬಹುದು. ಅದು ಸತ್ಯವಲ್ಲ. ಆದರೆ ಈ ಬರಹ ಪಠ್ಯವನ್ನು ಸೇರಿರುವುದು ಒಂದು ದೊಡ್ಡ ಪಿತೂರಿಯ ಭಾಗ ಎಂಬುದು ಮಾತ್ರ ನಿಜ.

ಮೊದಲನೆಯದಾಗಿ ಇಲ್ಲಿ ಪ್ರಸ್ತಾಪಿಸಿರುವ ಧ್ವಜ ಸ್ವಾತಂತ್ರ್ಯ ಹೋರಾಟದ ತ್ಯಾಗ ಬಲಿದಾನಗಳಿಂದ ಕೂಡಿದ ಚಳುವಳಿಯ ಕುಲುಮೆಯಲ್ಲಿ ರೂಪುಗೊಂಡ ತ್ರಿವರ್ಣ ಧ್ವಜವಲ್ಲ. ಕೇಸರಿ ಧ್ವಜ. ಆರೆಸ್ಸೆಸ್ಸಿಗರು 'ಭಗವಾಧ್ವಜ' ಎಂದು ಕರೆಯುವ ಧ್ವಜ. ಕೇಸರಿ ಬಣ್ಣ ಮತ್ತು ಬಾವುಟದ ಕುರಿತು ಸಂಕುಚಿತ ರಾಜಕೀಯ ದುರುದ್ದೇಶವಿಲ್ಲದ ಧಾರ್ಮಿಕ ವ್ಯಕ್ತಿಗಳು 'ತ್ಯಾಗದ ಸಂಕೇತ' ಎಂದು ಭಾವಿಸಿರುವ ಧ್ವಜ. ಜನ ಸಾಮಾನ್ಯರಲ್ಲಿ ಈ ಬಗೆಗೆ ಇರುವ ಗೌರವದ ಭಾವನೆಯನ್ನು ದುರುಪಯೋಗಪಡಿಸಿಕೊಳ್ಳಲು ಆರೆಸ್ಸೆಸ್ ಆಯ್ಕೆ ಮಾಡಿಕೊಂಡು ದ್ವೇಷ ಹರಡಲು ದುರ್ಬಳಕೆ ಮಾಡುತ್ತಿರುವ ಧ್ವಜ.

ಅಷ್ಟಕ್ಕೂ ಆದರ್ಶಗಳ ಬಗೆಗೆ, ತ್ಯಾಗ ಬಲಿದಾನಗಳ ಮಾತನಾಡಲು ಹೆಡ್ಗೇವಾರರಿಗೆ ಇರುವ ಅರ್ಹತೆಯಾದರೂ ಏನು?

ಸ್ವಾತಂತ್ರ್ಯ ಹೋರಾಟವು ಕೋಟಿ ಕೋಟಿ ಜನರನ್ನು ಸೆಳೆದು ಮಹಾ ಜನಾಂದೋಲನವಾಗಿ ಹಬ್ಬುತ್ತಿದ್ದ ಕಾಲಘಟ್ಟದಲ್ಲಿ, ಈ ಚಳುವಳಿಗೆ ದ್ರೋಹ ಬಗೆದು ಬ್ರಿಟೀಷರ ಜೊತೆ ಷಾಮೀಲಾಗಿ 'ಹಿಂದೂ ರಾಷ್ಟ್ರ' ಎಂಬ ಸಿದ್ಧಾಂತದ ಆಧಾರದಲ್ಲಿ ಮುಸ್ಲಿಮರ ಕುರಿತು ದ್ವೇಷವನ್ನು ಮತ್ತು ದೇಶ ವಿಭಜಕ ಸಿದ್ಧಾಂತವನ್ನು ಹರಡಿ ಕೋಮು ಗಲಭೆಗಳನ್ನು ಹುಟ್ಟು ಹಾಕಿದ ಕುಖ್ಯಾತಿ ಆರೆಸ್ಸೆಸ್‌ನದು. ಭಾರತೀಯರನ್ನು ಹಿಂದೂ ಮತ್ತು ಮುಸ್ಲಿಂ ಎಂದು ಒಡೆದು ಸ್ವಾತಂತ್ರ್ಯ ಹೋರಾಟವನ್ನು ದುರ್ಬಲಗೊಳಿಸುವುದು, ದಮನ ಮಾಡುವುದು ಬ್ರಿಟೀಷರ ಕುಟಿಲ ತಂತ್ರವಾಗಿತ್ತು. ಬ್ರಿಟೀಷರ ತಾಳಕ್ಕೆ ತಕ್ಕಂತೆ ಕುಣಿದದ್ದು ಆರೆಸ್ಸೆಸ್ ಮತ್ತು ಹಿಂದೂ ಮಹಾ ಸಭಾಗಳು. ಸಾರ್ವಕರ್ 1937 ರಲ್ಲಿ ಅಹಮದಾಬಾದ್‌ನಲ್ಲಿ ನಡೆದ 'ಹಿಂದೂ ಮಹಾ ಸಭಾ'ದ ರಾಷ್ಟ್ರೀಯ ಅಧಿವೇಶನದ ಅಧ್ಯಕ್ಷತೆ ವಹಿಸಿ ಭಾರತದಲ್ಲಿ 'ಹಿಂದೂ' ಮತ್ತು 'ಮುಸ್ಲಿಂ' ಎಂಬ ಎರಡು ರಾಷ್ಟ್ರಗಳಿವೆ ಎಂಬ 'ದ್ವಿರಾಷ್ಟ್ರ ಸಿದ್ಧಾಂತ'ವನ್ನು ಮೊತ್ತ ಮೊದಲಿಗೆ ಪ್ರತಿಪಾದಿಸಿದರು. ಈ 'ದ್ವಿರಾಷ್ಟ್ರ ಸಿದ್ಧಾಂತ'ವನ್ನು ಮುಸ್ಲೀಮ್ ಲೀಗ್ 1940 ರ ನಂತರ ಗಟ್ಟಿಯಾಗಿ ಹಿಡಿದುಕೊಂಡಿತು ಎಂಬುದನ್ನು ನಾವು ಮರೆಯಬಾರದು.



RSS founder's speech now part of textbook

Hedgewar's public speech is a lesson in Class X Kannada textbook

JAYANTH R.
BENGALURU

In a clear sign of Hindutva ideology entering school curriculum in Karnataka, the State government has adopted the Rashtriya Swayamsevak Sangh (RSS) founder Keshav Baliram Hedgewar's speech as one of the lessons in Class X Kannada (first language, State syllabus) textbook from the 2022-23 academic year.

The text of the speech of Hedgewar was recommended to be included in the syllabus by the Textbook Revision Committee, headed by writer Rohith Chakrateertha.

The lesson is titled "Nijavada Adarsha Purusha Yaragabeku?" (Who should be the real role model?). It is number 5 in the Kannada prose textbook, which is now in the process of being printed. The committee had submitted its final report to the government in March.

Keshav Baliram Hedgewar

Lankesh dropped

From the Kannada non-detailed text, lessons dropped include those of well-known writer and journalist P. Lankesh's "Mruga Mattu Sundari" and Leftist thinker G. Ramakrishna's "Bhagat Singh". Instead, writer Shivananda Kalave's "Swadeshi Sutrada Sarala Habba" and M. Govinda Pai's "Naanu Prasa Bitta Kathe" have been added. Among the lessons dropped in the detailed text are Sara Aboobacker's "Yuddha", A.N. Murthy Rao's "Vyaghra Kathe", and Shivakotyacharya's "Sukumara Swamy Kathe". Among the inclusions in this section are Vedic scholar the late Bannanje Govindacharya's "Sukanashana Upadesha" and Shatavadhani R. Ganesh's "Shreestha Bharatiya Chintanegalu".


Insisting that it was not an ideological imposition, Mr. Chakrateertha told The Hindu: "There was no pressure from any political party or organisation. This does not amount to imposing any organisation's ideology on students. We have chosen Hedgewar as a writer and not on the basis of his ideology or organisation."

B.C. Nagesh, Minister, Primary and Secondary Education, also insisted that there was "nothing objectionable" in the inclusions and exclusions done in the textbooks, while many progressive writers and activists have objected to what they termed attempts to infuse Hindutva ideology among students.

RELATED REPORTS PAGE 7

'ಕೊಂಚ ಮಟ್ಟಿಗೆ' ಹೆಡ್ಗೇವಾರ್ ಬಿಟ್ಟರೆ, ಬೇರೆ ಯಾವ ಆರೆಸ್ಸೆಸ್ ಮುಖಂಡರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡ ಇತಿಹಾಸವೇ ಇಲ್ಲ. 1920 ರಲ್ಲಿ ಯುವಕ ಹೆಡ್ಗೇವಾರ್ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದರು ಎಂಬುದು ನಿಜ. ಆದರೆ ಆಗ ಅವರು ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು. ಆಗಿನ್ನು ಆರೆಸ್ಸೆಸ್ ಸ್ಥಾಪನೆ ಆಗಿಯೇ ಇರಲಿಲ್ಲ. ಆರೆಸ್ಸೆಸ್ ಸ್ಥಾಪನೆಯಾದ ಮೇಲೆ ಯಾಕೆ ಸ್ವಾತಂತ್ರ್ಯ ಹೋರಾಟದಿಂದ ಸಂಪೂರ್ಣವಾಗಿ ಹೆಡ್ಗೇವಾರ್ ಹಿಂದೆ ಸರಿದರು.?? 1925 ರಲ್ಲಿ ವಿಜಯ ದಶಮಿಯಂದು ಹೆಡ್ಗೇವಾರ್ ಆರೆಸ್ಸೆಸ್ ಅನ್ನು ಸ್ಥಾಪಿಸಿದ ಮೇಲೆ ಒಮ್ಮೆ ಮಾತ್ರ 1930 ರಲ್ಲಿ ಕಾಂಗ್ರೆಸ್ ನೇತೃತ್ವದ ಸತ್ಯಾಗ್ರಹ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. (ಗಮನಿಸಿ ಅದು ಆರೆಸ್ಸೆಸ್ ಅಥವಾ ಹಿಂದೂ ಮಹಾ ಸಭಾಗಳ ಹೋರಾಟ ಅಲ್ಲ.) ಸಣ್ಣ ಅವಧಿಗೆ ಜೈಲಿನಲ್ಲಿದ್ದದ್ದು ನಿಜ.

ಆದರೆ ಅದು ಅವರೇ ಹೇಳಿಕೊಂಡಿರುವಂತೆ 'ಸ್ವಾತಂತ್ರ್ಯ ಹೋರಾಟಗಾರ'ರ ಜೊತೆ ಜೈಲು ಸೇರಿ, ಜೈಲಿನಲ್ಲಿರುವ ಹೋರಾಟಗಾರರೊಂದಿಗೆ ಸ್ನೇಹ ಬೆಳೆಸಿ ಅವರನ್ನು ಹಿಂದುತ್ವ ಸಿದ್ಧಾಂತದ ಕಡೆಗೆ ಸೆಳೆಯುವುದಕ್ಕಾಗಿ ಹೋದದ್ದು. (ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯಲ್ಲಿ ಹೋದದ್ದಲ್ಲ.) ಆರೆಸ್ಸೆಸ್‌ನ ಪ್ರಕಾಶನವಾದ 'ರಾಷ್ಟ್ರೋತ್ಥಾನ ಪ್ರಕಾಶನ'ದ ಪುಸ್ತಕಗಳಲ್ಲಿ ಸಹ ಬಿ.ಎಸ್.ಮೂಂಜೆ, ಎಂ. ಎಸ್. ಗೋಳ್ವಾಲ್ಕರ್, ದೀನ ದಯಾಳ್ ಉಪಾಧ್ಯಾಯ ಮುಂತಾದ ಯಾವ ಆರೆಸ್ಸೆಸ್ ನಾಯಕರ ಜೀವನ ಚರಿತ್ರೆಯಲ್ಲೂ ಸ್ವಾತಂತ್ರ್ಯ ಹೋರಾಟದ ಸಣ್ಣ ಸೊಲ್ಲೂ ಇಲ್ಲ. ಹಿಂದೂ ಮಹಾ ಸಭಾದ ಶ್ಯಾಮ ಪ್ರಸಾದ ಮುಖರ್ಜಿಯವರಂತೂ ಬಂಗಾಳ ಪ್ರಾಂತದಲ್ಲಿ ಎ.ಕೆ. ಫಜಲ್ ಹಕ್ ನೇತೃತ್ವದ ಮುಸ್ಲಿಂ ಲೀಗ್ – ಹಿಂದೂ ಮಹಾ ಸಭಾಗಳ ಸಮ್ಮಿಶ್ರ ಸರ್ಕಾರದಲ್ಲಿ ಹಣಕಾಸು ಮಂತ್ರಿಯಾಗಿದ್ದರು. ಪ್ರತ್ಯೇಕ ರಾಷ್ಟ್ರ ಬೇಡಿಕೆ ಮುಂದಿಟ್ಟ ಮೇಲೂ ಮುಸ್ಲಿಂ ಲೀಗ್ ಜೊತೆ ಶ್ಯಾಮ ಪ್ರಸಾದ್ ಮುಖರ್ಜಿಯವರು ಸಚಿವರಾಗಿ ಅಧಿಕಾರ ಅನುಭವಿಸಿದರು. ಅಲ್ಲದೇ, 1942 'ಕ್ವಿಟ್ ಇಂಡಿಯಾ' ಚಳುವಳಿಗೆ ಸಂಪೂರ್ಣ ವಿರೋಧ ತೋರಿದರು ಮತ್ತು ಅಂದಿನ ಬಂಗಾಳ ಪ್ರಾಂತದ ಬ್ರಿಟೀಷ್ ಗವರ್ನರ್ ಜಾನ್ ಹೆರ್ ಬರ್ಟ್‌ಗೆ ಪತ್ರ ಬರೆದು, ಬ್ರಿಟೀಷ್ ಸರಕಾರ ದೇಶದಲ್ಲಿ ಕಾಂಗ್ರೆಸ್ ನೇತ್ರತ್ವದ 'ಕ್ವಿಟ್ ಇಂಡಿಯಾ' ಚಳುವಳಿಯನ್ನು 'ದಮನ ಮಾಡಬೇಕು' ಎಂದು ಒತ್ತಾಯಿಸಿದರು. ಹಾಗೆಯೇ ಬಂಗಾಳ ಪ್ರಾಂತದಲ್ಲಿ ಮುಸ್ಲಿಂ ಲೀಗ್ – ಹಿಂದೂ ಮಹಾಸಭಾ ಸಮ್ಮಿಶ್ರ ಸರಕಾರವು ಕ್ವಿಟ್ ಇಂಡಿಯಾ ಚಳುವಳಿಯನ್ನು ಸೋಲಿಸಲು ಎಲ್ಲ ಪ್ರಯತ್ನ ಮಾಡುವುದಾಗಿ ಬ್ರಿಟೀಷ್ ಸರಕಾರಕ್ಕೆ ಭರವಸೆ ನೀಡಿದರು. ಸಂಘ ಪರಿವಾರವು ಸ್ವಾತಂತ್ರ್ಯ ಹೋರಾಟಗಾರನೆಂದು ವೈಭವೀಕರಿಸುವ ಸಾವರ್ಕರ್ ಬ್ರಿಟೀಷರ ಜೈಲಿನಿಂದ ಬಿಡುಗಡೆಯಾಗಿದ್ದು ಹೇಗೆ.? ಅವರು ಅಂಡಮಾನ್ ಜೈಲಿನಿಂದ ಬ್ರಿಟೀಷರಿಗೆ ಬರೆದ ಕ್ಷಮಾಪಣಾ ಪತ್ರಗಳೆಷ್ಟು? ಬಿಡುಗಡೆಗೆ ಬ್ರಿಟೀಷರು ಒಡ್ಡಿದ ಅಪಮಾನಕಾರಿ ಷರತ್ತುಗಳೇನು ಎಂಬುದು ಬೇರೆಯೇ ಕತೆ.



ಇಂತಹ ಹೀನಾಯ ದೇಶದ್ರೋಹದ ಇತಿಹಾಸ ಇರುವ ಆರೆಸ್ಸೆಸ್ ಮತ್ತು ಸಂಘ ಪರಿವಾರವು ಆರೆಸ್ಸೆಸ್ ಬಗೆಗೆ ನೇರವಾಗಿ ಪಠ್ಯದಲ್ಲಿ ಸೇರಿಸಲು ಧೈರ್ಯ ಸಾಲದೇ, ಲೇಖಕರ ಪರಿಚಯದ ಹೆಸರಿನಲ್ಲಿ ಆರೆಸ್ಸೆಸ್ ಕುರಿತ ವೈಭವೀಕರಣದ ವಿಚಾರಗಳನ್ನು ಪಠ್ಯ ಪುಸ್ತಕಗಳಲ್ಲಿ ತೂರಿಸಿ ವಿದ್ಯಾರ್ಥಿ– ಶಿಕ್ಷಕರ ಕಣ್ಣಿಗೆ ಮಂಕು ಬೂದಿ ಎರಚಲು ಪ್ರಯತ್ನಿಸುತ್ತಿದೆ.

ಈ ಪಿತೂರಿಯನ್ನು ಸಮರ್ಥವಾಗಿ ಎದುರಿಸುವ ಸ್ಪಷ್ಟತೆಯನ್ನು ದೇಶದ ವಿದ್ಯಾರ್ಥಿ ಸಮುದಾಯ ಮತ್ತು ಪ್ರಜ್ಞಾವಂತ ಶಿಕ್ಷಣ ಪ್ರೇಮಿ ಜನತೆ ಗಳಿಸಿಕೊಳ್ಳಬೇಕು. ಅದೊಂದು ಷಡ್ಯಂತ್ರವನ್ನು ಸೋಲಿಸುವ ದಾರಿ.


ಗೋಧಿ ರಫ್ತು: ಗೊಂದಲಮಯ ನೀತಿ ಅಥವಾ ಒಳಕಾರ್ಯಸೂಚಿ?

–ಮಧುರಾ ಸ್ವಾಮಿನಾಥನ್ ಮತ್ತು ದೀಪಕ್ ಜಾನ್ಸನ್

ಈ ಸರ್ಕಾರದಲ್ಲಿ ಆಹಾರ ಭದ್ರತೆಯ ಸುಸಂಬದ್ಧ ನೀತಿಯ ಕೊರತೆಯಿದೆ. ಆಹಾರ ಭದ್ರತೆಯು ತಕ್ಷಣದ ಮತ್ತು ದೀರ್ಘಾವಧಿಯ ಕಾಳಜಿಯಾಗಬೇಕಾಗಿದೆ ಮತ್ತು ಇದಕ್ಕೆ "ಸರ್ಜಿಕಲ್ ಸ್ಟ್ರೈಕ್" ಅಗತ್ಯವಿರುವುದಿಲ್ಲ. ಉತ್ತಮವಾಗಿ ಕಾರ್ಯನಿರ್ವಹಿಸುವ ಪಡಿತರ ವಿತರಣಾ ವ್ಯವಸ್ಥೆ ಬೆಲೆಗಳನ್ನು ನಿಯಂತ್ರಿಸುತ್ತದೆ ಮತ್ತು ಗ್ರಾಹಕರಿಗೆ ಪರಿಹಾರವನ್ನು ನೀಡುತ್ತದೆ. ಸರ್ಕಾರವು ಹೆಚ್ಚಿನ ಬೆಲೆಗೆ ಆಹಾರ ಧಾನ್ಯವನ್ನು ಸಂಗ್ರಹಿಸದೆ ವ್ಯಾಪಾರಿಗಳನ್ನು ಬೆಂಬಲಿಸಿ ರೈತರಿಗೆ ಶಿಕ್ಷೆ ವಿಧಿಸಿದೆ ಮತ್ತು ಭವಿಷ್ಯದ ಲಾಭಕ್ಕಾಗಿ ದಾಸ್ತಾನುಗಳನ್ನು ಖರೀದಿಸಲು ಖಾಸಗಿ ವ್ಯಾಪಾರಿಗಳಿಗೆ ಮುಕ್ತ ಅವಕಾಶ ಮಾಡಿಕೊಟ್ಟಿದೆ. ಈ ದೃಷ್ಟಿಯಿಂದ ನೋಡಿದಾಗ, ಸರ್ಕಾರ ಖಾಸಗಿಯವರಿಗೆ ಅಂದರೆ ವ್ಯಾಪಾರಿಗಳು ಮತ್ತು ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಒಳ ಕಾರ್ಯಸೂಚಿ ಹೊಂದಿರಬಹುದೆಂಬ ಸಂದೇಹ ಬರುತ್ತದೆ.

('ದಿ ಹಿಂದೂ' ದಿನಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಸಂಗ್ರಹಾನುವಾದ)

ಅನುವಾದ: **ಜಿ.ಎಸ್. ಮಣಿ**



ಗೋಧಿಯ ರಫ್ತು ಹೆಚ್ಚಳದ ಮೂಲಕ "ಭಾರತೀಯ ರೈತರು ಜಗತ್ತನ್ನು ಪೋಷಿಸುತ್ತಿದ್ದಾರೆ" ಎಂದು ಪ್ರಧಾನಿ ಮೋದಿ ಹೇಳಿದ ಒಂದು ತಿಂಗಳ ನಂತರ, ಮೇ 13, 2022 ರಂದು ಭಾರತ ಸರ್ಕಾರವು ಗೋಧಿಯ ರಫ್ತಿನ ಮೇಲೆ ಹಠಾತ್ ನಿಷೇಧವನ್ನು ಘೋಷಿಸಿತು. ಯಾಕೆ ಎಂಬ ಪ್ರಶ್ನೆ ಬೃಹತ್ತಾಗಿ ಉದ್ಭವಿಸುತ್ತದೆ. ವಾಟ್ಸಾಪ್ ನಲ್ಲಿ ಭಾರತ ಜಗತ್ತನ್ನೇ ಪೋಷಿಸುತ್ತಿದೆ ಎಂದು ಬಡಾಯಿ ಕೊಚ್ಚಿಕೊಳ್ಳುವ ಮುನ್ನ ಪರಿಸ್ಥಿತಿಯ ಗಂಭೀರ ಪರಿಗಣನೆ ಮಾಡಿರಲಿಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದು ಈ ಸರ್ಕಾರದ ಸ್ವಭಾವವೂ ಹೌದು. ಆಳವಾದ ವಿಶ್ಲೇಷಣೆಯ ಬದಲು ದೊಡ್ಡ ಗಂಟಲಿನ ಒದರುವಿಕೆ ಈ ಪರಿವಾರದ ವೈಶಿಷ್ಟ್ಯ. ರಫ್ತು ನಿಷೇಧವು ಜಾರಿಗೆ ಬರುವ ಒಂದು ದಿನದ ಮುಂಚೆಯೂ, ಸರ್ಕಾರಿ ಅಧಿಕಾರಿಗಳು ಸಂಭವನೀಯ ರಫ್ತು ಸ್ಥಳಗಳನ್ನು ಹುಡುಕುತ್ತಿದ್ದರು. ಇದು ಗೋಧಿ ರಫ್ತು ನಿಯಂತ್ರಣಕ್ಕೆ ಯಾವುದೇ ಸ್ಪಷ್ಟ ಮತ್ತು ತರ್ಕ ಬದ್ಧ ಯೋಜನೆಗಳಿಲ್ಲ ಎಂಬುದನ್ನು ಎತ್ತಿ ತೋರಿಸುತ್ತದೆ. ಈ ಘೋಷಣೆಯೊಂದಿಗೆ ಸರ್ಕಾರವು ಗೊಂದಲಮಯ ನೀತಿ ಸಂಕೇತಗಳನ್ನು ರವಾನಿಸಿದೆ.

ಆಹಾರ ಧಾನ್ಯಗಳ ಸಾರ್ವಜನಿಕ ಸಂಗ್ರಹಣೆಯ ವ್ಯವಸ್ಥೆಯು 1960 ರ ದಶಕದ ಮಧ್ಯಭಾಗದಿಂದ ನಮ್ಮ ದೇಶದಲ್ಲಿ ಜಾರಿಯಲ್ಲಿದೆ ಮತ್ತು ಅದು ನಮ್ಮ ಆಹಾರ ನೀತಿಯ ಬೆನ್ನೆಲುಬಾಗಿದೆ. ಉದಾರೀಕರಣ ನೀತಿಯ ಭಾಗವಾಗಿ, ಅನೇಕ ಅರ್ಥಶಾಸ್ತ್ರಜ್ಞರು ಭಾರತದಲ್ಲಿ ಆಹಾರ ದಾಸ್ತಾನುಗಳನ್ನು ಕಡಿಮೆಗೊಳಿಸಬೇಕು ಮತ್ತು ಆಹಾರ ಭದ್ರತೆಯ ಅಗತ್ಯಗಳನ್ನು ವಿಶ್ವ ವ್ಯಾಪಾರ ಮತ್ತು ಚಿಕಾಗೋ ಭವಿಷ್ಯದ ಮಾರುಕಟ್ಟೆಯ ಮೂಲಕ ಪೂರೈಸಿಕೊಳ್ಳಬೇಕು ಎಂದು ಸಲಹೆ ನೀಡುತ್ತಾರೆ. ಪ್ರಗತಿಪರ ಅರ್ಥಶಾಸ್ತ್ರಜ್ಞರು ಮತ್ತು ಸಾಮಾಜಿಕ ವಿಜ್ಞಾನಿಗಳು ಯಾವಾಗಲೂ ಭಾರತದ ಗಾತ್ರದ ದೇಶಕ್ಕೆ ದೇಶೀಯ ಉತ್ಪಾದನೆಯ ಮೂಲಕ ಆಹಾರ ಭದ್ರತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದೇ ವಾದಿಸುತ್ತಾರೆ. ಇದರ ಮಹತ್ವ ಸ್ವಲ್ಪ ವಿಚಾರ ಮಾಡಬಲ್ಲವರಿಗೂ ಮನದಟ್ಟಾಗುವಂತಹದ್ದು.

ಈ ಬೇಸಿಗೆಯಲ್ಲಿ, ಭಾರತೀಯ ಆಹಾರ ನಿಗಮದಿಂದ ಗೋಧಿ ಸಂಗ್ರಹಣೆ ತುಂಬಾ ಕಡಿಮೆಯಾಗಿದೆ. ಕಳೆದ ವರ್ಷ, ಭಾರತ ಆಹಾರ ನಿಗಮ ಮತ್ತು ಇತರ ಸಹ ಸಂಸ್ಥೆಗಳು 43.34 ಮಿಲಿಯನ್ ಟನ್ ಗೋಧಿಯನ್ನು ಸಂಗ್ರಹಿಸಿದ್ದವು. ಪ್ರಸ್ತುತ ಹಂಗಾಮಿನಲ್ಲಿ, ಅಂದರೆ, 2022 ರ ಮೇ 10, ಹೊತ್ತಿಗೆ ಸಂಗ್ರಹಣೆಯು ಕೇವಲ 17.8 ಮಿಲಿಯನ್ ಟನ್‌ಗಳಷ್ಟಾಗಿದೆ. ಕಡಿಮೆ ಪ್ರಮಾಣದ ಸಂಗ್ರಹಣೆಯನ್ನು ಗಮನಿಸಿದರೆ, ಸರ್ಕಾರವು ಪ್ರಸಕ್ತ ಋತುವಿನ ಸಂಗ್ರಹಣೆ ಗುರಿಯನ್ನು 44.4 ರಿಂದ 19.5 ಮಿಲಿಯನ್ ಟನ್‌ಗಳಿಗೆ ಇಳಿಸಿರುವುದು ಗೊತ್ತಾಗುತ್ತದೆ. ಖಾಸಗಿ ವ್ಯಾಪಾರಿಗಳು ಹೆಚ್ಚಿನ ಬೆಲೆಗೆ ರಫ್ತು ಸೇರಿದಂತೆ ಭವಿಷ್ಯದ ವ್ಯಾಪಾರ ಲಾಭಕ್ಕಾಗಿ ಗೋಧಿಯನ್ನು ಖರೀದಿಸುತ್ತಿದ್ದಾರೆ ಮತ್ತು ಸಂಗ್ರಹಿಸುತ್ತಿದ್ದಾರೆ ಎಂದು ತಜ್ಞರು ಹೇಳುತ್ತಿದ್ದಾರೆ. ರಫ್ತು ನೀತಿಯಲ್ಲಿನ ಹಠಾತ್ ತಿರುವು ಕಡಿಮೆ ಸಾರ್ವಜನಿಕ ಸಂಗ್ರಹಣೆಯು ದೇಶೀಯ ಆಹಾರ ಭದ್ರತೆಯ ಮೇಲೆ ಪರಿಣಾಮ ಬೀರುತ್ತದೆ ಎಂಬ ಭಯದ ಕಾರಣದಿಂದಾಗಿ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಶ್ರೀಲಂಕಾದ ಇಂದಿನ ಪರಿಸ್ಥಿತಿಯ ಅರಿವು ಈ ಸರ್ಕಾರವನ್ನು ಬಾಧಿಸಿರುವ ಸಾಧ್ಯತೆ ಈ ಎಲ್ಲ ಗೊಂದಲಮಯ ನಿಲುವುಗಳಲ್ಲಿ ಇರಬಹುದೆಂಬ ಸಂದೇಹ ಬಂದೇ ಬರುತ್ತದೆ. ಆಹಾರ ಧಾನ್ಯದ ಲಭ್ಯತೆಯ ವಿಷಯದಲ್ಲಿ ಚಿಂತೆ ಪಡುವ ಪರಿಸ್ಥಿತಿ ಇದೆಯೆ ಎಂಬ ಪ್ರಶ್ನೆ ಏಳುತ್ತದೆ. ಪಡಿತರ ವಿತರಣಾ ವ್ಯವಸ್ಥೆ ಮತ್ತು ನೀತಿಗಳನ್ನು ಸರಿಯಾಗಿ ನಿರ್ವಹಿಸಿ ಅನುಷ್ಠಾನಗೊಳಿಸಿ ಬೆಲೆಗಳನ್ನು ಸ್ಥಿರಗೊಳಿಸಿದರೆ ಖಂಡಿತವಾಗಿಯೂ ಇಲ್ಲ.

ಕಳೆದ ಮಾರ್ಚ್‌ನಲ್ಲಿ ಹೆಚ್ಚಿನ ಉಷ್ಣತೆ ಮತ್ತು ಇತರ ಅಂಶಗಳಿಂದಾಗಿ ಗೋಧಿ ಉತ್ಪಾದನೆಯು ಅಂದಾಜು ಮಾಡಿದ್ದಕ್ಕಿಂತ ಕಡಿಮೆಯಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಉತ್ಪಾದನೆಯಲ್ಲಿ ದೊಡ್ಡ ಕೊರತೆಯೇನಿಲ್ಲ ಎಂಬುದು ಕೆಳಗಿನ ಅಂಕಿಗಳಿಂದ ಸ್ಪಷ್ಟವಾಗುತ್ತದೆ. ಗೋಧಿ ಉತ್ಪಾದನೆ 2018–19ರಲ್ಲಿ 103.6 ಮಿಲಿಯನ್ ಟನ್‌ಗಳು, 19–20 ರಲ್ಲಿ 107.8 ಮಿಲಿಯನ್ ಟನ್‌ಗಳು ಮತ್ತು 2020–21 ರಲ್ಲಿ 109.5 ಮಿಲಿಯನ್ ಟನ್‌ಗಳು. ಈ ವರ್ಷಕ್ಕೆ (2021–22) ಉತ್ಪಾದನೆ ದಾಖಲೆಯ 111.3 ಮಿಲಿಯನ್ ಟನ್‌ಗಳು ಎಂದು ನಿರೀಕ್ಷಿಸಲಾಗಿತ್ತು. 2021–22 ರ ಉತ್ಪಾದನೆಯ ಇತ್ತೀಚಿನ ಅಂದಾಜನ್ನು, ಹಿಂದಿನ ಅಂದಾಜಿನಿಂದ ಕೆಳಕ್ಕೆ ಪರಿಷ್ಕರಿಸಲಾಗಿದೆ, ಅಂದರೆ, 105 ಮಿಲಿಯನ್ ಟನ್‌ಗಳಿಗೆ ಇಳಿಸಲಾಗಿದೆ.

ಉಕ್ರೇನ್‌ನ ಯುದ್ಧದ ಕಾರಣದಿಂದಾಗಿ ಉತ್ಪಾದನೆ ಮತ್ತು ವ್ಯಾಪಾರದಲ್ಲಿ ಜಾಗತಿಕವಾಗಿ ಗೋಧಿ ಪೂರೈಕೆಯ ಕಡಿತದ ಸಮಸ್ಯೆ ಇದೆ. ರಷ್ಯಾ ಮತ್ತು ಉಕ್ರೇನ್ ಎರಡೂ ಜಾಗತಿಕ ಮಾರುಕಟ್ಟೆಯಲ್ಲಿ ಗೋಧಿಯ ಪ್ರಮುಖ ರಫ್ತುದಾರರಾಗಿದ್ದವು ಮತ್ತು ಯುದ್ಧದಿಂದ ಉಂಟಾಗುವ ಅಡಚಣೆಗಳು ಈಜಿಪ್ಟ್‌ನಂತಹ ಈ ಎರಡೂ ದೇಶಗಳಿಂದ ಆಮದು ಮಾಡಿಕೊಳ್ಳುವ ದೇಶಗಳ ಮೇಲೆ ಪರಿಣಾಮ ಬೀರುತ್ತಿವೆ. ಆಮದು ಮಾಡಿಕೊಳ್ಳುವ ದೇಶಗಳಿಗೆ ಪರಿಹಾರ ನೀಡಲು ರಫ್ತುಗಳನ್ನು ಸಡಿಲಿಸುವಂತೆ ಪಾಶ್ಚಿಮಾತ್ಯ ಅಭಿವೃದ್ಧಿ ಹೊಂದಿದ ದೇಶಗಳಿಂದ ಭಾರತಕ್ಕೆ ಒತ್ತಡ ಬರುತ್ತಿದೆ. ಆದರೆ ಪಾಶ್ಚಿಮಾತ್ಯ ದೇಶಗಳು, ಅವುಗಳಲ್ಲಿ ಕೆಲವು ಗೋಧಿಯ ದೊಡ್ಡ ರಫ್ತುದಾರರು, ಪ್ರಸ್ತುತ ಸಂದರ್ಭದಲ್ಲಿ ತಮ್ಮ ರಫ್ತುಗಳನ್ನು ಹೆಚ್ಚಿಸಿಲ್ಲ ಎಂಬುದು ಅವುಗಳ ದ್ವಿಮುಖ ನೀತಿಯ ಪರಿಣಾಮವಾಗಿದೆ. ಜಾಗತಿಕವಾಗಿ ಹಲವು ದೇಶಗಳು ಆಹಾರ ಧಾನ್ಯಗಳ ರಫ್ತಿನ ಮೇಲೆ ನಿಷೇಧ ಹೇರಿವೆ.

ಗೋಧಿಯ ದೊಡ್ಡ ಉತ್ಪಾದನೆ ಮತ್ತು ಭಾರತದೊಳಗೆ ಕೆಲವು ಮಟ್ಟದ ಆಹಾರ ಭದ್ರತೆಯು ಭಾಗಶಃ ಭಾರತದ ಆಹಾರ ಧಾನ್ಯ ಸಂಗ್ರಹ ನೀತಿಯ ಪರಿಣಾಮವಾಗಿದೆ. ಭಾರತದ ಸಾರ್ವಜನಿಕ ಆಹಾರ ಧಾನ್ಯ ಸಂಗ್ರಹಣೆ ನೀತಿಯನ್ನು ತೀವ್ರವಾಗಿ ಟೀಕಿಸುತ್ತಿದ್ದ ವಿಶ್ವಬ್ಯಾಂಕ್‌ನಂತಹ ಸಂಸ್ಥೆಗಳು ಮತ್ತು ಅಭಿವೃದ್ಧಿ ಹೊಂದಿದ ದೇಶಗಳು ಭಾರತದ ಗೋಧಿ ಉತ್ಪಾದನೆ ಮತ್ತು ರಫ್ತಿನ ಮೇಲಿನ ನಿಯಂತ್ರಣದ ಬಗ್ಗೆ ಮಾತನಾಡುವುದು ನಿಜಕ್ಕೂ ವಿಪರ್ಯಾಸ.

ಈ ವಿಷಯದಲ್ಲಿ ಜಾಗತಿಕ ಸಂವಾದವನ್ನು ಅರ್ಥ ಮಾಡಿಕೊಳ್ಳಲು ಮತ್ತು ಪ್ರಸ್ತುತ ನೀತಿ ಸಂದರ್ಭವನ್ನು ಅರ್ಥಮಾಡಿಕೊಳ್ಳಲು, ನಾವು ಭಾರತದಲ್ಲಿ ಹೊಂದಿರುವ ದಾಸ್ತಾನುಗಳನ್ನು ನೋಡುವುದು ಮುಖ್ಯವಾಗುತ್ತದೆ.

ಏಪ್ರಿಲ್ 30, 2022 ರಂದು ಕೇಂದ್ರೀಯ ಪೂಲ್‌ನಲ್ಲಿರುವ ಗೋಧಿಯ ದಾಸ್ತಾನುಗಳು 30.3 ಮಿಲಿಯನ್ ಟನ್‌ಗಳಾಗಿದ್ದು, ಕಳೆದ ವರ್ಷದ 52.5 ಮಿಲಿಯನ್ ಟನ್‌ಗಳಿಗಿಂತ ಇದು ಕಡಿಮೆಯಾಗಿದೆ. ಆದರೆ ಬಫರ್ (ಹೆಚ್ಚಿನ) ದಾಸ್ತಾನು ಮಾನದಂಡಗಳಿಗಿಂತ ಹೆಚ್ಚಾಗಿದೆ. ಈ ವ್ಯಾಪಾರ ಋತುವಿನಲ್ಲಿ ಸರ್ಕಾರದ ಗೋಧಿ ಸಂಗ್ರಹಣೆಯು ಹಿಂದಿನ ಎರಡು ವರ್ಷಗಳಿಗಿಂತ ಕಡಿಮೆಯಾಗಿದೆ. ಇದುವರೆಗಿನ ದಾಸ್ತಾನು 2019 ರಂತೆಯೇ ಇದೆ. ನಾವು ಏಪ್ರಿಲ್‌ನಲ್ಲಿ 35.8 ಮಿಲಿಯನ್ ಟನ್ನುಗಳಷ್ಟು ದಾಸ್ತಾನು ಹೊಂದಿದ್ದೇವೆ. ಆದ್ದರಿಂದ ಪ್ರಸ್ತುತ ಮಟ್ಟದಲ್ಲಿ ದಾಸ್ತಾನು ಆತಂಕಕಾರಿಯಾಗಿ ಕಂಡುಬರುವುದಿಲ್ಲ.

ಗ್ರಾಹಕರಿಗೆ ಆಹಾರ ಲಭ್ಯತೆ ಮತ್ತು ಸ್ಥಿರ ಆಹಾರ ಬೆಲೆಗಳನ್ನು ಖಚಿತಪಡಿಸಿಕೊಳ್ಳುವುದು ನಿರ್ಣಾಯಕ ಅಂಶವಾಗಿದೆ. ವಾಸ್ತವವಾಗಿ, ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಮೂಲಕ ಗ್ರಾಹಕರಿಗೆ ನೇರವಾಗಿ ಕನಿಷ್ಠ ಪ್ರಮಾಣದ ಆಹಾರವನ್ನು ಒದಗಿಸಲು ಮತ್ತು ಮುಕ್ತ ಮಾರುಕಟ್ಟೆ ಕಾರ್ಯಾಚರಣೆಗಳ ಮೂಲಕ ಆಹಾರ ಬೆಲೆಗಳನ್ನು ನಿಯಂತ್ರಿಸುವಲ್ಲಿ ಭಾರತದಲ್ಲಿನ ಸರ್ಕಾರಗಳು ನಿರ್ಣಾಯಕ ಪಾತ್ರವನ್ನು ವಹಿಸಿವೆ.

ಎರಡು ಕೋವಿಡ್–19 ವರ್ಷಗಳಲ್ಲಿ (2020–21 ಮತ್ತು 2021–22), ಪಡಿತರ ವಿತರಣಾ ವ್ಯವಸ್ಥೆ ಒಂದು ಬಹುದೊಡ್ಡ ಪಾತ್ರವನ್ನು ವಹಿಸಿದೆ (ಮತ್ತು ನವ ಉದಾರವಾದಿ ಅರ್ಥಶಾಸ್ತ್ರಜ್ಞರ ಸಲಹೆಯ ಮೇರೆಗೆ ನಾವು ಅದನ್ನು ಕೆಡವದಿರುವುದು ಒಳ್ಳೆಯದು). ಪಡಿತರ ವಿತರಣೆ ಮತ್ತು ಇತರ ಕಲ್ಯಾಣ ಯೋಜನೆಗಳ ಮೂಲಕ ವಿತರಣೆಯನ್ನು ಒಟ್ಟುಗೂಡಿಸಿ ನೋಡಿದಾಗ 2021–22ರಲ್ಲಿ ಅಕ್ಕಿ ಮತ್ತು ಗೋಧಿಯ ಒಟ್ಟು ವಿತರಣೆ 102.3 ಮಿಲಿಯನ್ ಟನ್‌ಗಳಷ್ಟಿತ್ತು. ಇದರಲ್ಲಿ 49 ಮಿಲಿಯನ್ ಟನ್ ಗೋಧಿ (21.7 ರೇಶನ್ ವ್ಯವಸ್ಥೆಯ ಮೂಲಕ ಮತ್ತು 27.3 ಇತರೆ ಕಲ್ಯಾಣ ಯೋಜನೆಗಳ ಮೂಲಕ). ಇದು ಜಾಗತಿಕ ದಾಖಲೆ ಮಾತ್ರವಲ್ಲ, ಕೋವಿಡ್–19 ಸಾಂಕ್ರಾಮಿಕದ ಸಮಯದಲ್ಲಿ ಜನರನ್ನು ಹಸಿವಿನಿಂದ ಕಾಪಾಡಿತು.

ಆಹಾರ ಬೆಲೆ ಹಣದುಬ್ಬರವನ್ನು ಮಣಿಸಲು ಪಡಿತರ ವಿತರಣೆ ಮತ್ತು ಮುಕ್ತ ಮಾರುಕಟ್ಟೆಯ ಕಾರ್ಯಾಚರಣೆಗಳನ್ನು ಬಳಸುವುದು ಅತ್ಯಗತ್ಯ. ಏಪ್ರಿಲ್ 2022 ಕ್ಕೆ ಅಖಿಲ ಭಾರತ ಮಟ್ಟದಲ್ಲಿ ಗ್ರಾಮೀಣ ಗ್ರಾಹಕ ಬೆಲೆ ಹಣದುಬ್ಬರವು ಶೇಕಡಾ 8.38 ರಷ್ಟಿದ್ದರೆ, ಗ್ರಾಮೀಣ ಆಹಾರ ಬೆಲೆ ಹಣದುಬ್ಬರ ಶೇ.8.5 ರಷ್ಟಿತ್ತು. ಇದು ಹಿಂದಿನ ವರ್ಷದಲ್ಲಿ ದಾಖಲಾದ ಹಣದುಬ್ಬರಕ್ಕಿಂತ ಹೆಚ್ಚು. ಹೆಚ್ಚಿನ ರಾಜ್ಯಗಳು ಹೆಚ್ಚಿನ ಹಣದುಬ್ಬರ ದರವನ್ನು ಹೊಂದಿದ್ದರೆ, ಕೇರಳ ಮತ್ತು ತಮಿಳುನಾಡಿನಂತಹ ಉತ್ತಮ ಪಡಿತರ ವಿತರಣಾ ವ್ಯವಸ್ಥೆ ಹೊಂದಿರುವ ರಾಜ್ಯಗಳು ಕಡಿಮೆ ಹಣದುಬ್ಬರ ದರವನ್ನು ಹೊಂದಿವೆ. ಏಪ್ರಿಲ್ 2022 ರಲ್ಲಿ ಕೇರಳದಲ್ಲಿ ಸಾಮಾನ್ಯ ಗ್ರಾಹಕ ಬೆಲೆ ಹಣದುಬ್ಬರವು ಶೇಕಡಾ 4.82 ರಷ್ಟಿತ್ತು ಮತ್ತು ಇದು ತಮಿಳುನಾಡಿನಲ್ಲಿ ಶೇಕಡಾ 5.64 ರಷ್ಟಿತ್ತು.

ಉತ್ಪಾದನೆಯನ್ನು ಹೆಚ್ಚಿಸಲು ಆಹಾರ ನೀತಿಯ ಪ್ರಮುಖ ದಾರಿಯೆಂದರೆ ರೈತರಿಗೆ ಲಾಭದಾಯಕ ಬೆಲೆಗಳನ್ನು ಒದಗಿಸುವುದು. ಈಗ ತಿಳಿದಿರುವಂತೆ, ರೈತರ ಮೇಲಿನ ರಾಷ್ಟ್ರೀಯ ಆಯೋಗದ ವರದಿಗಳ ಪ್ರಕಾರ, ಗೋಧಿಗೆ ಘೋಷಿಸಲಾದ ಕನಿಷ್ಠ ಬೆಂಬಲ ಬೆಲೆ (MSP) ಅನೇಕ ಪ್ರದೇಶಗಳು ಮತ್ತು ರೈತ ವರ್ಗಗಳಿಗೆ ಕೃಷಿ ವೆಚ್ಚವನ್ನು ಸರಿದೂಗಿಸಲು ಅಸಮರ್ಪಕವಾಗಿದೆ. ವಿಶೇಷವಾಗಿ ಸಮಗ್ರ ವೆಚ್ಚಗಳನ್ನು (ಅಥವಾ ವೆಚ್ಚ C2) ಆಧಾರವಾಗಿ ತೆಗೆದುಕೊಳ್ಳಲಾಗಿದೆ. ಹೊಸ ಕೃಷಿ ಕಾಯಿದೆಗಳು ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ನೀಡುವ ಸಾರ್ವಜನಿಕ ಬದ್ಧತೆಯನ್ನು ದುರ್ಬಲಗೊಳಿಸುತ್ತಿವೆ ಎಂಬ ಕಾರಣಕ್ಕೆ ಕಳೆದ ವರ್ಷಪೂರ್ತಿ ರೈತ ಪ್ರತಿಭಟನೆಗಳು ನಡೆದವು.

ಕಳೆದ ಎರಡು ವರ್ಷಗಳಲ್ಲಿ, ಉತ್ಪಾದನಾ ವೆಚ್ಚಗಳು ತೀವ್ರವಾಗಿ ಏರಿವೆ. ಸತತವಾಗಿ ಏರುತ್ತಿರುವ ಇಂಧನದ ಬೆಲೆಯು ಒಂದು ಪ್ರಮುಖ ಅಂಶವಾಗಿದೆ. ಈ ಸಂದರ್ಭದಲ್ಲಿ, ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಮತ್ತು ಇತರ ರೈತ ಸಂಘಟನೆಗಳು ಈ ವರ್ಷದ ಹೆಚ್ಚಿನ ಉತ್ಪಾದನಾ ವೆಚ್ಚ ಮತ್ತು ಇಳುವರಿ ನಷ್ಟವನ್ನು ಸರಿದೂಗಿಸಲು ಪ್ರಸ್ತುತ ಎಂ.ಎಸ್.ಪಿಯಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ. 500 ಬೋನಸ್ ನೀಡಬೇಕೆಂದು ಒತ್ತಾಯಿಸಿವೆ.

ಖರೀದಿಯಲ್ಲಿ ಸರ್ಕಾರ ನಿರಾಸಕ್ತಿ ತೋರುತ್ತಿರುವ ಕಾರಣ ರೈತರು ಕಂಗಾಲಾಗಿದ್ದಾರೆ. ಈ ವರ್ಷ ಒಟ್ಟು ಆಹಾರ ಧಾನ್ಯದ ಸಂಗ್ರಹಣೆಯಲ್ಲಿ ಗೋಧಿಯ ಪಾಲು ಕುಸಿದಿದೆ. ಸಂಗ್ರಹಣೆ ಬೆಲೆಯನ್ನು ಹೆಚ್ಚಿಸುವ ಮತ್ತು ಹೆಚ್ಚು ಖರೀದಿಸುವ ಮೂಲಕ ಈ ಕೊರತೆಯನ್ನು ನೀಗಿಸುವ ಬದಲು, ಗೋಧಿ ದಾಸ್ತಾನು ಹೆಚ್ಚಿಸಿಕೊಳ್ಳಲು ಸರ್ಕಾರವು ವ್ಯಾಪಾರಿಗಳಿಗೆ ಅವಕಾಶ ಮಾಡಿಕೊಟ್ಟಿದೆ. ಭವಿಷ್ಯದ ಮಾರಾಟದಿಂದ, ದೇಶೀಯ ಅಥವಾ ರಫ್ತು ಮಾರುಕಟ್ಟೆಯಲ್ಲಿನ ಲಾಭವು ರೈತರಿಗಿಂತ ಹೆಚ್ಚಾಗಿ ವ್ಯಾಪಾರಿಗಳಿಗೆ ಹೋಗುವ ಸಾಧ್ಯತೆಯಿದೆ. ಈ ದೃಷ್ಟಿಯಿಂದ ನೋಡಿದಾಗ, ಸರ್ಕಾರ ಖಾಸಗಿಯವರಿಗೆ ಅಂದರೆ ವ್ಯಾಪಾರಿಗಳು ಮತ್ತು ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಒಳ ಕಾರ್ಯಸೂಚಿ ಹೊಂದಿರಬಹುದೆಂಬ ಸಂದೇಹ ಬರುತ್ತದೆ.

ಈ ಸರ್ಕಾರದಲ್ಲಿ ಆಹಾರ ಭದ್ರತೆಯ ಸುಸಂಬದ್ಧ ನೀತಿಯ ಕೊರತೆಯಿದೆ. ಆಹಾರ ಭದ್ರತೆಯು ತಕ್ಷಣದ ಮತ್ತು ದೀರ್ಘಾವಧಿಯ ಕಾಳಜಿಯಾಗಬೇಕಾಗಿದೆ ಮತ್ತು ಇದಕ್ಕೆ "ಸರ್ಜಿಕಲ್ ಸ್ಟ್ರೈಕ್" ಅಗತ್ಯವಿರುವುದಿಲ್ಲ. ಉತ್ತಮವಾಗಿ ಕಾರ್ಯನಿರ್ವಹಿಸುವ ಪಡಿತರ ವಿತರಣಾ ವ್ಯವಸ್ಥೆ ಬೆಲೆಗಳನ್ನು ನಿಯಂತ್ರಿಸುತ್ತದೆ ಮತ್ತು ಗ್ರಾಹಕರಿಗೆ ಪರಿಹಾರವನ್ನು ನೀಡುತ್ತದೆ. ಸರ್ಕಾರವು ಹೆಚ್ಚಿನ ಬೆಲೆಗೆ ಆಹಾರ ಧಾನ್ಯವನ್ನು ಸಂಗ್ರಹಿಸದೆ ವ್ಯಾಪಾರಿಗಳನ್ನು ಬೆಂಬಲಿಸಿ ರೈತರಿಗೆ ಶಿಕ್ಷೆ ವಿಧಿಸಿದೆ ಮತ್ತು ಭವಿಷ್ಯದ ಲಾಭಕ್ಕಾಗಿ ದಾಸ್ತಾನುಗಳನ್ನು ಖರೀದಿಸಲು ಖಾಸಗಿ ವ್ಯಾಪಾರಿಗಳಿಗೆ ಮುಕ್ತ ಅವಕಾಶ ಮಾಡಿಕೊಟ್ಟಿದೆ.

ಅರ್ಥವ್ಯವಸ್ಥೆಯ ಅವಸ್ಥೆ–ಅಗೆಯುವುದು ಅನಿವಾರ್ಯ!

ಅಮೃತ ಕಾಲವಿದು!


2021–22ರ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ ಕೇವಲ 3.5% ಇದ್ದಿರಬಹುದು ಎಂದು ಐಸಿಆರ್‌ಎ ಹೇಳಿರುವುದಾಗಿ ಈ ವಾರ ಸುದ್ದಿ ಬಂದಿದೆ. ಅದರ ಹಿಂದಿನ, ಅಂದರೆ ಮೂರನೇ ತ್ರೈಮಾಸಿಕದಲ್ಲಿ ಇದು 5.4% ಇತ್ತು.

ರಾಷ್ಟ್ರೀಯ ಅಂಕಿ–ಅಂಶಗಳ ಕಚೇರಿ (ಎನ್‌ಎಸ್‌ಒ) ಈ ಹಿಂದೆ ಪ್ರಕಟಿಸಿದ ಅಂದಾಜಿನಲ್ಲಿ ಕಳೆದ ಹಣಕಾಸು ವರ್ಷದ ಈ ಕೊನೆಯ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರ 4.8% ಆಗಬಹುದು ಎಂಬ ನಿರೀಕ್ಷೆಯ ಆಧಾರದಲ್ಲಿ 2021–22ರ ಜಿಡಿಪಿ ಬೆಳವಣಿಗೆ ದರ 8.9% ಎಂದು ಅಂದಾಜು ಮಾಡಿತ್ತು. ಇದೀಗ ಇಳಿಯುವ ಸಾಧ್ಯತೆ ಇದೆ. ಮೇ 31ರಂದು ಎನ್‌ಎಸ್‌ಒ 2021–22ರ ರಾಷ್ಟ್ರೀಯ ಆದಾಯದ ಅಂಕಿ–ಅಂಶಗಳನ್ನು ಬಿಡುಗಡೆ ಮಾಡುವ ನಿರೀಕ್ಷೆ ಇದೆ.

ಬೆಳವಣಿಗೆ ದರ ನಿರೀಕ್ಷೆಗಿಂತ ಕೆಳಗಿಳಿಯಲು ಕಾರಣ ಸರಕುಗಳ ಬೆಲೆಗಳಲ್ಲಿ ಹೆಚ್ಚಳ, ಗೋದಿ ಇಳುವರಿಯಲ್ಲಿ ಇಳಿಕೆ ಮತ್ತು ಕೊವಿಡ್–19ರ ಮೂರನೇ ಅಲೆಯಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ಕಾಂಟ್ರಾಕ್ಟ್ ವಯವಸ್ಥೆಯಿರುವ ಸೇವಾವಲಯದ ಚೇತರಿಕೆಯಲ್ಲಿ ಉಂಟಾದ ತೊಡಕು ಕಾರಣ ಇರಬಹುದು ಎಂದು ಐಸಿಆರ್‌ಎ ಹೇಳಿದೆ.

ಉತ್ತರ ಭಾರತದಲ್ಲಿ ಬಿಸಿ ಅಲೆ ಮಾರ್ಚ್ 2022ರಲ್ಲಿ ಗೋದಿ ಇಳುವರಿಯನ್ನು ಬಹಳವಾಗಿ ತಟ್ಟಿದ್ದರಿಂದ ಕೃಷಿ ಮತ್ತು ಕೈಗಾರಿಕೆ ಎರಡೂ ವಲಯಗಳಲ್ಲಿ ನಿವ್ವಳ ಮೌಲ್ಯಸೇರ್ಪಡೆ(ಜಿವಿಎ) 1%ಕ್ಕಿಂತಲೂ ಕಡಿಮೆಯಿರಬಹುದು ಎಂಬುದು ಅದರ ಅಂದಾಜು. ಮೂರನೇ ತರ್ೖಮಾಸಿಕದಲ್ಲಿ ಸೇವಾ ವಲಯ 8.2% ಜಿವಿಎ ದಾಖಲಿಸಿದ್ದರೆ, ಕೈಗಾರಿಕೆ 0.2% ಮತ್ತು ಕೃಷಿ 2.6% ಜಿವಿಎ ದಾಖಲಿಸಿತ್ತು.

2022–23ರಲ್ಲಿ ಚಿಲ್ಲರೆ ಹಣದುಬ್ಬರ ದರ 6.5% ಇರುವ ಸಾಧ್ಯತೆ ಇದೆ ಎಂದೂ ಐಸಿಆರ್‌ಎ ಹೇಳಿದೆ.



ಇದಕ್ಕೆ ಮೊದಲು ಸಗಟು ಬೆಲೆಗಳನ್ನು ಆಧರಿಸಿದ ಹಣದುಬ್ಬರ ದರ ಎಪ್ರಿಲ್‌ನಲ್ಲಿ 15.08% ತಲುಪಿದೆ ಮತ್ತು ಡಾಲರಿಗೆ ಎದುರಾಗಿ ರೂಪಾಯಿ ಮೌಲ್ಯ 77.79ಕ್ಕೆ ಇಳಿದು ಅದು ಕೂಡ ಹೊಸ ದಾಖಲೆಯನ್ನೇ ಸ್ಥಾಪಿಸಿದೆ ಎಂದು ವರದಿಯಾಗಿತ್ತು. ಜನವರಿ 2020ರಲ್ಲಿ 3.52% ಇದ್ದ ಸಗಟು ಹಣದುಬ್ಬರ ದರ ಕಳೆದ 13 ವಾರಗಳಿಂದ ಸತತವಾಗಿ ಎರಡಂಕಿಗಳಲ್ಲೇ ಇದೆ ಎಂಬುದನ್ನೂ ಗಮನಿಸಬಹುದು.

ದೇಶದ ಆರ್ಥಿಕ ಪರಿಸ್ಥಿತಿ ಹೀಗೆ ಪಾತಾಳಕ್ಕೆ ಇಳಿದಿರುವಾಗ, ಅದನ್ನು ಮೇಲೆತ್ತುವ ಬಗ್ಗೆ ಕಾಳಜಿ ವಹಿಸುವ ಬದಲು, ಅಮೃತ ಕಾಲದ ಸರಕಾರದ ಮತ್ತು ಆಳುವ ಪಕ್ಷದ ಮುಖಂಡರುಗಳು ಧಾರ್ಮಿಕ ಸ್ಥಳಗಳನ್ನು ಅಗೆಯುತ್ತಿದ್ದಾರೆ, ಈ ಮೂಲಕ ಜನಗಳ ಗಮನವನ್ನು ಅವರ ಜೀವ–ಜೀವನದ ಗಹನ ಪ್ರಶ್ನೆಗಳಿಂದ ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಆರೋಪದಲ್ಲಿ ಬಹಳಷ್ಟು ಹುರುಳಿದೆ ಎನ್ನಿಸದಿರದು.



ಪೆಟ್ರೋಲ್–ಡೀಸೆಲ್ ಸುಂಕಗಳನ್ನು ಇಳಿಸಿರುವುದು ಅರ್ಧದಷ್ಟು ಮಾತ್ರ

ಕೇಂದ್ರ ಸರಕಾರ ದೇಶವ್ಯಾಪಿ ಪ್ರತಿಭಟನೆಗಳ ಒತ್ತಡದಿಂದ ಕೊನೆಗೂ ವಿಪರೀತ ಹಣದುಬ್ಬರಕ್ಕೆ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಮುಂತಾದವುಗಳ ಬೆಲೆ ಏರಿಕೆ ಕಾರಣ, ಅವುಗಳ ಬೆಲೆಯೇರಿಕೆಗಳಿಗೆ ತಾನು ಹೆಚ್ಚಿಸಿರುವ ಅಬಕಾರಿ ಸುಂಕಗಳು ಕಾರಣ ಎಂದು ಒಪ್ಪಿಕೊಳ್ಳುತ್ತಿರುವಂತೆ ಕಾಣುತ್ತಿದೆ. ಮೇ 21ರಂದು ಪೆಟ್ರೋಲಿನ ಮೇಲಿನ ಅಬಕಾರಿ ಸುಂಕದಲ್ಲಿ ಲೀಟರಿಗೆ ರೂ.8 ಮತ್ತು ಡೀಸೆಲ್ ಮೇಲಿನದರಲ್ಲಿ ರೂ.6 ಕಡಿತ ಮಾಡಿದೆ. ರಾಜ್ಯ ಸರಕಾರಗಳೂ ತಮ್ಮ ತೆರಿಗೆಗಳನ್ನು ಇಳಿಸಬೇಕು ಎಂದು ಹಣಕಾಸು ಮಂತ್ರಿಗಳು ಹೇಳಿದ್ದಾರೆ.



ಮೋದಿ ಸರಕಾರ 12 ಕಂತುಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಸುಂಕಗಳನ್ನು ಅನುಕ್ರಮವಾಗಿ ಲೀಟರಿಗೆ ರೂ.26.77 ಮತ್ತು ರೂ.31.47 ರಂತೆ ಏರಿಸಿದೆ. ಇದರಲ್ಲಿ, ಈ ಬಾರಿಯ ಇಳಿಕೆಯೂ ಸೇರಿದಂತೆ ಅನುಕ್ರಮವಾಗಿ ರೂ. 14.50 ಮತ್ತು ರೂ21.00 ಮಾತ್ರ ಹಿಂತೆಗೆದುಕೊಂಡಿದೆ. ಉಳಿದ ರೂ. 12.77(ಪೆಟ್ರೋಲ್) ಮತ್ತು ರೂ.10.47(ಡೀಸೆಲ್) ಮೇಲಿನ ಏರಿಕೆಯನ್ನೂ ಹಿಂತೆಗೆದುಕೊಳ್ಳಲಿ. ಆಮೇಲೆ ರಾಜ್ಯ ಸರಕಾರಗಳಿಗೆ ಉಪದೇಶ ನೀಡಲಿ ಎಂದು ಕೇರಳದ ಮಾಜಿ ಹಂಕಾಸು ಸಚಿವ ಪ್ರೊ.ಥಾಮಸ್ ಐಸಾಕ್ ಹೇಳಿದ್ದಾರೆ.

ಈ ಬಾರಿಯ ಕಡಿತದಿಂದ ಸರಕಾರ 1 ಲಕ್ಷ ಕೋಟಿ ರೂ. ಆದಾಯವನ್ನು 'ಬಿಟ್ಟುಕೊಟ್ಟಂತಾಗಿದೆ'ಎಂದೂ ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಆದರೆ ಕಳೆದ ಮೂರು ವರ್ಷಗಳಲ್ಲಿ, ಅದೂ ಕೊವಿಡ್‌ನ ದುರಿತ ಕಾಲದಲ್ಲೂ ಸರಕಾರ ಇದೇ ಬಾಬ್ತು 8 ಲಕ್ಷ ಕೋಟಿ ರೂ. ಆದಾಯ ಗಳಿಸಿಕೊಂಡಿತ್ತು ಎಂಬುದನ್ನು ಜನ ಮರೆಯಲು ಸಾಧ್ಯವೇ? ಅದೇನೇ ಇರಲಿ, ಮತ್ತೆ **'ವಾಹ್ ಮೋದೀಜೀ ವಾಹ್'** ಮೊಳಗಲಿದೆಯೇ?

ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

"ಮನೆಗೆ ಹೋಗಿ ಅಡುಗೆ ಮಾಡಿ"

ಎನ್‌ಸಿಪಿ ಸಂಸತ್ ಸದಸ್ಯೆಗೆ ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷರ 'ಹಿತನುಡಿ'!

"ನೀವು ರಾಜಕೀಯದಲ್ಲೂ ಯಾಕಿದ್ದೀರಿ? ಮನೆಗೆ ಹೋಗಿ ಬಿಟ್ಟು ಅಡುಗೆ ಮಾಡಿ"– ಹೀಗೆಂದು ಮಹಾರಾಷ್ಟ್ರದ ಬಿಜೆಪಿ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್ ಎನ್‌ಸಿಪಿಯ ಲೋಕಸಭಾ ಸದಸ್ಯೆ ಸುಪ್ರಿಯಾ ಸುಳೆಯವರಿಗೆ ಸಲಹೆ ನೀಡಿದ್ದಾರೆ ಎಂದು ವರದಿಯಾಗಿದೆ.

ಮುಂಬೈಯಲ್ಲಿ ಚುನಾವಣೆಗಳಲ್ಲಿ ಒಬಿಸಿ ಕೋಟಾ ಆಗ್ರಹಿಸಿ ಬಿಜೆಪಿಯ ಪ್ರತಿಭಟನೆಯ ಸಂದರ್ಭದಲ್ಲಿ ಅವರು ಹೀಗೆ ಹೇಳಿದುದಾಗಿ ವರದಿಯಾಗಿದೆ.

"ನೀವು ಮನುಸ್ಮೃತಿಯನ್ನು ನಂಬುವವರು ಎಂದು ನಮಗೆ ಗೊತ್ತಿದೆ. ಆದರೆ ನಾವಿನ್ನು ಸುಮ್ಮನಿರಲಾರೆವು. ಅವರು ಮನೆಯಲ್ಲಿ ಹೆಂಡತಿಗೆ ಸಹಾಯ ಮಾಡಲು ಚಪಾತಿ ಮಾಡುವುದನ್ನು ಕಲಿಯಲಿ"– ಇದು ಎನ್‌ಸಿಪಿಯ ಮಹಿಳಾ ವಿಭಾಗದ ಅಧ್ಯಕ್ಷೆ ವಿದ್ಯಾ ಚವಾಣ್ ಬಿಜೆಪಿಯ ಮಹಾರಾಷ್ಟ್ರ ಅಧ್ಯಕ್ಷರ 'ಹಿತನುಡಿ'ಗೆ ನೀಡಿದ ಪ್ರತಿಕ್ರಿಯೆ.

ಈ ಚಂದ್ರಕಾಂತ್ ಪಾಟೀಲ್ ಕೊಲ್ಹಾಪುರದವರಾಗಿದ್ದು 2019ರಲ್ಲಿ ಪುಣೆಯ ಒಂದು ಕ್ಷೇತ್ರದಿಂದ ಸ್ಪರ್ಧಿಸಲಿಕ್ಕಾಗಿ ಅಲ್ಲಿನ ಬಿಜೆಪಿ ಶಾಸಕಿ ಮೇಧಾ ಕುಲಕರ್ಣಿಯವರಿಗೆ ಆ ಸೀಟನ್ನು ನಿರಾಕರಿಸಲಾಗಿತ್ತು ಎಂಬ ಸಂಗತಿಯ ಹಿನ್ನೆಲೆಯಲ್ಲಿ "ಒಬ್ಬ ಹಾಲಿ ಶಾಸಕಿಗೆ ಟಿಕೆಟ್ ನಿರಾಕರಿಸಿ ಆಕೆಯ ಕ್ಷೇತ್ರದಿಂದ ಸ್ಪರ್ಧಿಸಿದ ವ್ಯಕ್ತಿ ಸಂಸದ್ ರತ್ನ ಎಂಬ ಗೌರವ ಪಡೆದ ಸಂಸತ್ ಸದಸ್ಯೆಯ ಬಗ್ಗೆ ಹೊಲಸು ಮಾತು ಬಳಸುತ್ತಾರೆ" ಎಂದು ಅವರು ಟಿಪ್ಪಣಿ ಮಾಡಿರುವುದಾಗಿ ವರದಿಯಾಗಿದೆ.

'ಸ್ವಚ್ಛ ಭಾರತ್' ವಾಟ್ಸ್‌ಆಪ್ ಗುಂಪಿನಲ್ಲಿ ವೈರಲ್ ಆದ 'ಶಂಕಿತ ಮುಸ್ಲಿಮ'ನ ಸಾವು!

ದೇಶ ಸ್ವತಂತ್ರವಾಗಿ 75 ವರ್ಷವಾಗುತ್ತಿರುವ ಅಮೃತ ಕಾಲದಲ್ಲಿ 'ಶಂಕಿತ ಅಪರಾಧಿ', 'ಶಂಕಿತ ಉಗ್ರಗಾಮಿ' 'ಶಂಕಿತ ಭಯೋತ್ಪಾದಕ' ಎಂಬ ಪದಗಳ ನಂತರ 'ಶಂಕಿತ ಮುಸ್ಲಿಮ್' ಎಂಬ ಪದವೂ ಸೃಷ್ಟಿಯಾಗಿದೆಯೇ? ಮಧ್ಯಪ್ರದೇಶದಿಂದ ವರದಿಯಾಗಿರುವ ಒಂದು ಘಟನೆಯ ಸುದ್ದಿ ಕೇಳಿದರೆ ಅನುಮಾನ ಉಳಿಯದು.

ಒಬ್ಬ 65 ವರ್ಷದ ಜೈನ ವ್ಯಕ್ತಿಯನ್ನು 'ಶಂಕಿತ ಮುಸ್ಲಿಮ'ನೆಂದು ಹೊಡೆದು ಸಾಯಿಸಿದ ಆಘಾತಕಾರಿ ಘಟನೆಯದು.(ಎಕ್ಸ್‌ಪ್ರೆಸ್ ನ್ಯೂಸ್ ಸರ್ವಿಸ್, ಮೇ21).

ಮೇ 19ರಂದು ನೀಮುಚ್ ಜಿಲ್ಲೆಯ ರಾಂಪುರ ರಸ್ತೆಯಲ್ಲಿ ಒಬ್ಬ ವ್ಯಕ್ತಿಯ ಹೆಣ ಕಾಣಸಿಕ್ಕಿತು. ಪಕ್ಕದ ಜಿಲ್ಲೆ ರತ್ಲಾಂನ ಒಂದು ಹಳ್ಳಿಯ ನಿವಾಸಿಯಾಗಿದ್ದ ಭಂವರ್‌ಲಾಲ್ ಜೈನ್ ಎಂಬವರ ಹೆಣ ಅದು ಎಂದು ಆಮೇಲೆ ಗುರುತಿಸಲ್ಪಟ್ಟಿತು. ಮಾನಸಿಕ ಆರೋಗ್ಯದ ಸಮಸ್ಯೆಯಿದ್ದ ಭಂವರ್‌ಲಾಲ್ ಜೈನ್ ಪಕ್ಕದ ರಾಜಸ್ಥಾನ ರಾಜ್ಯದ ಚಿತ್ತೋಡ್‌ಗಡದ ಒಂದು ದೇವಸ್ಥಾನಕ್ಕೆ ಹೋಗಿದ್ದು ಮೇ 16ರಿಂದ ಕಾಣೆಯಾಗಿದ್ದರಂತೆ.

ಮೂರು ದಿನಗಳ ನಂತರ ಪಕ್ಕದ ರಾಂಪುರ ರಸ್ತೆಯಲ್ಲಿ ಅವರ ಹೆಣ ಪೋಲೀಸರಿಗೆ ಸಿಕ್ಕಿತು. ಅವರು ಅದರ ಫೋಟೋವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕಿದಾಗ, ಜೈನ್‌ರವರ ಸಂಬಂಧಿಕರು ಅಲ್ಲಿಗೆ ಧಾವಿಸಿ ಬಂದರು.

ಮರುದಿನವೇ ದಿನೇಶ್ ಖುಶ್‌ವಾಹ ಎಂಬಾತ ಹಾಕಿದ್ದ ವೀಡಿಯೋವೊಂದು ಅಲ್ಲಿ ವೈರಲ್ ಆಯಿತು. ಅದು ಅದೇ ಭಂವರ್‌ಲಾಲ್‌ರನ್ನು ನಿರ್ದಯವಾಗಿ ಥಳಿಸುತ್ತಿದ್ದ ಆಘಾತಕಾರಿ ವೀಡಿಯೋ! ಈತ ಸ್ಥಳೀಯ ಬಿಜೆಪಿ ಮುಖಂಡ ಎಂದು ಹೇಳಲಾಗಿದೆ.

ಅದರಲ್ಲಿ ಆತ 'ನಿನ್ನ ಹೆಸರು ಮೊಹಮ್ಮದ್ ಅಲ್ಲವೇ' ಎನ್ನುತ್ತ ಭಂವರ್‌ಲಾಲರನ್ನು ಥಳಿಸುತ್ತಿದ್ದರೆ, ಭಂವರ್‌ಲಾಲ್ 'ಜಾವ್ರ' ಎಂದು ಹೇಳುತ್ತಿರುವುದು ಕೇಳಿಸುತ್ತದೆ. ಅಂದರೆ ಪಕ್ಕದ ರತ್ಲಾಂ ಜಿಲ್ಲೆಯ ಜಾವ್ರದವನು ಎಂದು ಹೇಳುತ್ತಿರಬೇಕು ಎನ್ನುತ್ತಾರೆ ಪೋಲೀಸರು. ಅದನ್ನು ಕೇಳಿ ಮತ್ತೆ ಥಳಿಸುತ್ತ ಆ ಮುಖಂಡ ಆತನ ಆಧಾರ್ ಕಾರ್ಡ್ ಕೇಳುತ್ತಾನೆ.

ಈ ವೀಡಿಯೋ ನೋಡಿದ ಭಂವರ್‌ಲಾಲ್ ಸಂಬಂಧಿಕರು ಇಂತಹ ಹೊಡೆತಗಳಿಂದಾಗಿಯೇ ಈ ಹಿರಿವಯಸ್ಸಿನ ವ್ಯಕ್ತಿಯ ಸಾವು ಉಂಟಾಗಿದೆ ಎಂದು ಆರೋಪಿಸಿದಾಗ ದಿನೇಶ್ ಖುಶ್ವಾಹ ವಿರುದ್ಧ ಐಪಿಸಿ 302 ಮತ್ತು 304(2) ಅಡಿಯಲ್ಲಿ ಪ್ರಕರಣ ದಾಖಲಿಸಲಾಯಿತು.


ಈ ವೀಡಿಯೋವನ್ನು ಸ್ವತಃ ಆರೋಪಿಯೇ 'ಸ್ವಚ್ಛ್ ಭಾರತ್'(!) ಎಂಬ ವಾಟ್ಸ್‌ಆಪ್ ಗುಂಪಿನಲ್ಲಿ ಹಾಕಿದ್ದನಂತೆ, ನಂತರ ಅದು ಇತರ ಗುಂಪುಗಳಲ್ಲಿಯೂ ವೈರಲ್ ಆಯ್ತಂತೆ. ಇನ್ನೂ ಒಂದು ಸಂಗತಿಯೆಂದರೆ, ಭಂವರ್‌ಲಾಲ್ ಜೈನ್ ರವರ ಒಬ್ಬ ಸೋದರ ಕೂಡ ಬಿಜೆಪಿಯೊಂದಿಗೆ ಸಂಪರ್ಕ ಇರುವವರು ಎನ್ನಲಾಗಿದೆ.

ಉನ್ನತ ಮುಖಂಡರ ದಿವ್ಯಮೌನದ ನಡುವೆ ದ್ವೇಷ ಪ್ರಚಾರ ದಿನೇದಿನೇ ಚಿತ್ರ–ವಿಚಿತ್ರವಾದ ಹೆಚ್ಚೆಚ್ಚು ಅಮಾನವೀಯಗೊಳ್ಳುತ್ತಿರುವ ಸ್ವರೂಪಗಳನ್ನು ಪಡೆಯುತ್ತಿರುವಂತೆ ಕಾಣುತ್ತಿದೆ.

ಜಾಗತೀಕರಣದಲ್ಲಿ ಬಂಡವಾಳದ ಮತ್ತು ಕಾರ್ಮಿಕರ ಸ್ಥಳಾಂತರ

ಕಡಿಮೆ ಕೂಲಿಯ ಹುಚ್ಚು ಬಂಡವಾಳಶಾಹಿ ಅನ್ವೇಷಣೆಯಿಂದ ಮತ್ತಷ್ಟು ಬಿಕ್ಕಟ್ಟು

ಸಮಕಾಲೀನ ಜಾಗತೀಕರಣಕ್ಕೆ ಸಂಬಂಧಿಸಿದ ಅವಳಿ ವಿದ್ಯಮಾನಗಳು–ಮುಂದುವರೆದ ದೇಶಗಳಿಂದ ಮೂರನೇ ಜಗತ್ತಿನ ದೇಶಗಳಿಗೆ ಬಂಡವಾಳದ ವಲಸೆ ಮತ್ತು ಹಿಂದಿನ ಎರಡನೇ ಜಗತ್ತಿನ ದೇಶಗಳಿಂದ ಮುಂದುವರೆದ ದೇಶಗಳಿಗೆ ಕಾರ್ಮಿಕರ ವಲಸೆ – ಇವು ಎಲ್ಲೆಡೆ ಕಾರ್ಮಿಕ ವರ್ಗದ ಚಳುವಳಿಯನ್ನು ಮತ್ತು ವಲಸೆ ಕಾರ್ಮಿಕರ ಸ್ಥಾನ–ಮಾನವನ್ನು ದುರ್ಬಲಗೊಳಿಸುತ್ತವೆ. ಇದರಿಂದಾಗಿ ವಿಶ್ವ ಮಟ್ಟದಲ್ಲಿ ವರ್ಗ ಅಧಿಕಾರ–ಶಕ್ತಿಯು ದುಡಿಯುವ ವರ್ಗದಿಂದ ಬಂಡವಾಳಶಾಹಿಗಳ ಪರವಾಗಿ ವಾಲಿದೆ. ಇನ್ನೊಂದೆಡೆಯಲ್ಲಿ ಈ ವಿದ್ಯಮಾನ ಬಂಡವಾಳಶಾಹಿಯನ್ನು ಆವರಿಸಿರುವ ಬಿಕ್ಕಟ್ಟನ್ನು ಕೂಡ ಆಳಗೊಳಿಸುತ್ತದೆ. ಸಮಕಾಲೀನ ಬಂಡವಾಳಶಾಹಿಯ ಒಂದು ವಿಪರ್ಯಾಸವೆಂದರೆ, ಕಡಿಮೆ ಕೂಲಿಯ ಹುಚ್ಚು ಅನ್ವೇಷಣೆಯು ಬಂಡವಾಳಶಾಹಿ ವ್ಯವಸ್ಥೆಯನ್ನು ದೀರ್ಘಕಾಲೀನ ಬಿಕ್ಕಟ್ಟಿಗೆ ತಳ್ಳಿದೆ.



ಪ್ರೊ. ಪ್ರಭಾತ್ ಪಟ್ನಾಯಕ್ ಅನು: **ಕೆ.ಎಂ. ನಾಗರಾಜ್**



ಜಾಗತೀಕರಣದ ಇಂದಿನ ದಿನಮಾನಗಳಲ್ಲಿ ಬಂಡವಾಳವು ಉತ್ತರ ಗೋಳಾರ್ಧದ ಮುಂದುವರಿದ ಬಂಡವಾಳಶಾಹಿ ದೇಶಗಳಿಂದ ಕಡಿಮೆ ಕೂಲಿಯ ದಕ್ಷಿಣ ಗೋಳಾರ್ಧದ ದೇಶಗಳಿಗೆ ಹರಿಯುತ್ತಿರುವ ಸಂಗತಿಯು ಎಲ್ಲರ ಗಮನ ಸೆಳೆದಿದೆ. ಆದರೆ, ಇದಕ್ಕೆ ಹೋಲಿಸಿದರೆ, ಪೂರ್ವ ಯೂರೋಪಿನ ಕೆಲವು ಕಡಿಮೆ–ಕೂಲಿಯ ದೇಶಗಳಿಂದ ಕೆಲಸಗಾರರು ಮುಂದುವರಿದ ಬಂಡವಾಳಶಾಹಿ ದೇಶಗಳಿಗೆ ವಲಸೆ ಹೋಗುವ ಸಂಗತಿಯು, ಅಷ್ಟಾಗಿ ಗಮನ ಸೆಳೆದಿಲ್ಲ. ಐರೋಪ್ಯ ಒಕ್ಕೂಟದ ದೇಶಗಳ ನಡುವೆ ಕಾರ್ಮಿಕರು ಮುಕ್ತವಾಗಿ ವಲಸೆ ಹೋಗಬಹುದಾದ ಅವಕಾಶವನ್ನು ಹೊಂದಿರುವುದರಿಂದ, ಪೂರ್ವ ಯುರೋಪಿನ ದೇಶಗಳು ಐರೋಪ್ಯ ಒಕ್ಕೂಟವನ್ನು ಸೇರಲು ಹಾತೊರೆಯುತ್ತವೆ. ಕಾರ್ಮಿಕರನ್ನು ರಫ್ತು ಮಾಡುವ ಈ ವಿದ್ಯಮಾನಕ್ಕೆ ಪ್ರೇರಣೆ ಒದಗಿಸುವ ಕೆಲವು ಅಂಶಗಳನ್ನು ಈ ದೇಶಗಳಲ್ಲಿ ಗುರುತಿಸಬಹುದು: ಜನಸಂಖ್ಯೆ ಇಳಿಯುತ್ತಿದೆ; ದುಡಿಯುವ ವಯೋಮಾನದ ಸಮರ್ಥ–ಪುರುಷರ ಸ್ಥಾನದಲ್ಲಿ ಮಹಿಳೆಯರು, ಮಕ್ಕಳು ಮತ್ತು ವೃದ್ಧರೂ ದುಡಿಯಬೇಕಾಗಿರುವ ಪರಿಸ್ಥಿತಿಯಿಂದಾಗಿ ಈ ದೇಶಗಳ ಜನಸಂಖ್ಯೆಯ ಸಂರಚನೆಯೇ ಬದಲಾಗಿದೆ; ಮತ್ತು, ಉತ್ಪಾದನೆಯ ಸ್ಥಾನದಲ್ಲಿ ಹಣದ ರವಾನೆ– ಸ್ವೀಕರಿಸುವುದೇ ಅರ್ಥವ್ಯವಸ್ಥೆಯ ಪ್ರಧಾನ ಚಟುವಟಿಕೆಯಾಗಿದೆ. ಸೋವಿಯತ್ ಒಕ್ಕೂಟದ ಪತನದ ನಂತರ ಅದರ ಪಶ್ಚಿಮಕ್ಕಿರುವ ದೇಶಗಳ ಜನಸಂಖ್ಯೆಯು ಇಳಿಯುತ್ತಿರುವ ಒಂದು ಪ್ರವೃತ್ತಿಯನ್ನು ಕಾಣಬಹುದು.



ಕಳೆದ ದಶಕದಲ್ಲಿ ಬಲ್ಗೇರಿಯಾದ ಜನಸಂಖ್ಯೆಯು 7.3 ಮಿಲಿಯನ್‌ನಿಂದ 6.5 ಮಿಲಿಯನ್‌ಗೆ (11.5%) ಇಳಿದಿದೆ. 1990 ರಲ್ಲಿ 23.2 ಮಿಲಿಯನ್ ಜನಸಂಖ್ಯೆ ಹೊಂದಿದ್ದ ರೊಮೇನಿಯಾದಲ್ಲಿ 2019ರ ವೇಳೆಗೆ 19.4 ಮಿಲಿಯನ್‌ಗೆ (ಅಂದರೆ, 3.8 ಮಿಲಿಯನ್ ಅಥವಾ 16.4%) ಇಳಿದಿದೆ. 2000ದ ಇಸವಿಯಲ್ಲಿ 2.38 ಮಿಲಿಯನ್ ಜನಸಂಖ್ಯೆಯನ್ನು ಹೊಂದಿದ್ದ ಲಾಟ್ವಿಯಾದಲ್ಲಿ 2022ರ ಆರಂಭದ ವೇಳೆಗೆ 18.2%ರಷ್ಟು ಕುಸಿತ ಕಂಡು 1.95 ಮಿಲಿಯನ್‌ಗೆ ಇಳಿದಿತ್ತು. ಲಿಥುವೇನಿಯಾ ಮತ್ತು ಜಾರ್ಜಿಯಾದಲ್ಲಿ ಜನಸಂಖ್ಯೆಯ ಕುಸಿತವು ಈ ಅವಧಿಯಲ್ಲಿ ಸುಮಾರು ಸರಾಸರಿಯಾಗಿ ಇದೇ ಪ್ರಮಾಣದಲ್ಲಿದೆ. ಉಕ್ರೇನ್ ಈಗ ಮತ್ತು 2050ರ ನಡುವೆ ತನ್ನ ಜನಸಂಖ್ಯೆಯ ಐದನೇ ಒಂದು ಭಾಗವನ್ನು ಕಳೆದುಕೊಳ್ಳುತ್ತದೆ ಎಂದು ಅಂದಾಜಿಸಲಾಗಿದೆ.

ಜನಸಂಖ್ಯೆಯ ಈ ರೀತಿಯ ಇಳಿಕೆಯು ಹಿಂದಿನ ಸೋವಿಯತ್ ಗಣರಾಜ್ಯಗಳಿಗೆ ಮಾತ್ರ ಸೀಮಿತವಾಗಿಲ್ಲ. 1990ರ ಹಿಂದೆ ಯುಗೊಸ್ಲಾವಿಯಾದ ಭಾಗವಾಗಿದ್ದ ಮತ್ತು ಇಂದು ಸ್ವತಂತ್ರವಾಗಿರುವ ದೇಶಗಳನ್ನೂ ಸಹ, ಈ ಸಮಸ್ಯೆ ಕಾಡುತ್ತಿದೆ. ಯುಗೊಸ್ಲಾವಿಯಾದ ವಿಭಜನೆಯ ನಂತರ, ಬೋಸ್ನಿಯಾ ಮತ್ತು ಹರ್ಜೆಗೊವಿನಾ ದೇಶಗಳು ತಮ್ಮ ಜನಸಂಖ್ಯೆಯ 24%, ಸರ್ಬಿಯಾ 9% ಮತ್ತು ಕ್ರೊಯೇಷಿಯಾ 15% ಜನರನ್ನು ಕಳೆದುಕೊಂಡಿವೆ. ಈ ರೀತಿಯ ಕುಸಿತಗಳು ಅಲ್ಬೇನಿಯಾ ಮತ್ತು ಮಾಲ್ಡೋವಾ ದೇಶಗಳಲ್ಲೂ ಸಂಭವಿಸಿವೆ. ಜನಸಂಖ್ಯಾ ಕುಸಿತದ ದೃಷ್ಟಿಯಿಂದ ಒಂದು ವಾಸ್ತವಾಂಶವಾಗಿ ಹೇಳುವುದಾದರೆ, ಕುಸಿತದ ಪಟ್ಟಿಯಲ್ಲಿರುವ ಅಗ್ರ 10 ದೇಶಗಳು ಮಧ್ಯ ಮತ್ತು ಪೂರ್ವ ಯುರೋಪ್‌ನಲ್ಲಿವೆ. ಈ 10 ದೇಶಗಳ ಪೈಕಿ ಏಳು ದೇಶಗಳನ್ನು ಐರೋಪ್ಯ ಒಕ್ಕೂಟಕ್ಕೆ ಸೇರಿಸಿಕೊಳ್ಳಲಾಗಿದೆ. ಹಾಗಾಗಿ, ಜನಸಂಖ್ಯೆಯ ಕುಸಿತದ ಪ್ರಮುಖ ಕಾರಣವೆಂದರೆ, ಜನರು ಪಶ್ಚಿಮ ದೇಶಗಳಿಗೆ ವಲಸೆ ಹೋಗಿರುವುದೇ ಆಗಿದೆ.

ಸ್ಥಳಾಂತರ ಇದೇ ಮೊದಲನೆಯದಲ್ಲ

ಬಂಡವಾಳಶಾಹಿಯು ಹೊಂದಿರುವ ಪ್ರಬಾವ ವ್ಯಾಪ್ತಿಯೊಳಗೆ ಬಂಡವಾಳ ಮತ್ತು ಶ್ರಮ ಶಕ್ತಿ ಸ್ಥಳಾಂತರಗೊಂಡಿರುವುದು ಇದೇ ಮೊದಲನೆಯದಲ್ಲ. ಬಂಡವಾಳಶಾಹಿ ಬೆಳವಣಿಗೆಯ ಪ್ರತಿ ಹಂತದಲ್ಲೂ ಬಂಡವಾಳ ಮತ್ತು ಶ್ರಮ ಶಕ್ತಿ ಸ್ಥಳಾಂತರಗೊಂಡಿವೆ. ಈ ಸ್ಥಳಾಂತರದ ಮಾದರಿಗಳು ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆಯಾಗಿದ್ದವು ಅಷ್ಟೇ. ಹತ್ತೊಂಬತ್ತನೇ ಶತಮಾನದ ಮಧ್ಯಭಾಗಕ್ಕೂ ಮೊದಲಿನ ಅವಧಿಯಲ್ಲಿ, ಅಟ್ಲಾಂಟಿಕ್ ಸಾಗರದ ಉದ್ದಕ್ಕೂ ನಡೆದ ಕಾರ್ಮಿಕರ ಸ್ಥಳಾಂತರವು ಬಲವಂತ ಮತ್ತು ಕ್ರೌರ್ಯದಿಂದ ಕೂಡಿದ ಗುಲಾಮರ ವ್ಯಾಪಾರವೇ ಆಗಿತ್ತು. ಅಲ್ಲಿಂದ ಹಿಡಿದು ಮೊದಲನೆಯ ಮಹಾ ಯುದ್ಧದವರೆಗಿನ ಅವಧಿಯಲ್ಲಿ ನಡೆದ ಬಂಡವಾಳದ ಚಲನೆಯು, ಬಂಡವಾಳಶಾಹಿಯ ಬೃಹತ್ ಹರಡುವಿಕೆಗೆ ಕಾರಣವಾದ "ಹೊಸ ಜಗತ್ತಿ"ನಲ್ಲಿ ಸಂಭವಿಸಿದ ಯುರೋಪಿಯನ್ ಹೂಡಿಕೆಯ ರೂಪವನ್ನು ಪಡೆಯಿತು. ಈ ಹೂಡಿಕೆಯ ಹಣವನ್ನು ಯೂರೋಪಿಯನ್ ದೇಶಗಳು ತಮ್ಮ ತಮ್ಮ ವಸಾಹತುಗಳಲ್ಲಿನ ಸಂಪತ್ತನ್ನು ಬರಿದು ಮಾಡುವ ಮೂಲಕ ಹೊಂದಿಸಿಕೊಂಡಿದ್ದವು. ಆದರೆ, ಇದೇ ಅವಧಿಯಲ್ಲಿ ನಡೆದ ಕಾರ್ಮಿಕರ ಸ್ಥಳಾಂತರವು ಎರಡು ವಿಭಿನ್ನ ರೂಪದ್ದಾಗಿತ್ತು. ಬಂಡವಾಳದ ವಲಸೆಗೆ ಪೂರಕವಾಗಿ ಯೂರೋಪಿನ ಕಾರ್ಮಿಕರು ಒಂದು ಹೊಸ ಜಗತ್ತಿಗೆ (ಅಂದರೆ, ಬಿಳಿಯರ ವಸಾಹತುವಿನ ಸಮಶೀತೋಷ್ಣವಲಯದ ಪ್ರದೇಶಗಳಿಗೆ) ವಲಸೆ ಹೋದದ್ದು ಒಂದು ರೀತಿಯದ್ದಾದರೆ, ಇನ್ನೊಂದು, ಭಾರತದ ಮತ್ತು ಚೀನಾದ ಕಾರ್ಮಿಕರು ವಿಶ್ವದ ಉಷ್ಣವಲಯದ ಮತ್ತು ಅರೆ–ಉಷ್ಣವಲಯದ ಪ್ರದೇಶಗಳಿಗೆ ವಲಸೆ ಹೋದದ್ದು ಮತ್ತೊಂದು ರೀತಿಯದ್ದಾಗಿತ್ತು.

ಕಾರ್ಮಿಕರ ಈ ವಲಸೆಯಲ್ಲಿದ್ದ ಒಂದು ವಿಶೇಷವಾದ ಅಂಶವೆಂದರೆ, ಉಷ್ಣ ವಲಯದ ಅಥವಾ ಅರೆ–ಉಷ್ಣವಲಯದ ಕಾರ್ಮಿಕರು ಸಮಶೀತೋಷ್ಣ ಪ್ರದೇಶಗಳಿಗೆ ವಲಸೆ ಹೋಗುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿತ್ತು. ಯುದ್ಧಾನಂತರದ ಅವಧಿಯಲ್ಲಿ ಬಂಡವಾಳದ ಹರಿವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಲಾಯಿತು. ಹಾಗಾಗಿ, "ಸುಂಕ–ಜಿಗಿತ"ದಂತಹ ನಿರ್ದಿಷ್ಟ ಸಂದರ್ಭಗಳಲ್ಲಿ ಮಾತ್ರ ಬಂಡವಾಳವು ಮೂರನೇ ಜಗತ್ತಿನ ಸಂರಕ್ಷಿತ ಮಾರುಕಟ್ಟೆಗಳನ್ನು ಪ್ರವೇಶಿಸುವುದು ಸಾಧ್ಯವಿತ್ತು. ಅಥವಾ, ಮುಂದುವರಿದ ಬಂಡವಾಳಶಾಹಿ ಜಗತ್ತಿನ ದೇಶಗಳು ಪರಸ್ಪರ ಬಂಡವಾಳ ಹೂಡಿಕೆ ಮಾಡಿಕೊಳ್ಳುತ್ತಿದ್ದವು. ಆದರೆ, ಭಾರತ, ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್‌ಗಳಂತಹ ಪೂರ್ವ–ವಸಾಹತುಗಳಿಂದ ಅಥವಾ ಅವಲಂಬಿತ ಪ್ರದೇಶಗಳಿಂದ ಮುಂದುವರೆದ ಬಂಡವಾಳಶಾಹೀ ದೇಶಗಳಿಗೆ ವಲಸೆ ಹೋಗುವ ಕಾರ್ಮಿಕರ ಸಂಖ್ಯೆಯನ್ನು ನಿಯಂತ್ರಿಸಲಾಗಿತ್ತು. ಹಾಗಾಗಿ, ಕಾರ್ಮಿಕರು ಭಾರತದಿಂದ ಇಂಗ್ಲೆಂಡಿಗೆ, ಅಲ್ಜೀರಿಯಾದಿಂದ ಮತ್ತು ಮೊರಾಕ್ಕೊದಿಂದ ಫ್ರಾನ್ಸ್‌ಗೆ ಮತ್ತು ಟರ್ಕಿಯಿಂದ ಜರ್ಮನಿಗೆ ವಲಸೆ ಹೋದರು. ಈ ಪರಿಸ್ಥಿತಿಗೆ ವ್ಯತಿರಿಕ್ತವಾಗಿ, ಪ್ರಸ್ತುತ ಕಾಲ ಘಟ್ಟದಲ್ಲಿ ಬಂಡವಾಳವು ಮುಂದುವರೆದ ದೇಶಗಳಿಂದ ಮೂರನೇ ಜಗತ್ತಿನ ದೇಶಗಳಿಗೆ ಹರಿಯುತ್ತಿರುವ ಬದಲಾವಣೆ ಮತ್ತು ಪೂರ್ವ ಯೂರೋಪಿನಿಂದ ಕಾರ್ಮಿಕರು ಮುಂದುವರಿದ ದೇಶಗಳಿಗೆ ವಲಸೆ ಹೋಗುವ ಬದಲಾವಣೆ, ಇವು ಗಮನಾರ್ಹವಾಗಿವೆ. ಬಂಡವಾಳದ ದೃಷ್ಟಿಕೋನದಿಂದ ಹೇಳುವುದಾದರೆ, ಈ ಎರಡೂ ಪಲ್ಲಟಗಳ ಹಿಂದಿರುವ ಮುಖ್ಯ ಪ್ರೇರಣೆಯೆಂದರೆ ಕೂಲಿಯ ಅನ್ವೇಷಣೆಯೇ–ಬಂಡವಾಳದ ಮಟ್ಟಿಗೆ ಅಗ್ಗದ ಕೂಲಿಯೇ.

ಅರ್ಥಶಾಸ್ತ್ರದ "ಮುಖ್ಯಧಾರೆ"ಯ ಪೀಕಲಾಟ

ವಿಪರ್ಯಾಸವೆಂದರೆ, ಬೂರ್ಜ್ವಾ ಅರ್ಥಶಾಸ್ತ್ರದ "ಮುಖ್ಯ ಧಾರೆ"ಯು ಬಂಡವಾಳದ ಮತ್ತು ಕಾರ್ಮಿಕರ ಸ್ಥಳಾಂತರದ ಅಂಶವನ್ನು ಒಪ್ಪಿಕೊಳ್ಳುವುದಿಲ್ಲ. ಅದು ಬಂಡವಾಳದ ಮತ್ತು ಕಾರ್ಮಿಕರ ಈ ಸ್ಥಳಾಂತರದ ಬದಲಾಗಿ, ಸರಕು ಮತ್ತು ಸೇವೆಗಳ ವ್ಯಾಪಾರದ ಮೂಲಕವಾಗಿ ಕಾರಣವನ್ನು ಕಂಡುಕೊಳ್ಳುತ್ತದೆ. ಶ್ರಮದ ಪ್ರತಿ ಯೂನಿಟ್‌ಗೆ ಅನುಪಾತವಾಗಿ ಹೆಚ್ಚು ಬಂಡವಾಳವನ್ನು ಹೊಂದಿರುವ ಒಂದು ದೇಶವು, ಶ್ರಮದ ಪ್ರತಿ ಯೂನಿಟ್‌ಗೆ ಅನುಪಾತವಾಗಿ ಕಡಿಮೆ ಬಂಡವಾಳವನ್ನು ಹೊಂದಿರುವ ಮತ್ತೊಂದು ದೇಶಕ್ಕೆ ಬಂಡವಾಳವನ್ನು ರಫ್ತು ಮಾಡಲು ಸಾಧ್ಯವಿಲ್ಲದ ಕಾರಣ, ಅದು ಮಾಡಬಹುದಾದ "ಮುಂದಿನ ಅತ್ಯುತ್ತಮ ಕೆಲಸ"ವೆಂದರೆ, ಹೆಚ್ಚು ಬಂಡವಾಳ–ಹೂಡಿಕೆಯ ಉತ್ಪನ್ನಗಳನ್ನು ಆ ಇನ್ನೊಂದು ದೇಶಕ್ಕೆ ರಫ್ತು ಮಾಡುವುದು ಮತ್ತು ಅದಕ್ಕೆ ಪ್ರತಿಯಾಗಿ ಹೆಚ್ಚು–ಶ್ರಮದಿಂದ ಕೂಡಿದ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವುದು. ವಾಸ್ತವವಾಗಿ, ಬಂಡವಾಳ ಮತ್ತು ಶ್ರಮದ ಸ್ಥಳಾಂತರವನ್ನು ವಿವರಿಸಲಾಗದುದರಿಂದ ಅರ್ಥಶಾಸ್ತ್ರದ ಈ "ಮುಖ್ಯ ಧಾರೆ"ಯು ವ್ಯಾಪಾರ–ಮಾದರಿಯ ವಿವರಣೆಯನ್ನು ಕೊಡುತ್ತದೆ.

ಬಂಡವಾಳಶಾಹಿಯ ಅಡಿಯಲ್ಲಿ ಸಂಭವಿಸಿದ ಬಂಡವಾಳದ ಮತ್ತು ಶ್ರಮದ ಸ್ಥಳಾಂತರವನ್ನು ಬೂರ್ಜ್ವಾ ಅರ್ಥಶಾಸ್ತ್ರದ "ಮುಖ್ಯ ಧಾರೆ"ಯು ಒಂದು ವೇಳೆ ಒಪ್ಪಿಕೊಂಡರೆ, ಆಗ, ಉತ್ಪನ್ನಗಳ ವ್ಯಾಪಾರವನ್ನು ಬೇರೆ ರೀತಿಯಲ್ಲಿ ವಿವರಿಸುವ ಒತ್ತಾಯಕ್ಕೆ ಅದು ಒಳಗಾಗುತ್ತದೆ. ಈ ಇನ್ನೊಂದು ಮಾರ್ಗವು ನಿರ್ದಿಷ್ಟ ಭೌಗೋಳಿಕ ಪ್ರದೇಶಗಳಲ್ಲಿ ಬೆಳೆಯಲು ಸಾಧ್ಯವಿರುವ ಬೆಳೆಗಳ ವ್ಯಾಪಾರವಾಗುತ್ತದೆ. ಇದರ ಅರ್ಥವೇನೆಂದರೆ, ಇತರ ಪ್ರದೇಶಗಳಿಗೆ ಅಗತ್ಯವಿರುವ ಸರಕುಗಳನ್ನು ಬೆಳೆದಾಗ, ತಮಗೆ ವ್ಯಾಪಾರ ಮಾಡಲು ಇಷ್ಟವಿಲ್ಲದ ಪ್ರದೇಶಗಳನ್ನು ವ್ಯಾಪಾರಕ್ಕಾಗಿ "ತೆರೆಯಬೇಕಾಗುತ್ತದೆ". ಸಂಕ್ಷಿಪ್ತವಾಗಿ ಇದು ಸಾಮ್ರಾಜ್ಯಶಾಹಿಯನ್ನು ಎದುರಿಸುವ ವಿದ್ಯಮಾನವಾಗುತ್ತದೆ. ಬೂರ್ಜ್ವಾ ಅರ್ಥಶಾಸ್ತ್ರದ "ಮುಖ್ಯ ಧಾರೆ"ಯ ಸಮರ್ಥಕರ ವ್ಯಾಪಾರ ಸಿದ್ಧಾಂತವು ತಡೆಯುವುದು ಇದನ್ನೇ.

ಉದಾಹರಣೆಗೆ, ಹತ್ತಿ ಬಟ್ಟೆಯ ಉದ್ಯಮದಿಂದ ಆರಂಭಗೊಂಡ ಕೈಗಾರಿಕಾ ಕ್ರಾಂತಿಗೆ ನಾಂದಿ ಹಾಡಿದ ದೇಶ ಬ್ರಿಟನ್. ಆದರೆ, ಬ್ರಿಟನ್ ಕಚ್ಚಾ ಹತ್ತಿಯನ್ನು ಬೆಳೆಯಲು ಸಾಧ್ಯವಿಲ್ಲ. ಈ ಕಾರಣದಿಂದಾಗಿ, ಕೈಗಾರಿಕಾ ಪ್ರವರ್ತಕ ದೇಶವು (ಬ್ರಿಟನ್) ಕಚ್ಚಾ ಹತ್ತಿಯನ್ನು ಉತ್ಪಾದಿಸಬಲ್ಲ ಮತ್ತು ತನಗೆ ಅಗತ್ಯವಿರುವ ಪ್ರಮಾಣದ ಹತ್ತಿಯನ್ನು ಪೂರೈಸುವಂತೆ ದೂರದ ಉಷ್ಣವಲಯದ ಮತ್ತು ಅರೆ–ಉಷ್ಣವಲಯದ ಭೂ ಪ್ರದೇಶಗಳ ಮೇಲೆ ನಿಯಂತ್ರಣ ಹೊಂದುವುದು ಅಗತ್ಯವಾಗುತ್ತದೆ. ಹೀಗಾಗಿ, ಭೂಮಿ, ಶ್ರಮ ಶಕ್ತಿ, ಬಂಡವಾಳ ಮತ್ತು ಉದ್ಯಮಶೀಲತೆ ಮುಂತಾದ ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಅಂಶಗಳು ನಿಶ್ಚಲ, ದೇಶಗಳ ಗಡಿಗಳ ಆಚೆ ಚಲಿಸಲಾರದ ಚಲಿಸಲಾರವು ಎಂಬಂತಹ ಸನ್ನಿವೇಶದಲ್ಲಿ ವ್ಯಾಪಾರವುರಿಂತಹ ಅಗತ್ಯ ಅಂಶಗಳಿಗೆ ಅನುಗುಣವಾಗಿ ನಡೆಯುತ್ತದೆ ಎಂಬ ಕಟ್ಟುಕಥೆಯಿಂದ ದೂರ ಸರಿದರೆ, "ಸಾಮ್ರಾಜ್ಯಶಾಹಿ"ಯೇ ಇದಕ್ಕೆ ಕಾರಣ ಎಂದು ಹೇಳದಿರುಲು ಸಾಧ್ಯವಾಗುವುದಿಲ್ಲ. ಆದರೆ ಬೂರ್ಜ್ವಾ ಅರ್ಥಶಾಸ್ತ್ರದ "ಮುಖ್ಯ ಧಾರೆ"ಯು ನಿಖರವಾಗಿ ಮಾಡುವುದು ಇದನ್ನೇ: ಅದು 'ಸಾಮ್ರಾಜ್ಯಶಾಹಿ"ಯನ್ನು ನಿರ್ಲಕ್ಷಿಸುತ್ತದೆ ಮತ್ತು ವ್ಯಾಪಾರವು ಬಂಡವಾಳ ಮತ್ತು ಶ್ರಮ ಸ್ಥಳಾಂತರಗೊಳ್ಳದ ಪರಿಣಾಮವೆಂದು ವಿವರಿಸುತ್ತದೆ.

ವಲಸೆಯಲ್ಲಿ ವಿರೋಧಾಭಾಸ

ಪಶ್ಚಿಮ ಯೂರೋಪ್ ಕೂಡ ನಿರುದ್ಯೋಗ ಪೀಡಿತವಾಗಿರುವುದರಿಂದ, ಅದರ ನೆರೆಯ ಕಡಿಮೆ–ವೇತನದ ಪೂರ್ವದ ದೇಶಗಳಿಂದ ಪಶ್ಚಿಮ ಯೂರೋಪಿನ ದೇಶಗಳಿಗೆ ಸಂಭವಿಸುತ್ತಿರುವ ವಲಸೆಯ ವಿದ್ಯಮಾನವು ಮೇಲ್ನೋಟಕ್ಕೆ ಕುತೂಹಲಕರವಾಗಿ ತೋರಬಹುದು. ಆದರೆ, ಈ ವಲಸೆಯು ಕಾರ್ಮಿಕರ ಕೊರತೆಯ ದೇಶಗಳಿಗೆ ಮಾತ್ರ ಸಂಭವಿಸುವುದಿಲ್ಲ. ನಿರುದ್ಯೋಗವು ಎಲ್ಲೆಲ್ಲೂ ತಾಂಡವವಾಡುತ್ತಿರುವ ಜಗತ್ತಿನಲ್ಲಿ ಇನ್ನೂ ಎರಡು ಕಾರಣಗಳಿಂದಾಗಿ ಕಡಿಮೆ ವೇತನದ ಪ್ರದೇಶಗಳಿಂದ ಉನ್ನತ ವೇತನ ಪ್ರದೇಶಗಳಿಗೆ ವಲಸೆ ಹೋಗುವುದು ಕಂಡುಬರುತ್ತದೆ: ಒಂದು, ವಲಸೆಯ ಉದ್ದೇಶವು ಒಬ್ಬನ ಪ್ರಸ್ತುತ ಆದಾಯಕ್ಕೆ ಹೋಲಿಸಿದರೆ ಆತನು ಗಳಿಸಬಹುದಾದ ಉನ್ನತ ಮಟ್ಟದ ಆದಾಯಕ್ಕೆ ಸಂಬಂಧಿಸುತ್ತದೆ. ಎರಡನೆಯದು, ವಲಸಿಗರು ಸಾಮಾನ್ಯವಾಗಿ ಸ್ಥಳೀಯ ಜನರಿಗಿಂತ ತುಸು ಕಡಿಮೆ ವೇತನದಲ್ಲಿ ಕೆಲಸ ಮಾಡಲು ಸಿದ್ಧರಿರುತ್ತಾರೆ. ಹಾಗಾಗಿ, ಉದ್ಯೋಗ ಗಿಟ್ಟಿಸಿಕೊಳ್ಳುವ ಅವರ ಸಾಧ್ಯತೆಯು ಸ್ಥಳೀಯರಿಗಿಂತ ಉತ್ತಮವಾಗಿರುತ್ತದೆ. ಈ ವಿದ್ಯಮಾನವು ಸಮಾಜವಾದದ ಅವನತಿಯ ನಂತರ, ಬಿಕ್ಕಟ್ಟು ಪೀಡಿತ ಪಶ್ಚಿಮ ಯುರೋಪ್ ಕೂಡ, ಸ್ಥಗಿತತೆಗೆ ಒಳಗಾಗಿರುವ ಪೂರ್ವ ಯೂರೋಪಿನ ದೇಶಗಳಿಂದ ಪುಟ 14 ಕ್ಕೆ

ಆಗಸ್ಟ್ 1 ರಂದು ದೇಶಾದ್ಯಂತ ಕೃಷಿ ಕಾರ್ಮಿಕರ ಪ್ರತಿಭಟನೆ ಅಖಿಲ ಭಾರತ ಕೃಷಿ ಕಾರ್ಮಿಕರ ಸಮಾವೇಶದ ನಿರ್ಧಾರ



ಮೇ 16 ರಂದು ನವದೆಹಲಿಯ ಹರ್ಕಿಶನ್ ಸಿಂಗ್ ಸುರ್ಜೀತ್ ಭವನದಲ್ಲಿ ನಡೆದ ಕೃಷಿ ಕಾರ್ಮಿಕರ ಅಖಿಲ ಭಾರತ ಜಂಟಿ ಸಮಾವೇಶದಲ್ಲಿ ವಿವಿಧ ರಾಜ್ಯಗಳಿಂದ 500 ಪ್ರತಿನಿಧಿಗಳು ಪಾಲ್ಗೊಂಡರು.

ಸಮಾವೇಶವು ಒಂದು ಹಕ್ಕೊತ್ತಾಯ ಪಟ್ಟಿಯನ್ನು ಅಂಗೀಕರಿಸಿ ಆಗಸ್ಟ್ 1, 2022 ರಂದು ದೇಶಾದ್ಯಂತ 500 ಜಿಲ್ಲೆಗಳಲ್ಲಿ ಪ್ರತಿಭಟನೆಗಳನ್ನು ನಡೆಸಲು, ನಂತರ ಒಂದು ದಿನದ ಗ್ರಾಮೀಣ ಮುಷ್ಕರ ನಡೆಸಲು ನಿರ್ಧರಿಸಿತು.

ಸಮಾವೇಶವನ್ನು ಖ್ಯಾತ ಪತ್ರಕರ್ತ, ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಪುರಸ್ಕೃತ ಮತ್ತು ಗ್ರಾಮೀಣ ಭಾರತದ ಜನತಾ ಸಂಗ್ರಹ(ಪಿಎಆರ್ಐ) ಸ್ಥಾಪಕರಾದ ಪಿ. ಸಾಯಿನಾಥ್ ಉದ್ಘಾಟಿಸಿದರು.

ಜಮ್ಮು-ಕಾಶ್ಮೀರದ ಎನ್‌ವೈಸಿ ಸ್ವಯಂಸೇವಕರ ಸೇವೆಗಳ ಖಾಯಮಾತಿಗೆ ತರಿಗಾಮಿ ಆಗ್ರಹ

ಜಮ್ಮು ಮತ್ತು ಕಾಶ್ಮೀರ ಆಡಳಿತದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಎನ್‌ವೈಸಿ ಸ್ವಯಂಸೇವಕರು ತುಂಬಾ ದುಸ್ಥಿತಿಯಲ್ಲಿದ್ದಾರೆ ಎಂದು ಹಿರಿಯ ಸಿಪಿಐ (ಎಂ) ಮುಖಂಡ ಮೊಹಮದ್ ಯೂಸುಫ್ ತರಿಗಾಮಿ ಕಳವಳ ವ್ಯಕ್ತಪಡಿಸಿದ್ದಾರೆ. ಈ ಸ್ವಯಂಸೇವಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ. ಅವರನ್ನು ಕುರಿತಂತೆ ಆಡಳಿತ ತನ್ನ ಸಂವೇದನಾಹೀನ ನಿಲುವನ್ನು ಬಿಟ್ಟು ಅವರ ದುಸ್ಥಿತಿಯತ್ತ ಗಮನ ಹರಿಸಬೇಕು. ಈ ಯುವಕರು ಹಲವಾರು ವರ್ಷಗಳಿಂದ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಸೇವೆಗಳನ್ನು ಕ್ರಮಬದ್ಧಗೊಳಿಸಲು ಆಡಳಿತ ಒಂದು ಸಮಗ್ರ ಯೋಜನೆ ಮತ್ತು ಧೋರಣೆಯನ್ನು ಪ್ರಕಟಿಸಬೇಕು ಎಂದು ತರಿಗಾಮಿ ಆಗ್ರಹಿಸಿದ್ದಾರೆ.

ಈ ಎನ್‌ವೈಸಿ ಯೋಜನೆಯನ್ನು ವಿದ್ಯಾವಂತ ಯುವಕರಲ್ಲಿ ಹೆಚ್ಚುತ್ತಿದ್ದ ನಿರುದ್ಯೋಗದ ಹಿನ್ನೆಲೆಯಲ್ಲಿ ರೂಪಿಸಲಾಗಿತ್ತು. ಈ ಯುವಕರು ಸೂಕ್ತ ನೇಮಕಾತಿ ಪ್ರಕ್ರಿಯೆಯ ಮೂಲಕ ಅರ್ಹತೆಯ ಆಧಾರದ ಮೇಲೆ ನೇಮಕಗೊಂಡಿದ್ದಾರೆ ಮತ್ತು ತಮ್ಮ ಇಲಾಖೆಗಳಿಗೆ ತೃಪ್ತಿಯಾಗುವಂತೆ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಹೆಚ್ಚಿನವರು ಈಗ ವಯೋಮಿತಿಯನ್ನು ಮಿತಿಯನ್ನು ದಾಟಿದ್ದು, ತಮ್ಮ ತಮ್ಮ ಕ್ಷೇತ್ರಗಳಲ್ಲಿ ಹೊಸದಾಗಿ ಪರೀಕ್ಷೆ ಪಾಸು ಮಾಡಿಕೊಂಡು ಬಂದಿರುವವರೊಂದಿಗೆ ಈ ಹಂತದಲ್ಲಿ ಸ್ಪರ್ಧಿಸುವ ಸ್ಥಿತಿಯಲ್ಲಿಲ್ಲ. ದುರದೃಷ್ಟವಶಾತ್, ಪ್ರಸ್ತುತ ಆಡಳಿತ ಈ ಎನ್‌ವೈಸಿ ಅರ್ಹ ಯುವಕರನ್ನು ಸೇವೆಗಳಲ್ಲಿ ಒಳಗೊಳ್ಳಲು ವಿಫಲವಾಗಿದೆ. ಅವರು ಕೋವಿಡ್ ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟದಲ್ಲಿ ಮುಂಚೂಣಿ ಕಾರ್ಯಕರ್ತರಾಗಿ ದುಡಿದರು, ಆದರೆ ಅದಕ್ಕೆ ಪ್ರತಿಯಾಗಿ ಪಡೆದದ್ದು ಬಿಡಿಗಾಸಿನ ಕೂಲಿ. ಈ ಸ್ವಯಂಸೇವಕರನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅವಲಂಬಿಸಿರುವ ಕುಟುಂಬಗಳ ನೋವು-ಸಂಕಟಗಳನ್ನು ಕೊನೆಗೊಳಿಸಲು ಸರ್ಕಾರ ಒಂದು ನಿರ್ಧಾರ ತೆಗೆದುಕೊಳ್ಳಬೇಕೆಂದು ತರಿಗಾಮಿ ಆಗ್ರಹ ಪಡಿಸಿದ್ದಾರೆ.

ಖಾಸಗೀಕರಣದ ಧಾವಂತಕ್ಕೆ ಎಲ್‌ಡಿಎಫ್ ಸರಕಾರದ ಸವಾಲು

ಕೇರಳ ಪೇಪರ್ ಪ್ರಾಡಕ್ಟ್ಸ್ ಲಿಮಿಟೆಡ್(ಕೆಪಿಪಿಎಲ್) ಉತ್ಪಾದನೆಯನ್ನು ಪ್ರಾರಂಭಿಸಿತು. ಮೇ 20 ರಂದು ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಇದನ್ನು ಉದ್ಘಾಟಿಸಿದರು. ಇದು ಈ ಮೊದಲು ಮೋದಿ ಸರಕಾರದ ಖಾಸಗೀಕರಣದ ಧಾವಂತದ ಭಾಗವಾಗಿ ಮಾರಾಟಕ್ಕಿಟ್ಟಿದ್ದ ಕೇಂದ್ರ ಸರಕಾರೀ ಸ್ವಾಮ್ಯದ ಸಾರ್ವನಿಕ ವಲಯದ ಉದ್ದಿಮೆಯಾಗಿತ್ತು. ಸಾರ್ವಜನಿಕ ವಲಯದ ಉದ್ದಿಮೆಗಳನ್ನು ರಕ್ಷಿಸಲು ಬದ್ಧವಾಗಿರುವ ಕೇರಳ ಎಲ್‌ಡಿಎಫ್ ಸರ್ಕಾರವು ಅದನ್ನು ವಹಿಸಿಕೊಂಡು ರಾಜ್ಯ ಸರಕಾರೀ ಸ್ವಾಮ್ಯದ ಉದ್ದಿಮೆಯಾಗಿ ಉತ್ತಮಪಡಿಸಿದೆ. ಇದು ಭಾರತದ ಅತಿದೊಡ್ಡ ಕಾಗದ ಮತ್ತು ಕಾಗದ ಉತ್ಪನ್ನಗಳ ತಯಾರಕ ಸಂಸ್ಥೆಯಾಗಲಿದೆ.





ಅಕ್ರಮ ಪಠ್ಯ ಪರಿಷ್ಕರಣೆ: ಸಂವಿಧಾನ ವಿರೋಧಿ ಮೌಲ್ಯಗಳಿಗೆ ಮಣೆ....

ಪುಟ 8 ರಿಂದ

ಅಳವಡಿಸಿದ ಪಾಠವೊಂದರಲ್ಲಿ ಮಹಿಳೆಯರನ್ನು ಅವಹೇಳನ ಮಾಡಿ ಅವರ ಘನತೆಗೆ ಚ್ಯುತಿ ತರುವ ಸಾಲುಗಳಿವೆ. ಅಮರ ಸ್ವಾತಂತ್ರ್ಯ ಹೋರಾಟಗಾರ ಹುತಾತ್ಮ ಭಗತ್ ಸಿಂಗ್‌ರ ಕುರಿತ ಪಾಠವನ್ನು ಕೈಬಿಡಲಾಗಿತ್ತು. ಆ ನಂತರ ಮತ್ತೆ ಅದನ್ನು ಸೇರಿಸಲಾಗಿದೆ. ಭಗತ್ ಸಿಂಗ್‌ರ ಕುರಿತ ಪಾಠ ಕೈಬಿಟ್ಟು, ಸ್ವಾತಂತ್ರ್ಯ ಹೋರಾಟಕ್ಕೆ ದ್ರೋಹ ಬಗೆದು ಬ್ರಿಟೀಷರ ಜೊತೆ ಷಾಮೀಲಾತಿಯಲ್ಲಿ ದೇಶ ವಿಭಜಕ ಸಿದ್ಧಾಂತವನ್ನು ಹರಡಿದ ಮತ್ತು ಕೋಮು ಗಲಭೆಗಳನ್ನು ಹಬ್ಬಿಸುತ್ತಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಂಸ್ಥಾಪಕ ಹೆಗ್ಡೆವಾರ್ ಅವರ ಬರಹವನ್ನು ಪಾಠದಲ್ಲಿ ಸೇರಿಸಲಾಗಿದೆ. ಲೇಖಕರ ಪರಿಚಯದ ನೆಪದಲ್ಲಿ ಮತಾಂಧ ಹಿಂದುತ್ವ ಫ್ಯಾಸಿಸ್ಟ್ ಸಂಘಟನೆಯಾದ ಆರೆಸ್ಸೆಸ್ ಅನ್ನು ವೈಭವೀಕರಿಸುವ ಅಂಶಗಳನ್ನು ತುರುಕಲಾಗಿದೆ.

ವೈಜ್ಞಾನಿಕ ಮನೋಧರ್ಮ, ವೈಚಾರಿಕತೆ, ಆಧುನಿಕ ಪ್ರಜ್ಞೆ ಮತ್ತು ಸಂವಿಧಾನದ ನೀತಿಸಂಹಿತೆಗಳಾದ ಸಮಾನತೆ, ಸ್ವಾತಂತ್ರ್ಯ, ಸಹೋದರತ್ವದ ನೀತಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಮಕ್ಕಳ ಮನಸ್ಸಿನಲ್ಲಿ ಸಾಮರಸ್ಯ ಹಾಗೂ ಸಹಬಾಳ್ವೆಯ ವಿವೇಕವನ್ನು ಮೂಡಿಸುವ ಮತ್ತು ಮಾನವೀಯ ಮೌಲ್ಯಗಳನ್ನು ಬಿತ್ತುವ ಪಠ್ಯಕ್ಕೆ ಬದಲಾಗಿ ನಾನಾ ಪಾಠಗಳಲ್ಲಿ ಆರೆಸ್ಸೆಸ್‌ನ ದ್ವೇಷಪೂರಿತವಾದ ಮತಾಂಧ ವಿಚಾರಗಳನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪಠ್ಯದಲ್ಲಿ ತುಂಬಲಾಗಿದೆ.

ರಾಷ್ಟ್ರ ಎದುರಿಸುತ್ತಿರುವ ಸವಾಲುಗಳು ಎಂಬ ಪಟ್ಟಿಯಲ್ಲಿ ಪ್ರಾದೇಶಿಕತೆ ಎಂಬ ಅಂಶವನ್ನು ತುರುಕಲಾಗಿದೆ. ಭಾರತ ಸಂವಿಧಾನದ ಒಕ್ಕೂಟ ತತ್ವ ಎತ್ತಿ ಹಿಡಿಯುವ ಬದಲಾಗಿ ಪ್ರಾದೇಶಿಕ ವೈಶಿಷ್ಟ್ಯ, ವೈವಿಧ್ಯತೆಯನ್ನು ಭಿನ್ನತೆಯನ್ನು ಅಪಾಯಕಾರಿ ಎಂದು ಬಿಂಬಿಸಿರುವುದು ಅಘಾತಕಾರಿಯಾಗಿದೆ.

ಈ ಒಟ್ಟು ಹಿನ್ನೆಲೆಯಲ್ಲಿ ರಾಜ್ಯದ ನಾನಾ ಶಿಕ್ಷಣ ಪ್ರೇಮಿ ಸಂಘಟನೆಗಳು ಹಾಗೂ ಸಾಹಿತಿ, ಚಿಂತಕರು, ಶಿಕ್ಷಣ ತಜ್ಞರು ಸಂವಾದ, ಚರ್ಚೆಗಳನ್ನು ನಡೆಸಿ ಈ ಕೆಳಕಂಡಂತೆ ಆಗ್ರಹಿಸುತ್ತಿದ್ದಾರೆ.

೦ ಮೊತ್ತಮೊದಲನೆಯದಾಗಿ ರೋಹಿತ್ ಚಕ್ರತೀರ್ಥ ಅಧ್ಯಕ್ಷತೆಯ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯನ್ನು ಈ ಕೂಡಲೇ ರದ್ದುಗೊಳಿಸಬೇಕು. ಈ ಸಮಿತಿಯ ಎಲ್ಲಾ ಶಿಫಾರಸ್ಸುಗಳನ್ನು ತಿರಸ್ಕರಿಸಿ, ಸದ್ಯಕ್ಕೆ ಕಳೆದ ವರ್ಷದಲ್ಲಿ ಜಾರಿಯಲ್ಲಿದ್ದ ಇದ್ದ ಪಠ್ಯಪುಸ್ತಕಗಳನ್ನೇ ಮುಂದುವರೆಸಬೇಕು. ಕಳೆದ ವರ್ಷ ಜಾರಿಯಲ್ಲಿದ್ದ ಪಠ್ಯಗಳಲ್ಲಿ ಆಕಸ್ಮಿಕವಾಗಿ ಸಂಭವಿಸಿರಬಹುದಾದ ದೋಷಗಳನ್ನು ತಿದ್ದುವ ಉದ್ದೇಶವಿದ್ದಲ್ಲಿ ಕ್ರಮಬದ್ಧವಾಗಿ ಶಿಕ್ಷಣ ತಜ್ಞರ ಸಮಿತಿಯನ್ನು ರಚಿಸಿ ಪ್ರಜಾಸತ್ತಾತ್ಮಕವಾಗಿ ಮತ್ತು ಪಾರದರ್ಶಕವಾಗಿ ಮೂಲಭೂತ ಸಾಂವಿಧಾನಿಕ ಮೌಲ್ಯಗಳು ಮತ್ತು 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು -2005' ರ ನಿರ್ದೇಶಕ ತತ್ವದಂತೆ ಪಠ್ಯ ಪರಿಷ್ಕರಣೆ ಆಗಬೇಕು.

ಕಳೆದ ಎರಡು ಶೈಕ್ಷಣಿಕ ವರ್ಷದಲ್ಲಿ ಕೊರೊನ ಬಿಕ್ಕಟ್ಟಿನಿಂದಾಗಿ ಶಿಕ್ಷಣ ವ್ಯವಸ್ಥೆಯೇ ಅಲ್ಲೋಲ ಕಲ್ಲೋಲವಾಗಿ ಮಕ್ಕಳ ಕಲಿಕೆಗೆ ಬಾರಿ ಅಡೆತಡೆಗಳುಂಟಾಗಿ ವಿದ್ಯಾರ್ಥಿ ಪೋಷಕರು ಆತಂಕದಲ್ಲಿರುವ ಸಂದರ್ಭದಲ್ಲಿ ಬಿ.ಸಿ. ನಾಗೇಶ್‌ರವರು ಜವಾಬ್ದಾರಿಯುತ ಶಿಕ್ಷಣ ಸಚಿವರಾಗಿ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು ಗಮನಕೊಡಬೇಕಿತ್ತು. ಆದರೆ ಅವರು ಹಿಜಾಜ್ – ಕೇಸರಿ ಬಾವುಟಗಳ ಹೆಸರಿನಲ್ಲಿ ವಿದ್ಯಾರ್ಥಿಗಳ ಐಕ್ಯತೆ ಮುರಿಯಲು ಕುಮ್ಮಕ್ಕು ಕೊಡುತ್ತಾ ಕೋಮುವಾದಿ ವಿಭಜನಕಾರಿ ಕೃತ್ಯಗಳಲ್ಲಿ ತೊಡಗಿದ್ದರು. ಈಗ ಪಠ್ಯಪುಸ್ತಕಗಳ ಕೇಸರೀಕರಣ ಮತ್ತು ಕೋಮುವಾದೀಕರಣದ ಮೂಲಕ ಗಂಭೀರ ಶೈಕ್ಷಣಿಕ ಬಿಕ್ಕಟ್ಟಿನ ಸೃಷ್ಟಿಗೆ ನೇರ ಹೊಣೆಗಾರರಾಗಿದ್ದಾರೆ. ಹೀಗಾಗಿ ಶಿಕ್ಷಣ ಸಚಿವ ನಾಗೇಶ್ ರಾಜಿನಾಮೆ ಕೊಡಬೇಕು, ಇಲ್ಲವಾದಲ್ಲಿ ಮುಖ್ಯಮಂತ್ರಿಗಳು ನಾಗೇಶರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ವ್ಯಾಪಕ ಹೋರಾಟಗಳನ್ನು ರೂಪಿಸಲು ವಿವಿಧ ಜನಪರ ಸಂಘಟನೆಗಳು ಮತ್ತು ಶಿಕ್ಷಣ ಪ್ರೇಮಿಗಳು ನಿರ್ಧರಿಸಿದ್ದಾರೆ.

ಮುಂದೆ ನಡೆಯುವ ಯಾವುದೇ ಪಠ್ಯ ಪರಿಷ್ಕರಣೆ, ರಚನೆಯ ಸಂಬಂಧ ಶಿಕ್ಷಣ ತಜ್ಞರು, ಶಿಕ್ಷಕರ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು, ಪೋಷಕರ ಸಂಘಟನೆಗಳು, ಸ್ಥಳೀಯ ಸಂಸ್ಥೆಗಳು, ಶಾಲಾ ಅಭಿವೃದ್ಧಿ ಸಮಿತಿಗಳು ಶಿಕ್ಷಣ ವ್ಯವಸ್ಥೆಯ ಭಾಗಿದಾರರ ಜೊತೆ ವ್ಯಾಪಕವಾದ ಸಮಾಲೋಚನೆ, ಚರ್ಚೆ, ಸಂವಾದ ನಡೆಸಬೇಕು ಎಂದೂ ಒತ್ತಾಯಿಸಿರುವ ಈ ಶಿಕ್ಷಣ ಪ್ರೇಮಿಗಳು ಈಗಿನ ಪಠ್ಯಪುಸ್ತಕಗಳ ಕೋಮುವಾದೀಕರಣದ ಅಪಾಯಗಳ ಬಗೆಗೆ ಕಿರುಹೊತ್ತಿಗೆ, ಕರಪತ್ರ, ಸಾಮಾಜಿಕ ಮಾಧ್ಯಮಗಳಲ್ಲಿ ಬರಹ ಮುಂತಾದವುಗಳ ಮೂಲಕ ವ್ಯಾಪಕವಾದ ಪ್ರಚಾರಾಂದೋಲನಗಳನ್ನು ಕೈಗೊಳ್ಳಲು ನಿರ್ಧರಿಸಿವೆ.

ಜಾಗತೀಕರಣದಲ್ಲಿ ಬಂಡವಾಳದ ಮತ್ತು ಕಾರ್ಮಿಕರ ಸ್ಥಳಾಂತರ..........

ಪುಟ 13 ರಿಂದ

ವಲಸಿಗರನ್ನು ಸೆಳೆಯುವ ವಿರೋಧಾಭಾಸವನ್ನು ವಿವರಿಸುತ್ತದೆ.

ಸಮಕಾಲೀನ ಜಾಗತೀಕರಣಕ್ಕೆ ಸಂಬಂಧಿಸಿದ ಅವಳಿ ವಿದ್ಯಮಾನಗಳು-ಮುಂದುವರೆದ ದೇಶಗಳಿಂದ ಮೂರನೇ ಜಗತ್ತಿನ ದೇಶಗಳಿಗೆ ಬಂಡವಾಳದ ವಲಸೆ ಮತ್ತು ಹಿಂದಿನ ಎರಡನೇ ಜಗತ್ತಿನ ದೇಶಗಳಿಂದ ಮುಂದುವರೆದ ದೇಶಗಳಿಗೆ ಸಂಭವಿಸುತ್ತಿರುವ ಕಾರ್ಮಿಕರ ವಲಸೆ – ಇವು ಎಲ್ಲೆಡೆ ಕಾರ್ಮಿಕ ವರ್ಗದ ಚಳುವಳಿಯನ್ನು ದುರ್ಬಲಗೊಳಿಸುತ್ತವೆ. ಈ ವಿದ್ಯಮಾನಗಳು ಮುಂದುವರೆದ ಬಂಡವಾಳದ ದೇಶಗಳಲ್ಲಿ ಕಾರ್ಮಿಕ ವರ್ಗದ ಚಳುವಳಿಯನ್ನು ದುರ್ಬಲಗೊಳಿಸುತ್ತವೆ; ಬಂಡವಾಳವು ತಾನು ವಲಸೆ ಹೋಗುವ ದೇಶಗಳಲ್ಲೂ ಕಾರ್ಮಿಕ ವರ್ಗವನ್ನು ದುರ್ಬಲಗೊಳಿಸುತ್ತದೆ. ಇಲ್ಲದಿದ್ದರೆ ಅದು ಬೇರೊಂದು ಗಮ್ಯಸ್ಥಾನವನ್ನು ಆಯ್ದುಕೊಳ್ಳುತ್ತದೆ. ಈ ಅವಳಿ ವಿದ್ಯಮಾನಗಳು ವಲಸೆ ಕಾರ್ಮಿಕರ ಸ್ಥಾನ-ಮಾನವನ್ನು ದುರ್ಬಲಗೊಳಿಸುತ್ತವೆ. ಅವರಿಗೆ ಉದ್ಯೋಗ ದೊರಕುವ ಸಾಧ್ಯತೆಯು ಅವರು ಸಂಘಟಿತರಾಗಿಲ್ಲ ಎಂಬುದನ್ನೇ ಅವಲಂಬಿಸಿದೆ. ಹೀಗೆ, ವಿಶ್ವ ಮಟ್ಟದಲ್ಲಿ ವರ್ಗ ಅಧಿಕಾರ-ಶಕ್ತಿಯು ದುಡಿಯುವ ವರ್ಗದಿಂದ ಬಂಡವಾಳಶಾಹಿಗಳ ಪರವಾಗಿ ವಾಲಿದೆ.

ಈ ವಿದ್ಯಮಾನಗಳು ಬಂಡವಾಳಶಾಹಿಯು ಒಳಗಾಗಿರುವ ಬಿಕ್ಕಟ್ಟನ್ನು ಆಳಗೊಳಿಸುತ್ತವೆ. ಬಂಡವಾಳದ ಮತ್ತು ಶ್ರಮದ ಸ್ಥಳಾಂತರದ ನಿವ್ವಳ ಫಲಿತಾಂಶವೆಂದರೆ, ಜಾಗತಿಕ ಉತ್ಪಾದನೆಯಲ್ಲಿ ಮಿಗುತಾಯದ ಪಾಲನ್ನು ಹೆಚ್ಚಿಸುವುದು. ಇದರ ಒಟ್ಟಾರೆ ಪರಿಣಾಮವೆಂದರೆ ಬೇಡಿಕೆಯ ಪ್ರಮಾಣವನ್ನು ಇಳಿಸುವುದು. ಏಕೆಂದರೆ, ಮಿಗುತಾಯದ ಪ್ರಮಾಣಕ್ಕೆ ಹೋಲಿಸಿದರೆ, ದುಡಿಯುವ ಜನರು ತಮ್ಮ ಆದಾಯದ ಹೆಚ್ಚಿನ ಭಾಗವನ್ನು ಬಳಕೆಗಾಗಿ ಖರ್ಚು ಮಾಡುತ್ತಾರೆ. ಸಮಕಾಲೀನ ಬಂಡವಾಳಶಾಹಿಯ ಒಂದು ವಿಪರ್ಯಾಸವೆಂದರೆ, ಕಡಿಮೆ ಕೂಲಿಯ ಹುಚ್ಚು ಅನ್ವೇಷಣೆಯು ಬಂಡವಾಳಶಾಹಿ ವ್ಯವಸ್ಥೆಯನ್ನು ದೀರ್ಘಕಾಲೀನ ಬಿಕ್ಕಟ್ಟಿಗೆ ತಳ್ಳಿದೆ.

ನಾಟೋ ಸದಸ್ಯತ್ವಕ್ಕೆ ಸ್ವೀಡನ್, ಫಿನ್ ಲ್ಯಾಂಡ್ ಅರ್ಜಿ: ಕಾರಣ ಮತ್ತು ಪರಿಣಾಮಗಳೇನು?

ಜಗದ ಸುತ್ತ

ವಸಂತರಾಜ ಎನ್.ಕೆ.

ರಶ್ಯಾದ ಜತೆ 800 ಕಿ.ಮಿ ಗಡಿ ಹೊಂದಿರುವ ಫಿನ್ ಲ್ಯಾಂಡ್ ನಾಟೋ ಕೂಟಕ್ಕೆ ಸೇರಿದರೆ ಅಲ್ಲಿ ಅಣ್ವಸ್ತ್ರ ಸಜ್ಜಿತ ಕ್ಷಿಪಣಿ ಮತ್ತಿತರ ಆಕ್ರಾಮಕ ಅಸ್ತ್ರಗಳನ್ನು ಸಜ್ಜುಗೊಳಿಸುವುದು ಖಚಿತ. ಇದರಿಂದ ಫಿನ್ ಲ್ಯಾಂಡ್ ಅಣ್ವಸ್ತ್ರದ ರಣರಂಗವಾಗುವ ಎಲ್ಲಾ ಸಾಧ್ಯತೆಗಳೂ ಇವೆ. ಇವೆಲ್ಲ ಈಗಾಗಲೇ ಇರುವ ಶಸ್ತ್ರಾಸ್ತ್ರ ಪೈಪೋಟಿಯನ್ನು ಇನ್ನಷ್ಟು ತೀವ್ರಗೊಳಿಸಬಹುದು. ಜಗತ್ತಿನಲ್ಲಿ ಅದರಲ್ಲೂ ಯುರೋಪಿನಲ್ಲಿ ಅಣ್ವಸ್ತ್ರ ಯುದ್ಧದ ಅಪಾಯ ಹಿಂದೆಂದಿಗಿಂತಲೂ ಹೆಚ್ಚಾಗಲಿದೆ. ಹಾಗಾಗಿ ನಾಟೋ ಸದಸ್ಯತ್ವಕ್ಕೆ ಸ್ವೀಡನ್, ಫಿನ್ ಲ್ಯಾಂಡ್ ಅರ್ಜಿ, ಯುರೋಪಿನ ಏಕೆ ಇಡೀ ಜಗತ್ತಿನ ಭದ್ರತೆ, ಶಾಂತಿ ಗಳ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಬೀರಬಲ್ಲ ಮಹತ್ವದ ಆತಂಕಕಾರಿ ಬೆಳವಣಿಗೆ.

ಸ್ವೀಡನ್ ಮತ್ತು ಫಿನ್ ಲ್ಯಾಂಡ್ ನಾಟೋ ಸದಸ್ಯತ್ವಕ್ಕೆ ಅರ್ಜಿ ಹಾಕಲು ಅಧಿಕೃತವಾಗಿ ನಿರ್ಧರಿಸಿವೆ. ಈ ಬೆಳವಣಿಗೆಗೆ ಕಾರಣಗಳೇನು? ಯುರೋಪಿನ ಮತ್ತು ಇಡೀ ಜಗತ್ತಿನ ಭದ್ರತೆ, ಶಾಂತಿ ಗಳ ಮೇಲೆ ಇದು ಯಾವ ಪರಿಣಾಮ ಬೀರಬಹುದು?. ಎರಡನೆಯ ಮಹಾಯುದ್ಧದ ನಂತರ ಶೀತಯುದ್ಧದ ಕಾಲದ ಉದ್ದಕ್ಕೂ ಈ ವರೆಗೂ ಈ ಎರಡು ಉತ್ತರ ಯುರೋಪಿನ ದೇಶಗಳು–ವಾರ್ಸಾ ಒಪ್ಪಂದ ಅಥವಾ ನಾಟೋ – ಎರಡೂ ಮಿಲಿಟರಿ ಕೂಟಗಳಿಗೆ ಸೇರಿರಲಿಲ್ಲ. ಇದರಿಂದಾಗಿ ಅವು ಪಾಶ್ಚಿಮಾತ್ಯ ಮತ್ತು ಸೋವಿಯೆಟ್ ಒಕ್ಕೂಟ ನಾಯಕತ್ವದ ಸಮಾಜವಾದಿ ಬಣದ ದೇಶಗಳೊಂದಿಗೆ ಉತ್ತಮ ಸಂಬಂಧ ಹೊಂದಿದ್ದವು. ಎರಡೂ ದೇಶಗಳು ಪ್ರಬಲ ಸೈನ್ಯ ಹೊಂದಿದ್ದರೂ ದೀರ್ಘಕಾಲೀನ ರಾಷ್ಟ್ರೀಯ ಭದ್ರತೆ, ಹಿತಾಸಕ್ತಿ, ಶಾಂತಿಯ ದೃಷ್ಟಿಯಿಂದ ನಾಟೋ ಮಿಲಿಟರಿ ಕೂಟದಿಂದ ದೂರವುಳಿದಿದ್ದವು.

ಫಿನ್ ಲ್ಯಾಂಡ್ ಎರಡನೆಯ ಮಹಾಯುದ್ಧದ ನಂತರವಷ್ಟೇ ಈ ಧೋರಣೆ ತಳೆದಿದೆ. ಫಿನ್ ಲ್ಯಾಂಡ್ ರಶ್ಯದ ಜತೆ 830 ಮೈಲಿ ಉದ್ದದ ಗಡಿಯನ್ನು ಹೊಂದಿದ್ದು, ಸೂಪರ್ ಪವರ್ ಆಗಿದ್ದ ಸೋವಿಯೆಟ್ ಒಕ್ಕೂಟವನ್ನೂ ಮತ್ತು ಅದರ ಪತನದ ನಂತರವೂ ಸಹ ದೊಡ್ಡ ಮಿಲಿಟರಿ ಶಕ್ತಿಯಾಗಿದ್ದ ರಶ್ಯಾವನ್ನು ಕೆಣಕದಿರುವುದು ಅದರ ತಟಸ್ಥತೆಗೆ ಮುಖ್ಯ ಪ್ರೇರಕ ಶಕ್ತಿಯಾಗಿತ್ತು. ಆದರೆ ಸ್ವೀಡನ್ ನ ಪೂರ್ಣ ಪ್ರಮಾಣದ ತಟಸ್ಥ ಮಿಲಿಟರಿ ಧೋರಣೆ 200 ವರ್ಷಕ್ಕೂ ಹಳೆಯದು. ಎರಡೂ ಮಹಾಯುದ್ಧಗಳಲ್ಲಿ ಮತ್ತು ಅದರ ಹಿಂದೆಯೂ ದೀರ್ಘ ಕಾಲದ ಯುರೋಪಿನ ಒಳಗಿನ ಮಿಲಿಟರಿ ಸಂಘರ್ಷಗಳಿಂದ ಅದು ದೂರವಿತ್ತು. ಮಾತ್ರವಲ್ಲ, ಶೀತಸಮರದ ಅವಧಿಯಲ್ಲಿ ಇವು ಪಾಶ್ಚಿಮಾತ್ಯ ರಾಜಕೀಯ–ಆರ್ಥಿಕ ಕೂಟಗಳಿಂದಲೂ ದೂರವಿದ್ದವು. 1995ರಲ್ಲಷ್ಟೇ ಎರಡೂ ದೇಶಗಳು ಯುರೋ ಕೂಟವನ್ನು ಸೇರಿದ್ದು. ಸ್ವೀಡನ್ ಯುರೋ ಕೂಟ ಸೇರಿದ್ದರೂ ಯುರೋ ನಾಣ್ಯವನ್ನು ಅಂಗೀಕರಿಸದೆ ತನ್ನ ಕ್ರೋನರ್ ನಾಣ್ಯವನ್ನು ಈಗಲೂ ಮುಂದುವರೆಸುತ್ತಿದೆ.

ಆದರೆ 1995ರಲ್ಲಿ ಆದರೆ ಇವೆರಡೂ ದೇಶಗಳು ನಾಟೋ ಕೂಟದೊಂದಿಗೆ 'ಶಾಂತಿಗಾಗಿ ಸಹಭಾಗಿತ್ವ' ಒಪ್ಪಂದಕ್ಕೆ ಸಹಿ ಹಾಕಿದವು. ಅದರ ಭಾಗವಾಗಿ ಎರಡೂ ಮಿಲಿಟರಿ ವ್ಯವಸ್ಥೆಯ ಉಪಕರಣಗಳು ಜಂಟಿಯಾಗಿ ಕೆಲಸ ಮಾಡುವಂತೆ ಕ್ರಮ ಕೈಗೊಳ್ಳುವುದನ್ನು ಆರಂಭಿಸಿದ್ದವು. ಯುಗೋಸ್ಲಾವಿಯ, ಅಫ್ಘಾನಿಸ್ತಾನ, ಲಿಬ್ಯಾ ಮತ್ತು ಇರಾಕ್ ಯುದ್ಧಗಳಲ್ಲಿ ನಾಟೋ ಪಡೆಗಳೊಂದಿಗೆ ಭಾಗವಹಿಸಿದ್ದವು.

ಈ ಎರಡೂ ದೇಶಗಳಲ್ಲಿ ನಾಟೋ ಕೂಟಕ್ಕೆ ಸೇರದಿರುವುದು ಬರಿಯ ಸರಕಾರಗಳ ನೀತಿಯಾಗಿರಲಿಲ್ಲ. ಅದಕ್ಕೆ ಪೂರ್ಣ ಜನಬೆಂಬಲ ಮತ್ತು ಎಲ್ಲ ರಾಜಕೀಯ ಶಕ್ತಿಗಳ ಸಹಮತವಿತ್ತು. ಈ ವರ್ಷದ ಆರಂಭದಲ್ಲಿ ಫಿನ್ ಲ್ಯಾಂಡ್ ಪ್ರಧಾನಿ ನಾಟೋ ಕೂಟಕ್ಕೆ ಸೇರುವ ಪ್ರಶ್ನೆಯಿಲ್ಲ ಎಂದಿದ್ದರು. ಆದರೆ ಉಕ್ರೇನ್ ಯುದ್ಧ ಎಲ್ಲವನ್ನೂ ಬದಲಾಯಿಸಿದಂತಿದೆ. ಎರಡೂ ದೇಶಗಳಲ್ಲಿ ಜನಮತ ಸಂಗ್ರಹದಲ್ಲಿ ಬಹುಸಂಖ್ಯಾತರು ನಾಟೋ ಸೇರುವುದನ್ನು ಬೆಂಬಲಿಸಿದ್ದಾರೆ ಎಂದು ವರದಿಯಾಗಿದೆ.




'ನಾಟೋ ಬೇಡ'–ಟರ್ಕಿಯಲ್ಲಿ ಪ್ರತಿಭಟನೆ

ತಟಸ್ಥ ನೀತಿಯ ಪರವಾಗಿದ್ದ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷಗಳು ಸಹ ತಮ್ಮ ಧೋರಣೆ ಬದಲಾಯಿಸಿವೆ. ಎರಡೂ ದೇಶಗಳ ಆಳುವ ವಲಯಗಳಿಗಂತೂ ಯು.ಎಸ್–ಯುರೋ ಆಳುವ ವಲಯಗಳ ಭಾಗವಾಗಲು ಹವಣಿಸುವ ಭಾಗವಾಗಿ ಈ ನಿಟ್ಟಿನಲ್ಲಿ ಒಲವು ಇತ್ತು.

ಆದರೆ ಸ್ವೀಡನ್ ಮತ್ತು ಫಿನ್ ಲ್ಯಾಂಡ್ ನಾಟೋ ಸದಸ್ಯತ್ವಕ್ಕೆ ಅರ್ಜಿಯನ್ನು ಟರ್ಕಿ ಬಲವಾಗಿ ವಿರೋಧಿಸಿದೆ. ಟರ್ಕಿಯ 'ಭಯೋತ್ಪಾದಕರು' ಮತ್ತು 'ವಿಚ್ಛಿದ್ರಕಾರಿ' ರಾಜಕೀಯ ಶಕ್ತಿಗಳಿಗೆ ಆಶ್ರಯ ಕೊಟ್ಟಿವೆ, ಬೆಂಬಲಿಸುತ್ತಿವೆಯೆಂಬುದು ಅದರ ಈಗಿನ ಅಧ್ಯಕ್ಷರ ತಕರಾರು. ಆದರೆ ಅದನ್ನು ಎಷ್ಟರ ಮಟ್ಟಿಗೆ ಇತರ ಯುರೋ ಕೂಟ ಸದಸ್ಯರು ಒಪ್ಪುತ್ತಾರೆಂದು ಹೇಳುವಂತಿಲ್ಲ. ಆದರೆ ನಾಟೋ ಗೆ ಹೊಸ ಸದಸ್ಯರನ್ನು ಸೇರಿಸಿಕೊಳ್ಳಲು ಎಲ್ಲ ಸದಸ್ಯರೂ ಒಪ್ಪಬೇಕೆಂಬ ನಿಯಮವಿರುವುದರಿಂದ ಇದು ಕಂಟಕವಾಗಬಹುದು. ಪ್ರತಿಯೊಂದು ಸದಸ್ಯ ದೇಶ ಪ್ರತಿಯೊಂದು ಸದಸ್ಯತ್ವದ ಹೊಸ ಅರ್ಜಿಯನ್ನು ಅದರ ಸಂವಿಧಾನ/ಕಾನೂನುಗಳ ಪ್ರಕಾರ ಅನುಮೋದಿಸಬೇಕು. ಹೆಚ್ಚಿನ ನಾಟೋ ಸದಸ್ಯ ದೇಶಗಳಲ್ಲಿ ಆಯಾ ಪಾರ್ಲಿಮೆಂಟಿನ ಅನುಮೋದನೆ (ಸರಳ ಅಥವಾ ಹೆಚ್ಚಿನ ಉದಾ. 2/3ರ ಬಹುಮತ) ಅಗತ್ಯವಿದೆ. ಕೆಲವು ದೇಶಗಳಲ್ಲಿ ಜನಮತಸಂಗ್ರಹವೂ ಅಗತ್ಯವಾಗಬಹುದು. ಹಾಗಾಗಿ ಈ ಪ್ರಕ್ರಿಯೆ ದೀರ್ಘವಾದದ್ದು.

ಸ್ವೀಡನ್, ಫಿನ್ ಲ್ಯಾಂಡಿನಲ್ಲಿ ಜನಮತ ನಾಟೋ ಕೂಟಕ್ಕೆ ಸೇರುವ ಪರವಾಗಿ ತಿರುಗಲು, ಉಕ್ರೇನಿಗೆ ಆಗಿದ್ದು ತಮ್ಮ ದೇಶಕ್ಕೂ ಆಗಬಹುದು ಎಂದು ಮೂಡಿದ ಅಥವಾ ಜಾಗತಿಕ ಮಾಧ್ಯಮಗಳು ಮೂಡಿಸಲು ಪ್ರಯತ್ನಿಸಿದ ಆತಂಕವೇ ಮುಖ್ಯ ಕಾರಣ. ತಮ್ಮ ದೇಶದ ಅಥವಾ ಇಡೀ ಯುರೋಪಿನ ಭದ್ರತೆ, ಶಾಂತಿ, ಸಾರ್ವಭೌಮತೆಗೆ ಹಿಂದೆ ಸೋವಿಯೆಟ್ ಬಣದ ಅಥವಾ ಆ ಮೇಲೆ ರಶ್ಯದ 'ಅಪಾಯ' ಇಲ್ಲ. ಆ ರೀತಿಯ 'ಅಪಾಯ' ಯು.ಎಸ್–ಯುರೋ ಕೂಟದ ಆಳುವ ವಲಯಗಳ ಪ್ರಚಾರವಷ್ಟೇ ಎಂಬುದು ಜನರ ಅಭಿಪ್ರಾಯವಾಗಿತ್ತು. ಆದರೆ ಉಕ್ರೇನ್ ಯುದ್ಧದ ನಂತರ ಈಗಿನ ಬದಲಾದ ಸ್ಥಿತಿಯಲ್ಲಿ ದೇಶದ ಮತ್ತು ಯುರೋಪಿನ ಭದ್ರತೆ, ಶಾಂತಿ, ಸಾರ್ವಭೌಮತೆಗಳ ರಕ್ಷಣೆಗೆ ನಾಟೋ ಕೂಟಕ್ಕೆ ಸೇರುವುದು ಕ್ಷೇಮ ಎಂಬ ಅಭಿಪ್ರಾಯಕ್ಕೆ ಬಲ ಬರತೊಡಗಿದೆ.



'ನಾಟೋ ಬೇಡ' – ಸ್ವೀಡನ್ ನಲ್ಲಿ ಪ್ರತಿಭಟನೆ

ಆದರೆ ಈ ತರ್ಕವನ್ನು ಸ್ವೀಡನ್, ಫಿನ್ ಲ್ಯಾಂಡಿನಲ್ಲಿ ಎಲ್ಲರೂ ಒಪ್ಪಿದಂತಿಲ್ಲ. ಈ ಎರಡು ದೇಶಗಳ ಮಾತ್ರವಲ್ಲ ಯುರೋಪಿನ ಶಾಂತಿ ಚಳುವಳಿ ಮತ್ತು ಎಡ ರಾಜಕೀಯ ಶಕ್ತಿಗಳು, ನಾಟೋ ಕೂಟಕ್ಕೆ ಸೇರುವುದು ದೇಶದ ಮತ್ತು ಯುರೋಪಿನ ಭದ್ರತೆ, ಶಾಂತಿ, ಸಾರ್ವಭೌಮತೆಗಳಿಗೆ ಮಾರಕವಾಗುವ ಸಂಭವವೇ ಹೆಚ್ಚು ಎಂದು ವಾದಿಸಿವೆ. ಉಕ್ರೇನ್ ಯುದ್ಧವನ್ನು ಇವು ಖಂಡಿಸಿವೆ. ಆದರೆ ಯು.ಎಸ್ ನಾಯಕತ್ವದಲ್ಲಿ ನಾಟೋ ಕೂಟ ಉಕ್ರೇನನ್ನು ಬಲಿಪಶು ಮಾಡಿ ರಶ್ಯಾವನ್ನು ಈ ಯುದ್ಧಕ್ಕೆ ಪ್ರಚೋದಿಸಿದೆ. ನಾಟೋ ಯುರೋಪಿನ ಭದ್ರತೆ, ಶಾಂತಿ, ಸಾರ್ವಭೌಮತೆಗಳಿಗೆ ಕಟ್ಟಿದ ಮಿಲಿಟರಿ ಕೂಟವಲ್ಲ. ಬದಲಿಗೆ ಯು.ಎಸ್ ನ ಜಾಗತಿಕ ಅಧಿಪತ್ಯ ಸ್ಥಾಪಿಸುವುದು, ಅದಕ್ಕೆ ಸವಾಲು ಹಾಕಿದವರಿಗೆ 'ಬುದ್ಧಿ ಕಲಿಸುವುದು, ಯು.ಎಸ್? ಯುರೋ ವಲಯದ ಶಸ್ತ್ರಾಸ್ತ್ರ ಉದ್ಯಮದ ಮತ್ತು ಮಿಲಿಟರಿ–ಕೈಗಾರಿಕಾ ಸಂಕೀರ್ಣದ ಸೂಪರ್ ಲಾಭ ದೊರಕಿಸುವುದು ಅದರ ನಿಜವಾದ ಉದ್ದೇಶ. ಉಕ್ರೇನ್ ಯುದ್ಧದಿಂದ ಈ ಶಕ್ತಿಗಳಿಗೆ ಲಾಭವಿರುವುದರಿಂದಲೇ ಯಾವುದೇ ಶಾಂತಿ ಮಾತುಕತೆಗೆ ಗಂಭೀರ ಪ್ರಯತ್ನ ನಡೆಯುತ್ತಿಲ್ಲ ಎಂದೂ ವಾದಿಸಿವೆ.

ಈ ವರೆಗಿನ ಯಾವ ನಾಟೋ ಮಿಲಿಟರಿ ಅಭಿಯಾನ ಸಹ ಯುರೋಪಿನ ದೇಶಗಳ ಭದ್ರತೆ, ಶಾಂತಿ, ಸಾರ್ವಭೌಮತೆಗಳಿಗೆ ಮಾಡಿದ್ದಲ್ಲ. ಯುರೋಪಿನ ನೆಲದಲ್ಲಿ ಆದ ಯುಗೋಸ್ಲಾವಿಯವನ್ನು ಛಿದ್ರಗೊಳಿಸಿದ ಯುದ್ಧದಿಂದ ಆರಂಭಿಸಿ, ಅಫ್ಘಾನಿಸ್ತಾನ, ಇರಾಕ್, ಲಿಬ್ಯಾ, ಸಿರಿಯಾ ಯುದ್ಧಗಳೆಲ್ಲ ಯು.ಎಸ್ ನ ಜಾಗತಿಕ ಅಧಿಪತ್ಯದ ರಕ್ಷಣೆಗೆ ಹೂಡಿದ್ದು. ಆಯಾ ದೇಶಗಳ ಸಾರ್ವಭೌಮತೆಯನ್ನು ನಾಶ ಮಾಡಿತ್ತು. ಈ ಯುದ್ಧಗಳಿಂದ ಯುರೋಪಿನ ಭದ್ರತೆ, ಶಾಂತಿ, ಸಾರ್ವಭೌಮತೆಗಳಿಗೆ ಅಪಾಯವೇ ಆಗಿದೆ. ಯುರೋಪಿಗೆ ಸವಾಲಾಗಿರುವ ದೊಡ್ಡ ಪ್ರಮಾಣದ ವಲಸೆಗಾರರು ನಾಟೋ ಯುದ್ಧಗಳ ಸಂತ್ರಸ್ತರು ಎಂಬುದು ಅವರ ವಾದ.

ಈಗಾಗಲೇ ಪೂರ್ವಕ್ಕೆ ನಾಟೋ ವಿಸ್ತರಣೆ ರಶ್ಯಾದ ಆತಂಕಕ್ಕೆ ಕಾರಣವಾಗಿದೆ. ಈ ಎರಡು ದೇಶಗಳು ನಾಟೋ ಸೇರಿದರೆ ಐದು ದೇಶಗಳನ್ನು ಬಿಟ್ಟರೆ ಎಲ್ಲ ಯುರೋ ಕೂಟದ ದೇಶಗಳು ನಾಟೋ ಕೂಟದ ಭಾಗವಾದಂತಾಗುತ್ತದೆ. ಇದು ಇನ್ನಷ್ಟು ರಶ್ಯಾದ ಆತಂಕಕ್ಕೆ ಕಾರಣವಾಗಬಹುದು. ಈಗಾಗಲೇ ಫಿನ್ ಲ್ಯಾಂಡ್ ಮೇಲೆ ಇಂಧನ ನಿರ್ಬಂಧ ಹೇರುವ ಬೆದರಿಕೆಯನ್ನು ರಶ್ಯಾ ಹಾಕಿದೆ. ರಶ್ಯಾದ ಜತೆ 800 ಕಿ.ಮಿ ಗಡಿ ಹೊಂದಿರುವ ಫಿನ್ ಲ್ಯಾಂಡ್ ನಾಟೋ ಕೂಟಕ್ಕೆ ಸೇರಿದರೆ ಅಲ್ಲಿ ಅಣ್ವಸ್ತ್ರ ಸಜ್ಜಿತ ಕ್ಷಿಪಣಿ ಮತ್ತಿತರ ಆಕ್ರಾಮಕ ಅಸ್ತ್ರಗಳನ್ನು ಸಜ್ಜುಗೊಳಿಸುವುದು ಖಚಿತ. ಇದರಿಂದ ಫಿನ್ ಲ್ಯಾಂಡ್ ಅಣ್ವಸ್ತ್ರದ ರಣರಂಗವಾಗುವ ಎಲ್ಲಾ ಸಾಧ್ಯತೆಗಳೂ ಇವೆ. ರಶ್ಯಾವೇ ಫಿನ್ ಲ್ಯಾಂಡ್ ಮೇಲೆ ಆಕ್ರಮಣ ಮಾಡಬೇಕೆಂದಿಲ್ಲ. ಎಲ್ಲೇ ಇರಲಿ ಯಾವುದೇ ನಾಟೋ ದೇಶದ ಮಿಲಿಟರಿ ಕಾರ್ಯಾಚರಣೆಯ ಫಲವನ್ನು ಫಿನ್ ಲ್ಯಾಂಡ್ ಉಣ್ಣಬೇಕಾಗಬಹುದು. ಇವೆಲ್ಲ ಈಗಾಗಲೇ ಇರುವ ಶಸ್ತ್ರಾಸ್ತ್ರ ಪೈಪೋಟಿಯನ್ನು ಇನ್ನಷ್ಟು ತೀವ್ರಗೊಳಿಸಬಹುದು. ಜಗತ್ತಿನಲ್ಲಿ ಅದರಲ್ಲೂ ಯುರೋಪಿನಲ್ಲಿ ಅಣ್ವಸ್ತ್ರ ಯುದ್ಧದ ಅಪಾಯ ಹಿಂದೆಂದಿಗಿಂತಲೂ ಹೆಚ್ಚಾಗಲಿದೆ. ಹೀಗೆಂದು ಯುರೋಪಿನ ಶಾಂತಿ ಚಳುವಳಿ ಮತ್ತು ಎಡ ಶಕ್ತಿಗಳು ಪ್ರಚಾರ ಮಾಡುತ್ತಿವೆ.

ಯು.ಎಸ್ ನ ಜಾಗತಿಕ ಅಧಿಪತ್ಯ ಮತ್ತು ಅದರ ಅಸ್ತ್ರವಾದ ನಾಟೋ ಕೂಟಕ್ಕೆ ಸವಾಲು ಹಾಕುವುದು, ಅದನ್ನು ದುರ್ಬಲಗೊಳಿಸಿ ಬಯಲು ಮಾಡುವುದು, ಉಕ್ರೇನ್ ಯುದ್ಧದ ರಶ್ಯನ್ ಸರಕಾರದ ಉದ್ದೇಶವಾಗಿದ್ದರೆ ಅದು ಬ್ಯೂಮರಾಂಗ್ ಆಗಿದೆ ಎಂದು ಹೇಳಬಹುದು. ಒಂದು ಕಡೆ ನಾಟೋ ಕೂಟದ ಈಗಿನ ಸದಸ್ಯರನ್ನು ಈ ಯುದ್ಧ ಹತ್ತಿರ ತಂದಿದೆ. ಅದರ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ಸಹಾಯ ಮಾಡಿದೆ. ನಾಟೋ ಕೂಟದ ಒಳಗಿದ್ದೂ ಯು.ಎಸ್ ಅಧಿಪತ್ಯಕ್ಕೆ ಸವಾಲು ಹಾಕುತ್ತಿದ್ದ, ರಶ್ಯಾ ಯುರೋಪಿಗೆ ಅಪಾಯಕಾರಿ ಎಂಬ ಅಭಿಪ್ರಾಯಕ್ಕೆ ಪ್ರತಿರೋಧ ವ್ಯಕ್ತಪಡಿಸುತ್ತಿದ್ದ ಜರ್ಮನಿ, ಫ್ರಾನ್ಸ್ ನಂತಹ ದೇಶಗಳನ್ನು ಅದು ದುರ್ಬಲಗೊಳಿಸಿದೆ. ಇನ್ನೊಂದು ಕಡೆ ಸ್ವೀಡನ್, ಫಿನ್ ಲ್ಯಾಂಡ್ ಗಳು ನಾಟೋ ಸದಸ್ಯತ್ವಕ್ಕೆ ಅರ್ಜಿ ಹಾಕುವ ಕೆಲವೇ ತಿಂಗಳ ಹಿಂದೆ ಕಲ್ಪಿಸಲೂ ಅಸಾಧ್ಯವಾದದ್ದನ್ನು ಸಾಧ್ಯ ಮಾಡಿದೆ. ಮತ್ತೊಂದು ಕಡೆ ನಾಟೋ ಕೂಟದ ವಿರುದ್ಧ ಸತತವಾಗಿ ಪ್ರಚಾರ ಮಾಡುತ್ತಿದ್ದ ಶಾಂತಿ ಚಳುವಳಿಯ ಸ್ಥಿತಿಯನ್ನೂ ದುರ್ಬಲಗೊಳಿಸಿದೆ.

ಹಾಗಾಗಿ ನಾಟೋ ಸದಸ್ಯತ್ವಕ್ಕೆ ಸ್ವೀಡನ್, ಫಿನ್ ಲ್ಯಾಂಡ್ ಅರ್ಜಿ, ಯುರೋಪಿನ ಏಕೆ ಇಡೀ ಜಗತ್ತಿನ ಭದ್ರತೆ, ಶಾಂತಿಗಳ ಮೇಲೆ ತೀವ್ರ ಪ್ರತಿಕೂಲ ಪರಿಣಾಮ ಬೀರಬಲ್ಲ ಮಹತ್ವದ ಆತಂಕಕಾರಿ ಬೆಳವಣಿಗೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE MAY 30-JUNE 5, 2022 Price: Rs. 10/- Date of Publication: 27 MAY 2022 RNI No. KARKAN /2006/17926 Posted on 30-05-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2







ಧರ್ಮದ ಹೆಸರಿನಲ್ಲಿ ದ್ವೇಷ ಬಿತ್ತುತ್ತಾರೆ ಎಚ್ಚರ – ಬೃಂದಾ ಕಾರಟ್

ಮಹಿಳಾ ಕೃಷಿ ಕೂಲಿಕಾರರ ರಾಜ್ಯ ಸಮಾವೇಶ

ಇಂದು ಭಾರತ ದೇಶದಲ್ಲಿ, ಕರ್ನಾಟಕ ರಾಜ್ಯದಲ್ಲಿ ಧರ್ಮದ ಹೆಸರಿನಲ್ಲಿ ದ್ವೇಷವನ್ನು ಬಿತ್ತಿ ಬೆಳೆಯಲಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳಾ ಕೃಷಿ ಕೂಲಿಕಾರರು ಅತಿ ಹೆಚ್ಚು ಸಂಕಷ್ಟಗಳಿಗೆ ತುತ್ತಾಗುತ್ತಾರೆ. ಯಾಂತ್ರೀಕರಣ ಹೆಚ್ಚಾಗುತ್ತಿದ್ದು ಕೃಷಿ ಕೂಲಿಕಾರ ಮಹಿಳೆಯರಿಗೆ ಮೊದಲಿನಂತೆ ಹೊಲ ಗದ್ದೆಗಳಲ್ಲಿ ಕೆಲಸ ಸಿಗುವುದಿಲ್ಲ. ಹೊಟ್ಟೆ ಪಾಡಿಗಾಗಿ ಮಕ್ಕಳನ್ನು, ವೃದ್ಧರನ್ನು ಮನೆಯಲ್ಲಿಯೇ ಬಿಟ್ಟು ಕೂಲಿಕಾರ ಮಹಿಳೆಯರು ಸಹ ಪುರುಷರೊಂದಿಗೆ ವಲಸೆ ಹೋಗುವುದು ಹೆಚ್ಚಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಸದಸ್ಯರೂ ಮಾಜಿ ರಾಜ್ಯ ಸಭಾ ಸದಸ್ಯರೂ ಆಗಿರುವ ಬೃಂದಾ ಕಾರಟ್ ಕಳವಳ ವ್ಯಕ್ತಪಡಿಸಿದರು. ಅವರು ಶಹಾಪುರದ ಸಿಪಿಎಸ್ ಶಾಲಾ ಮೈದಾನದಲ್ಲಿ ಮಹಿಳಾ ಕೃಷಿಕೂಲಿಕಾರರ 4ನೇ ರಾಜ್ಯ ಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಮಹಿಳೆಯರನ್ನು ವಿಶೇಷವಾಗಿ ಬಾಧಿಸುತ್ತಿರುತ್ತದೆ. ಹೆಚ್ಚುತ್ತಿರುವ ಮನೆ ಬಾಡಿಗೆ, ದುಬಾರಿಯಾಗುತ್ತಿರುವ ಮಕ್ಕಳ ಶಿಕ್ಷಣ, ಸಹನೆ ಮೀರುತ್ತಿರುವ ಆರೋಗ್ಯದ ಖರ್ಚು ಮೊದಲಾದವುಗಳು ಬಡವರ ಬದುಕನ್ನು ಹೆಚ್ಚು ಹೆಚ್ಚು ಅಸಹನೀಯಗೊಳಿಸಿದೆ ಎಂದು ಬೃಂದಾ ಕಾರಟ್ ಖೇದ ವ್ಯಕ್ತಪಡಿಸಿದರು.



ಮಲ್ಲಮ್ಮ ಕೋಡ್ಲಿ, ಸಂಚಾಲಕಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಯಾಗಿದ್ದರೆ ಮಹಿಳಾ ಕೂಲಿಕಾರರಿಗೆ, ಅವರ ಕುಟುಂಬಗಳಿಗೆ ಸಾಕಷ್ಟು ಪ್ರಯೋಜನ ಆಗುತ್ತಿತ್ತು. ಆದರೆ ಕೇಂದ್ರ ಬಿಜೆಪಿ ಸರ್ಕಾರ ಯೋಜನೆಯನ್ನು ಬಲಪಡಿಸುವ ಬದಲಾಗಿ ಮೋದಿ ಸರ್ಕಾರ ಹಂತ ಹಂತವಾಗಿ ಯೋಜನೆಯನ್ನು ಸತ್ವಹೀನ ಗೊಳಿಸಲು ಹೊರಟಿದೆ. ಪ್ರತಿ ವರ್ಷದ ಬಜೆಟ್‌ನಲ್ಲಿ ಹೆಚ್ಚು ಹೆಚ್ಚು ಅನುದಾನವನ್ನು ಈ ಯೋಜನೆಗೆ ತೆಗೆದಿಡುವ ಬದಲು ಅನುದಾನದ ಮೊತ್ತವನ್ನು ಕಡಿಮೆ ಮಾಡುತ್ತಾ ಬರಲಾಗುತ್ತದೆ. ವರ್ಷದಲ್ಲಿ 100 ದಿನಗಳ ಬದಲಾಗಿ 200 ದಿನ ಕೆಲಸ ಕೊಡಬೇಕೆಂದೂ ದಿನ ಒಂದರ ಕೂಲಿ ಕನಿಷ್ಠ 600 ರೂ. ಆಗಬೇಕೆಂದು ದೇಶಾದ್ಯಂತ ಎಲ್ಲಾ ಕೃಷಿ ಕೂಲಿಕಾರರ ಬೇಡಿಕೆಯಾಗಿದ್ದರೂ ಮತ್ತು ಇಂದಿನ ಬೆಲೆ ಏರಿಕೆಯನ್ನು ಎದುರಿಸಲು ಅದು ಅಗತ್ಯವೂ ಆಗಿದ್ದರು ಕೇಂದ್ರಸರ್ಕಾರ ಅದನ್ನು ಬಲಪಡಿಸಲು ಮುಂದಾಗುತ್ತಿಲ್ಲ.

ಬಡವರ ಗಮನವನ್ನು ಅವರ ಬದುಕಿನ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯಲು ಜನರ ನಡುವೆ ಕೋಮು ದ್ವೇಷವನ್ನು ವ್ಯವಸ್ಥಿತವಾಗಿ ಹರಡಲಾಗುತ್ತಿದೆ ಎಂದು ಹೇಳಿದ ಅವರು ಬಡಜನರು ತಮ್ಮ ತಮ್ಮ ದಾರಿದ್ರ್ಯ, ತಮ್ಮ ಮಕ್ಕಳ ನಿರುದ್ಯೋಗದಂತಹ ಜ್ವಲಂತ ಸಮಸ್ಯೆಗಳ ಮೂಲಕ್ಕೆ ಹೋಗುವ ಬದಲು ಬಡವರನ್ನು ಹಿಂದುಗಳು, ಮುಸಲ್ಮಾನರು, ಕ್ರೈಸ್ತರು ಎಂಬ ಭೇದಗಳನ್ನು ಬಳಸಿಕೊಂಡು ಪರಸ್ಪರ ಹೊಡೆದಾಡಲು ಕುಮ್ಮಕ್ಕು ನೀಡಲಾಗುತ್ತದೆ ಎಂದರು.

ದುಡಿಯುವ ಜನ ಪರಸ್ಪರ ಗಲಭೆಗಳಲ್ಲಿ ತೊಡಗುವುದರಿಂದ ಹಾನಿ ಅನುಭವಿಸುವವರು ಬಡವರೇ ಆಗಿರುತ್ತಾರೆ. ಗಲಭೆಗಳಾದಾಗ ಅಮಾಯಕರ ರಕ್ತ ಹರಿಯುತ್ತದೆ. ಅವರ ಗುಡಿಸಲುಗಳು ಬೆಂಕಿಗೆ ಆಹುತಿಯಾಗುತ್ತವೆ. ಸುಡುವ ಬೆಂಕಿ ಯಾರು ಹಿಂದು, ಯಾರು ಮುಸ್ಲಿಂ ಎಂದು ನೋಡುವುದಿಲ್ಲ. ಗಲಭೆಗಳಾದಾಗ ಎಲ್ಲವೂ ಸ್ತಬ್ಧಗೊಳ್ಳುತ್ತದೆ. ನಿತ್ಯದ ದುಡಿಮೆ ಬಂದ್ ಆಗುತ್ತದೆ. ಎಷ್ಟೋ ಜನ ನಿರಪರಾಧಿಗಳು, ಯಾವುದೇ ತಪ್ಪು ಮಾಡದಿರುವವರು ಸಹ ಪೊಲೀಸರ ನಿರ್ದಾಕ್ಷಣ್ಯ ದಾಳಿಗೆ ತುತ್ತಾಗುತ್ತಾರೆ. ಎಷ್ಟೋ ಅಮಾಯಕ ಯುವಕರು ಸಹ ಜೈಲು ಸೇರುತ್ತಾರೆ. ಅವರು ಯಾವ ಜೈಲಿನಲ್ಲಿ ಇದ್ದಾರೆ ಎಂಬ ಮಾಹಿತಿ ಸಹ ಅವರ ಪಾಲಕರಿಗೆ ಇರುವುದಿಲ್ಲ.

ಬಿಜೆಪಿ ಒಂದು ಮತೀಯವಾದಿ ಪಕ್ಷ. ಅಲ್ಪಸಂಖ್ಯಾತರನ್ನು ಬೆದರಿಸಿ ರಾಜಕಾರಣ ಮಾಡುವುದು ಅವರ ಕಾರ್ಯ ವೈಖರಿ. ಅವರು ಧರ್ಮದ ಹೆಸರಿನಲ್ಲೇ ಹಿಂಸಾಚಾರ ಮಾಡುತ್ತಾರೆ. ಈ ಹಿಂದುತ್ವ ಕೋಮುವಾದಿಗಳು ದೇಶಕ್ಕೆ ಅಪಾಯಕಾರಿ. ಅವರು ಅಧಿಕಾರದಲ್ಲಿದ್ದಾರೆ. ಆದ್ದರಿಂದ ಅವರಿಂದ ಅಪಾಯ ಹೆಚ್ಚಾಗಿದೆ. ಅವರಿಂದ ಪ್ರಚೋದಿತರಾದ ಇತರ ಕೋಮಿನವರು ಸಹ ಅಪಾಯಕಾರಿ ದಾರಿಯಲ್ಲಿ ಸಾಗುತ್ತಾರೆ. ಮುಗ್ಧರಲ್ಲಿ ಸಹಜವಾಗಿ ಇರುವ ಧಾರ್ಮಿಕತೆಯ ದುರುಪಯೋಗ ಮಾಡುತ್ತಾರೆ. ದುಡಿಯುವ ಜನ, ಬಡ ಕೃಷಿ ಕೂಲಿಕಾರರು ಮತಧರ್ಮದ ಬೇದವನ್ನು ತೊಡೆದು ಹಾಕಿ ನಮ್ಮ ಬದುಕಿನ ಸಮಸ್ಯೆಗಳಿಗಾಗಿ ಒಂದಾಗಿ ಹೋರಾಡುವುದೇ ಕೋಮುವಾದಿ ಅಪಾಯವನ್ನು ತೊಲಗಿಸುವ ದಾರಿ. ನಾವೆಲ್ಲರೂ ಒಂದಾಗಬೇಕು ಎಂದು ಅವರು ಕಳಕಳಿಯಿಂದ ಕೇಳಿಕೊಂಡರು.

ಆರಂಭದಲ್ಲಿ ಮಹಿಳಾ ಕೃಷಿ ಕೂಲಿಕಾರರ ರಾಜ್ಯ ಉಪಸಮಿತಿಯ ಸಂಚಾಲಕಿ ಮಲ್ಲಮ್ಮ ಕೋಡ್ಲಿ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ನಿತ್ಯಾಂನಂದ ಸ್ವಾಮಿ ಪ್ರಾಸ್ತಾವಿಕ ಮಾತುಗಳನ್ನು ಹೇಳಿದ ನಂತರ ಸಮಾವೇಶವನ್ನು ಬೃಂದಾ ಕಾರಟ್ ಉದ್ಘಾಟಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ರೈತ ಮುಖಂಡರಾದ ಚನ್ನಪ್ಪ ಆನೆಗುಂದಿ, ಮಂಡ್ಯದ ಸರೋಜಮ್ಮ, ಕುಂದಾಪುರದ ನಾಗರತ್ನ ನಾಡ, ಗಂಗಾವತಿಯ ಬಾಗಮ್ಮ ಹಿರೇಡಕನಕಲ್, ಶಹಾಪುರದ ರಂಗಮ್ಮ ಕಟ್ಟಿಮನಿ, ಅನಿತಾ ಹಿರೇಮಠ, ಬೀದರ್‌ನ ಅಂಬುಬಾಯಿ ಮಾಳಗೆ, ಮುಮತಾಜ್ ಹರಕೇರ, ಸುನಂದ ಹಿರೇಮಠ ಮೊದಲಾದವರು ಮಾತನಾಡಿದರು. ದಾವಲ್‌ಸಾಬ್ ನದಾಫ್ ನಿರೂಪಣೆ ಮಾಡಿದರು. ಅಧ್ಯಕ್ಷತೆ ವಹಿಸಿದ್ದ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಕೆ. ನೀಲಾ ರವರ ಅಧ್ಯಕ್ಷೀಯ ಭಾಷಣದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಮರುದಿನ ಮಹಿಳಾ ಪ್ರತಿನಿಧಿಗಳ ಅಧಿವೇಶನ ಯಶಸ್ವಿಯಾಗಿ ನಡೆಯಿತು. 28 ಸದಸ್ಯರಿರುವ ಹೊಸ ಉಪಸಮಿತಿಯನ್ನು ಆಯ್ಕೆ ಮಾಡಲಾಯಿತು. ನೂತನ ಉಪಸಮಿತಿಯ ಸಂಚಾಲಕಿಯಾಗಿ ಕಲಬುರ್ಗಿಯ ಮಲ್ಲಮ್ಮ ಕೋಡ್ಲಿ ಪುನರಾಯ್ಕೆಯಾದರು.



ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕೆ. ನೀಲಾ ರವರು

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**